**TEXT PROBLEM WITHIN THE BOOK ONLY**

UNIVERSAL
LIBRARY
OU_202228
UNIVERSAL
LIBRARY

**OSMANIA UNIVERSITY LIBRARY**

Call No. K81.6 K94Ki  Accession No. K4713

Author [illegible]

Title [illegible] 1955

This book should be returned on or before the last marked below.

ಕನ್ನಡ ಕವಿಕಾವ್ಯಮಾಲೆ–೨೪

ಕನ್ನಡ

# ಕಿರಾತಾರ್ಜುನೀಯ

(ಭಾರವಿಯ ಸಂಸ್ಕೃತ ಮಹಾಕಾವ್ಯದ ಕನ್ನಡ ಪದ್ಯಾನುವಾದ)

(ಸರ್ಗ ೧–೬)

ಪೀಠಿಕೆ ಮತ್ತು ಟಿಪ್ಪಣಿಗಳೊಡನೆ

ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್‌.ಡಿ.
ಸಂಸ್ಕೃತದ ಪ್ರಧಾನಾಧ್ಯಾಪಕರು
ಕೆನರಾ ಕಾಲೇಜು, ಕುಮಟಾ (ಉ. ಕ.)
(ಕರ್ಣಾಟಕ ವಿಶ್ವವಿದ್ಯಾನಿಲಯ)

1955

ಶಾರದಾ ಮಂದಿರ
೫೭೮, ಕೃಷ್ಣರಾಜವನಂ, ಮೈಸೂರು.

*Editor and Publisher*
**H. M. Shankar Narayan Rao, M.A.**
*Assistant Professor*
*and Head of the Department of Kannada*
*Sarada Vilas College, Mysore.*

ಮೊದಲ ಮುದ್ರಣ ೧೯೫೫

ಎಲ್ಲ ಹಕ್ಕುಗಳು ಲೇಖಕರವು

ಬೆಲೆ : ಸಾಧಾರಣ ಪ್ರತಿ ೨–೪–೦
ಕ್ಯಾಲಿಕೊ ಪ್ರತಿ ೩–೮–೦

ಮುದ್ರಕರು :
ಚೇತನ ಮುದ್ರಾಲಯ
ರಮಾವಿಲಾಸ ಅಗ್ರಹಾರ, ಮೈಸೂರು.

# ಅರಿಕೆ

ಸಂಸ್ಕೃತ ಲಕ್ಷಣಗ್ರಂಥಗಳ ಅನುವಾದಕಾರ್ಯದಲ್ಲಿ ಉದ್ಯುಕ್ತನಾದ ನನಗೆ ಲಕ್ಷ್ಯಗಳ ಸೌಂದರ್ಯಗ್ರಹಣ ಪ್ರಥಮಕರ್ತವ್ಯವಾಗಿ ಪರಿಣಮಿಸಿ, ಆಗೊಂದು ಈಗೊಂದು ಸುಭಾಷಿತಗಳನ್ನು ಸ್ವಸಂತೋಷಕ್ಕಾಗಿ ಕನ್ನಡಿಸಿಕೊಳ್ಳುತ್ತ ಬಂದೆ. ಕಡೆಗೆ ಅಷ್ಟರಿಂದ ತೃಪ್ತಿಯಾಗದೆ ಸಂಸ್ಕೃತ 'ಮಹಾಕಾವ್ಯ' ಸಂಪ್ರದಾಯದ ಪ್ರಮುಖ ಪ್ರತಿನಿಧಿಯಾಗಿರುವ ಭಾರವಿಯ ಕಾವ್ಯದಿಂದ ಒಂದೆರಡು ಸರ್ಗಗಳನ್ನಾದರೂ ಕನ್ನಡಿಸಬೇಕೆಂದು ಪ್ರಯತ್ನಿಸಿದೆ. ದೈವಾನುಗ್ರಹ, ಹಿರಿಯರ ಉತ್ತೇಜನ, ಮಿತ್ರರ ವಿಶ್ವಾಸಗಳಿಂದ ಮೊದಲನೆಯ ಆರು ಸರ್ಗಗಳ ಅನುವಾದ ಮುಗಿಯಿತು. ಅದನ್ನೀಗ ಸಹೃದಯರ ಕೈಯಲ್ಲಿಡುವ ಸಾಹಸ ಮಾಡುತ್ತಿದ್ದೇನೆ. 'ಭಾಷಾಂತರದ ಕೆಲಸ ಸಣ್ಣದಲ್ಲ; ಸುಲಭವೂ ಅಲ್ಲ; ನಿರರ್ಥಕವಂತೂ ಅಲ್ಲವೇ ಅಲ್ಲ' ಎಂಬ 'ಶ್ರೀ' ಯವರ ಮಾತನ್ನು ಮುಂದಿಟ್ಟುಕೊಂಡು ಬರೆದುದಾಗಿದೆ. ಆದರೆ ಮೂಲಕವಿಯ ಮಹಾಪ್ರತಿಭೆಗೆ ಎಲ್ಲಿ ದ್ರೋಹವಾಗಿದೆಯೋ ಎಂಬ ಅಂಜಿಕೆ ಮಾತ್ರ ಎಂತಹ ಭಾಷಾಂತರಕಾರನನ್ನೂ ಬಿಡತಕ್ಕುದಲ್ಲ.

ಭಾರವಿ 'ಅರ್ಥಗೌರವ' ಕ್ಕೆ ಹೆಸರಾದವನು. ಆದ್ದರಿಂದ ಗಾನಮಯವಾದ ಆತನ ಶಬ್ದ ಸೌಂದರ್ಯಕ್ಕೆ ಅನುವಾದದಲ್ಲಿ ಲೋಪ ಬಂದರೂ ಅರ್ಥಪುಷ್ಟಿಗೆ, ರಸಪ್ರತೀತಿಗೆ, ಕುಂದುಬಾರದಿದ್ದರೆ ಅದಕ್ಕಿಂತ ಹೆಚ್ಚಿನ ಸಿದ್ಧಿಯನ್ನು ಅನುವಾದಕನು ಬಯಸಲಾರ. ಸಂಸ್ಕೃತದ ಮಹಾಕಾವ್ಯಗಳ ನಡುವೆ 'ಪಂಚಪಾಷಾಣ' ಗಳೆಂದೂ, 'ಬೃಹತ್ತ್ರಯೀ' ಎಂದೂ ಪಂಡಿತರು ಗೌರವಿಸುವ ಗ್ರಂಥಗಳಲ್ಲಿ ಕಿರಾತಾರ್ಜುನೀಯವು ಮೊದಲನೆಯದು. ಮೊದಲು, ಇಲ್ಲಿ ಶ್ಲೋಕಗಳಿಗೆ ಅನ್ವಯವಾಗುವುದೇ ವಾಚಕನ ವ್ಯುತ್ಪತ್ತಿಯನ್ನು ಪರೀಕ್ಷಿಸುವಂತಿರುತ್ತದೆ. ಕನ್ನಡದಲ್ಲಿ ಈ ಬಿಗಿಯನ್ನು ತಪ್ಪಿಸುವ ಪ್ರಯತ್ನಮಾಡಿರುವೆನಾದರೂ ಶೈಥಿಲ್ಯದ ಅತಿಗೆ ಅವಕಾಶ ಕೊಟ್ಟಿಲ್ಲವೆಂದು ನಂಬಿದ್ದೇನೆ. ಇನ್ನು ಅನುವಾದದ ಗುಣದೋಷ ನಿರ್ಣಯ ಸಹೃದಯರಿಗೇ ಸೇರಿದ್ದು. ಭಾರವಿಯ ಪ್ರೋಜ್ವಲ ಕಾವ್ಯರತ್ನದ ಒಂದೆ

ರಡು ಕಿರಣಗಳು ಕನ್ನಡದಲ್ಲಿ ಹೊಳೆದರೂ ಅದರಿಂದಲೇ ನನಗೆ ಸಮಾಧಾನ. ಕವಿಕಾವ್ಯ ಪರಿಚಯಕ್ಕೆ ಅನುಕೂಲಿಸುವ ಪೀಠಿಕೆಯನ್ನು ಗ್ರಂಥದ ಆದಿಯಲ್ಲಿಯೂ, ಅಲಂಕಾರಾದಿಗಳನ್ನು ವಿವರಿಸುವ ಟಿಪ್ಪಣಿಗಳನ್ನು ಕಡೆಯಲ್ಲಿಯೂ ಸೇರಿಸಲಾಗಿದೆ.

ಕಾದಂಬರೀ ಪ್ರಕಾಶನದ ಹುಚ್ಚು ಹೊಳೆ ನಾಡನ್ನು ಕೊಚ್ಚುತ್ತಿರುವಾಗ ಅದನ್ನು ತಡೆಯುವ ಸಾಹಸಮಾಡಿ ಚಿರಸಾಹಿತ್ಯದ ಉತ್ತಮಗ್ರಂಥಗಳ ಪ್ರಕಾಶನಕ್ಕೆ ಕೈಹಚ್ಚಿರುವ ನನ್ನ ಆಪ್ತಮಿತ್ರರಾದ ಶ್ರೀ ಎಚ್. ಎಂ. ಶಂಕರನಾರಾಯಣರಾಯರಿಗೆ ಕೃತಜ್ಞತೆಯನ್ನು ಸಲ್ಲಿಸಿ ಅವರ ಕಾರ್ಯಕ್ಕೆ ಯಶಸ್ಸನ್ನು ಕೋರುತ್ತೇನೆ. ನನ್ನ ಇತರ ಗ್ರಂಥಗಳಂತೆ ಇದೂ ಅವರ ಕನ್ನಡರಸಿಕತೆಯಿಂದ ಭಾವಿತವಾಗಿದೆ; ಪ್ರಭಾವಿತವೂ ಆಗಿದೆಯೆಂದು ಬರೆಯದಿದ್ದರೆ ಕರ್ತವ್ಯಲೋಪವಾದೀತು. ನಾನು ಬರೆಯುತ್ತಿದ್ದ ಹಾಗೆ ಕೆಲವು ಭಾಗಗಳನ್ನೋದಿ ಸಲಹೆಗಳನ್ನಿತ್ತ ಪ್ರೊ. ತೀ. ನಂ. ಶ್ರೀ., ಪ್ರೊ. ಕೆ. ಜಿ. ಶಾಸ್ತ್ರಿ ಮತ್ತು ಪ್ರೊ. ಎಲ್. ಆರ್. ಹೆಗಡೆಗಳನ್ನಿಲ್ಲಿ ನೆನೆಯುತ್ತೇನೆ. ಎಲ್ಲಕ್ಕಿಂತಲೂ ಹೆಚ್ಚಾಗಿ ನನ್ನ ಅಧ್ಯಯನ ಲೇಖನಗಳಿಗೆಲ್ಲ ಮೂರ್ತಿವೆತ್ತ ಅನುಕೂಲದೈವದಂತೆ ಆಶ್ರಯದಾತರಾಗಿರುವ ಪ್ರಿನ್ಸಿಪಾಲ್ ಎಲ್. ಎಸ್. ಕಾಮತ, ಎಂ. ಎ., ಅವರ ಉಪಕಾರ ಅವಿಸ್ಮರಣೀಯ.

ಕೆನರಾ ಕಾಲೇಜು<br>ಕುಮಟಾ<br>೫—೭—೧೯೫೫

**ಕೆ. ಕೃಷ್ಣಮೂರ್ತಿ.**

*   *   *   *   *

ಭಾರವಿಕವಿಯ ಕೃತಿಯ ಈ ಕನ್ನಡದ ಅನುವಾದವನ್ನು ನನ್ನ ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿಯಿತ್ತ ನನ್ನ ಪ್ರಿಯಮಿತ್ರರಾದ ಡಾ. ಕೆ. ಕೃಷ್ಣಮೂರ್ತಿಯವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಸ್ವತಂತ್ರಕೃತಿಗಳ ರಚನೆಯಿಂದ ಒಂದು ಸಾಹಿತ್ಯ ಬೆಳೆದು ಮುಂದುವರೆಯುವಂತೆ, ಅನುವಾದಗಳಿಂದಲೂ ಅದು ಬೆಳೆದು ಬರಲು ಸಾಧ್ಯ. ಪ್ರಾಚೀನತೆ ಮತ್ತು ಗುಣಗಳಲ್ಲಿ ಮೇಲಾದ ಸಾಹಿತ್ಯದ ಕೃತಿರತ್ನಗಳನ್ನು ಪ್ರತಿಯೊಂದು ಯುಗದಲ್ಲಿಯೂ ಕವಿಗಳು ತಮ್ಮ ನುಡಿಯಲ್ಲಿ ಅನುವಾದ

ಗಳ ಮೂಲಕ ಮೂಡಿಸಿ ಜನತೆಯ ಮುಂದಿಡಲು ಪ್ರಯತ್ನಿಸುತ್ತಾರೆ. ಆಯಾ ಕಾಲದ ಸಾಹಿತ್ಯಾಭಿರುಚಿಯ ಸೂಚಕಗಳಾಗಿ ಈ ಅನುವಾದಗಳು ಗದ್ಯದಲ್ಲಿಯೋ ಪದ್ಯದಲ್ಲಿಯೋ ಇರಬಹುದು. ಬೆಳೆಯುತ್ತಿರುವ ಸಾಹಿತ್ಯದಲ್ಲಿ ಈ ಅನುವಾದ ಕಾರ್ಯ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಿರುತ್ತದೆ. ಇಂಗ್ಲಿಷ್ ಸಾಹಿತ್ಯದ ಸಾರವತ್ತಾದ ಒಂದು ಭಾಗವೇ ಈ ಅನುವಾದಗಳಿಂದ ತುಂಬಿಹೋಗಿದೆ. ಗ್ರೀಕ್ ಲ್ಯಾಟಿನ್ ಭಾಷೆಗಳನ್ನರಿಯದ ಷೇಕ್ಸ್‌ಪಿಯರ್ ಮಹಾಕವಿಗೆ ಈ ಅನುವಾದಗಳಿಂದ ಪರಮಪ್ರಯೋಜನವಾಯಿತೆಂಬ ಅಂಶ ಆ ಸಾಹಿತ್ಯವನ್ನೋದಿದವರಿಗೆ ಸುವ್ಯಕ್ತವಾಗಿದೆ. ಕನ್ನಡ ಸಾಹಿತ್ಯವೂ ಈ ಸೂತ್ರಕ್ಕೆ ಹೊರತಾಗಿಲ್ಲ. ನೇರವಾಗಿಯೋ ಭಾಗಭಾಗವಾಗಿಯೋ ಇಲ್ಲವೆ ಸಂಗ್ರಹವಾಗಿಯೋ ಕಂಡುಕಾಣದಂತೆಯೋ ರಾಮಾಯಣ ಮಹಾಭಾರತ ಕಾಳಿದಾಸನ ಕೃತಿಗಳು ಇವೇ ಮೊದಲಾದ ಸಂಸ್ಕೃತ ಸಾಹಿತ್ಯದ ಉತ್ಕೃಷ್ಟಗ್ರಂಥಗಳು ಯುಗಯುಗಗಳಲ್ಲಿಯೂ ಕನ್ನಡದಲ್ಲಿ ಇಳಿದು ಬಂದವು. ಆದರೆ ಅರ್ಥಗೌರವಕ್ಕೆ ಹೆಸರಾದ ಭಾರವಿ ಡಾ. ಕೃಷ್ಣಮೂರ್ತಿಗಳಂತಹ ಸುಸಮರ್ಥರಾದ ಅನುವಾದಕರ ಮೂಲಕ ಕನ್ನಡಕ್ಕೆ ಅವತರಿಸುವ ಪುಣ್ಯವನ್ನು ಪಡೆಯಲು ಇಂದಿನವರೆಗೂ ಕಾಯಬೇಕಾಯಿತು.

ಕನ್ನಡ ಕವಿಗಳು—ಅದರಲ್ಲೂ ಹಳಗನ್ನಡ ಕವಿಗಳು—ಸಂಸ್ಕೃತಭಾಷೆಯಲ್ಲಿ ಉದ್ದಾಮಪಂಡಿತರಾಗಿದ್ದು ಆ ಸಾಹಿತ್ಯದ ಮಹಾಕವಿಗಳ ಕೃತಿಗಳನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದರೂ ಸಂಸ್ಕೃತಸಾಹಿತ್ಯದ ಪಂಚಮಹಾಕಾವ್ಯಗಳಲ್ಲಿ ಒಂದಾದ ಭಾರವಿಯ ಕೃತಿಯನ್ನು ಕನ್ನಡಿಸುವುದರ ಕಡೆಗೆ ಅವರ ಗಮನ ಹರಿಯದಿದ್ದುದು ಆಶ್ಚರ್ಯವೇ ಸರಿ. ಆದರೂ ಭಾರವಿ ಕನ್ನಡ ಸಾಹಿತ್ಯದ ಒಬ್ಬಿಬ್ಬರ ಮನಸ್ಸನ್ನಾದರೂ ಸೆರೆಹಿಡಿದಿದ್ದನೆನ್ನುವುದಕ್ಕೆ ಅಲ್ಲಲ್ಲೇ ಕುರುಹುಗಳಿವೆ. ಗಂಗರ ದೊರೆಯಾದ ದುರ್ವಿನೀತನು ಭಾರವಿಯ ಕಿರಾತಾರ್ಜುನೀಯದ ಹದಿನೈದನೆಯ ಸರ್ಗಕ್ಕೆ ಕನ್ನಡದಲ್ಲಿ ಟೀಕೆಯನ್ನು ಬರೆದಿದ್ದನಂತೆ! ನೃಪತುಂಗನ ಮತದಂತೆ 'ಸಮಸ್ತಜನತಾಹೃದ್ಯ'ವಾದ ಪದ್ಯರಚನೆಯಲ್ಲಿ ಭಾರವಿಯೊಬ್ಬ 'ಅಮಳ ಕವಿವೃಷಭ' ನಂತೆ! ತನ್ನ ಭಾರತದ ಏಳು ಮತ್ತು ಎಂಟನೆಯ ಆಶ್ವಾಸಗಳಲ್ಲಿ ಕಿರಾತಾರ್ಜುನೀಯ ಪ್ರಸಂಗದಲ್ಲಿ ಪಂಪನು ಭಾರವಿಯ ಕಾವ್ಯದಿಂದ ಎಷ್ಟರಮಟ್ಟಿಗೆ ಉಪ

ಕೃತನಾಗಿರುವನೆಂಬ ಅಂಶ ವೇದ್ಯವಾಗುತ್ತದೆ. ಈಗ ಉಪಲಬ್ಧವಾಗಿರದ ಕೇಶಿರಾಜನ ಗ್ರಂಥಗಳಲ್ಲಿ ಒಂದಾದ 'ಕಿರಾತ' ಭಾರವಿಯ ಗ್ರಂಥದ ಅನುವಾದವಿರಬಹುದೇ? ಕುಮಾರವ್ಯಾಸ ಷಡಕ್ಷರಿಗಳಲ್ಲಿ ಭಾರವಿಯ ಪ್ರಭಾವವಿರಬಹುದೇ ಎಂಬ ಅಂಶವನ್ನು ಇನ್ನೂ ಪರಿಶೀಲಿಸಬೇಕಾಗಿದೆ. ಈ ಕಾರ್ಯಕ್ಕೆ ಈ ರೀತಿಯ ಅನುವಾದಗಳಿಂದ ತುಂಬ ಪ್ರಯೋಜನ ವುಂಟು. ವಿಶ್ವಸಾಹಿತ್ಯದ ನೆರಳಿನಲ್ಲಿ ನಮ್ಮ ಸಾಹಿತ್ಯದ ಕೃತಿಗಳನ್ನು ಬೆಲೆಕಟ್ಟುತ್ತಿರುವ ಈ ಕಾಲದಲ್ಲಿ ಮನಸ್ಸಂಸ್ಕಾರವನ್ನು ಪಡೆಯುವುದಕ್ಕೂ, ಸಾಹಿತ್ಯಾಭಿರುಚಿಯನ್ನು ಹೆಚ್ಚಿಸಿಕೊಳ್ಳುವುದಕ್ಕೂ ಅನುಕೂಲವಾದ ಈ ಮಹಾಕೃತಿಯ ಅನುವಾದವನ್ನು ಒದಗಿಸಿಕೊಟ್ಟುದಕ್ಕಾಗಿ ಡಾ. ಕೃಷ್ಣ ಮೂರ್ತಿಯವರಿಗೆ ಕನ್ನಡಿಗರು ಕೃತಜ್ಞರು.

ಭಾರವಿಯನ್ನು ಕನ್ನಡಿಸಲು ಡಾ. ಕೃಷ್ಣಮೂರ್ತಿಗಳಿಗಿಂತ ಅರ್ಹರು ಇನ್ನಾರಿದ್ದಾರೆ? ಅವರು ಸಂಸ್ಕೃತ ಕನ್ನಡ ಭಾಷೆಗಳಲ್ಲಿ ತುಂಬು ಪಾಂಡಿತ್ಯ ವುಳ್ಳವರಾಗಿದ್ದು, ಮೈಸೂರು ಬೊಂಬಾಯಿ ವಿಶ್ವವಿದ್ಯಾನಿಲಯಗಳ ಉತ್ತ ಮೋತ್ತಮವಾದ ಪ್ರಶಸ್ತಿಯನ್ನು ಪಡೆದು, ಹತ್ತಾರು ವರ್ಷಗಳ ಕಾಲ ಸಂಸ್ಕೃತಭಾಷೆಯ ಶಾಸ್ತ್ರಸಾಹಿತ್ಯಗಳನ್ನು ಮೈಸೂರು ಕರ್ಣಾಟಕ ಮತ್ತು ಬೊಂಬಾಯಿ ವಿಶ್ವವಿದ್ಯಾಪೀಠಗಳಲ್ಲಿ ಉಚ್ಚತರಗತಿಗಳಿಗೆ ಪಾಠ ಹೇಳಿ, ಆನಂದವರ್ಧನ, ಭಾಮಹ, ದಂಡಿ, ಮಮ್ಮಟ, ಭಾಸರ ಕೃತಿಗಳನ್ನು ಕನ್ನಡಿಸಿ ಅನುಭವ, ಅರ್ಹತೆ ಹಾಗೂ ನಾಡಿನ ಹಿರಿಯ ವಿದ್ವಾಂಸರ ಮೆಚ್ಚಿಗೆಯನ್ನು ಪಡೆದಿದ್ದಾರೆ. ಈಗ ಇವರು ಭಾರವಿಯನ್ನು ಕನ್ನಡಿಸಿರುವುದು ತುಂಬ ಸಂತೋಷದ ಸಂಗತಿ. ಮೂಲದಲ್ಲಿ ಇದ್ದುದನ್ನು ಬಿಡದೆ, ಹೊಸದನ್ನು ಸೇರಿಸದೆ, ಇಂಪಾದ ಹುರುಳಾದ ಕನ್ನಡದಲ್ಲಿ, ಬಗೆ ಬಗೆಯ ಛಂದಸ್ಸಿನಲ್ಲಿ ಭಾರವಿಯ ಕೃತಿಯನ್ನು ಕನ್ನಡಿಸಬೇಕೆಂಬುದೇ ಇವರ ಗುರಿ. ಸಮಗ್ರ ಗ್ರಂಥವೇ ವಾಚಕರ ಮುಂದಿರುವುದರಿಂದ ಈ ಅನುವಾದದ ವಿಷಯವನ್ನು ಕುರಿತು ಮತ್ತೆ ಏನನ್ನೂ ನಾನು ಹೇಳಬಯಸುವುದಿಲ್ಲ. ಗ್ರಂಥದ ಆದಿಯ ಲ್ಲಿಯೂ ಅಂತ್ಯದಲ್ಲಿಯೂ ಇರುವ ಪೀಠಿಕೆ ಟಿಪ್ಪಣಿಗಳಿಂದ ಭಾರವಿಯ ಹೃದಯವನ್ನರಿಯಲು ಹೆಚ್ಚು ಸಹಾಯವಾಗುವುದೆಂದು ನನ್ನ ನಂಬಿಕೆ.

ಇದೇನು ಹುಚ್ಚು? ನಿಮ್ಮಿಬ್ಬರದೇನು ಪರಸ್ಪರ ಪ್ರಶಂಸಾಸಂಘವೇನು

ಎಂದು ವಾಚಕರು ಕೇಳಬಹುದು. ಕ್ಷಮಿಸಬೇಕು. ಸ್ನೇಹಿತರನ್ನು ಸ್ನೇಹಿತರು ಹೊಗಳದೆ ಶತ್ರುಗಳು ಹೊಗಳುವರೇ ? ಹಿಂದೆ ಭೋಜನು ಕಾಳಿದಾಸನಿಗೆ ಪ್ರಾಣ ಸ್ನೇಹಿತನಾಗಿ ಕವಿಗಳಿಗೆ ಅಕ್ಷರಕ್ಕೆ ಲಕ್ಷವರಹಗಳನ್ನು ಕೊಡುತ್ತಿದ್ದನಂತೆ. ಕಾಳಿದಾಸಭಾರವಿಗಳಿಬ್ಬರ ಕೀರ್ತಿಗೆ ಆಶ್ರಯನೆಂದುಕೊಂಡ ರವಿಕೀರ್ತಿಗೆ ಚಕ್ರವರ್ತಿ ಎರಡನೆಯ ಪುಲಿಕೇಶಿ, ಆಶ್ರಯವನ್ನಿತ್ತನು. ಆದರೆ ಆ ಭೋಜ ಪುಲಿಕೇಶಿಗಳು ಇನ್ನಿಲ್ಲ. ಆ ಕಾಲ ಇನ್ನು ಮುಂದೆ ಕನಸಿನ ಮಾತು. ಡಾ. ಕೃಷ್ಣಮೂರ್ತಿಗಳು ಮೂವತ್ತೈದಕ್ಕೂ ಮೀರದ ಹರೆಯದಲ್ಲಿ ಇಷ್ಟೆಲ್ಲ ಕಾರ್ಯವನ್ನು ಸಾಧಿಸಿದ್ದಾರೆ. ಇಂಥವರಿಗೆ ನಾವು ಧನಕನಕವಸ್ತುವಾಹನಾದಿಗಳನ್ನು ಕೊಡಲಾಗದಿದ್ದರೂ ಒಳ್ಳೆಯ ಮಾತುಗಳನ್ನಾಡಿ ಬೆನ್ನು ತಟ್ಟೋಣ. ತೆಗಳುವುದು ಸುಲಭ. ಅದು ಬೇಡ. ಒಳ್ಳೆಯ ಕೃತಿಗಳನ್ನು ಕನ್ನಡಿಸಿದವರ ವಿಷಯದಲ್ಲಿ ನಾವು ಹೆಮ್ಮೆ ಪಟ್ಟುಕೊಂಡು ಅವರ ವಿಷಯದಲ್ಲಿ ನಾಲ್ಕು ಒಳ್ಳೆಯ ಮಾತುಗಳನ್ನಾಡೋಣ. ಒಳ್ಳೆಯ ಮಾತಿಗೆ ನಮ್ಮಲ್ಲೇನೂ ಬರವಿಲ್ಲ. ಶ್ರೀ ಕೃಷ್ಣಮೂರ್ತಿಗಳೂ ಈ ಕೃತಿಯನ್ನು ನಮ್ರತೆಯಿಂದ ಕನ್ನಡಿಗರ ಮುಂದಿಡುತ್ತಿದ್ದಾರೆ. 'ಮಣೌ ವಜ್ರ-ಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ ಮೇ ಗತಿಃ' ಎಂಬ ಕವಿಸಾರ್ವಭೌಮನ ಮಾತೇ ನನ್ನ ಮಿತ್ರರಿಗೆ ರಕ್ಷಾಕವಚವಾಗಿದೆ.

ಈ ಸಂದರ್ಭದಲ್ಲಿ ಒಂದು ಮಾತನ್ನಾಡಬಯಸುತ್ತೇನೆ. ನನ್ನ ಮಿತ್ರರಿಗೆ ಅವರ ಕೃತಿರಚನೆಯಲ್ಲಿ ಅನೇಕ ಹಿರಿಯರ, ಗುರುಗಳ, ಮಿತ್ರರ ಮೆಚ್ಚಿಗೆ ದೊರೆತಿದೆ. ಇವರಲ್ಲಿ ಪ್ರೊ. ಎ. ಆರ್. ಕೃ. ಅವರು 'ಧ್ವನ್ಯಾಲೋಕ' ವನ್ನು ಕನ್ನಡಿಸ ಹೇಳಿ ಕೃಷ್ಣಮೂರ್ತಿಗಳ ಕನ್ನಡದ ಕೃತಿರಚನೆಗೆ ಅಂಕುರಾರ್ಪಣ ಮಾಡಿದರು. ಕವಿವರ್ಯ ಪ್ರೊ. ಕುವೆಂಪು ಅವರು ಇವರ ಶಕ್ತಿಸಾಮರ್ಥ್ಯಗಳನ್ನು ಕಂಡುಕೊಂಡು ಸಂತತವಾದ ಪ್ರೋತ್ಸಾಹವನ್ನಿತ್ತಿದ್ದಾರೆ; ಕವಿಜನಾಶ್ರಯರಾಗಿದ್ದಾರೆ. ಈ ಇಬ್ಬರು ಮಹನೀಯರಿಗೆ ನಮ್ಮ ಕೃತಜ್ಞತೆ ಸಲ್ಲಬೇಕು. ಕೊನೆಯದಾಗಿ ಭಗವಂತನಲ್ಲಿ ನನ್ನ ಪ್ರಾರ್ಥನೆ ಇಷ್ಟು. ಡಾ. ಕೃಷ್ಣಮೂರ್ತಿಗಳಿಂದ ಕನ್ನಡಿಗರಿಗೆ ಅಪಾರವಾದ ಕೆಲಸವಾಗಬೇಕಾಗಿದೆ. ಆ ಕಾರ್ಯಸಾಧನೆಗೆ ಬೇಕಾಗುವ ಆಯುರಾರೋಗ್ಯ

ಗಳನ್ನೂ, ಉದಯಪರಂಪರೆಯನ್ನೂ ಕನ್ನಡಿಗರ ಅಧಿದೈವ ನಾಡಿನ ಒಳತಿಗಾಗಿ ಶ್ರೀಯುತರಿಗೆ ಅನುಗ್ರಹಿಸಲಿ.

ನನ್ನ ಮಿತ್ರರಲ್ಲಿರುವ ವಿಶ್ವಾಸದಿಂದ್ ಮಾತು ಸ್ವಲ್ಪ ಬೆಳೆಯಿತು; ಚಿಂತೆಯಿಲ್ಲ. ಇನ್ನು ವಿರಮಿಸುತ್ತೇನೆ.

ಶಾರದಾ ಮಂದಿರ
ಕೃಷ್ಣರಾಜ ವನಂ
ಮೈಸೂರು
೧೫-೮-೧೯೫೫

ಎಚ್. ಎಂ. ಶಂಕರನಾರಾಯಣರಾವ್
ಸಂಪಾದಕ

# ವಿಷಯಾನುಕ್ರಮಣಿಕೆ


| | | ಪುಟ |
|---|---|---|
| ಅರಿಕೆ | .... | iii |
| ಪೀಠಿಕೆ | .... | xiii |
| ಮೊದಲನೆಯ ಸರ್ಗ | .... | ೧ |
| ಎರಡನೆಯ ಸರ್ಗ | .... | ೧೩ |
| ಮೂರನೆಯ ಸರ್ಗ | .... | ೨೬ |
| ನಾಲ್ಕನೆಯ ಸರ್ಗ | .... | ೩೯ |
| ಐದನೆಯ ಸರ್ಗ | .... | ೪೭ |
| ಆರನೆಯ ಸರ್ಗ | .... | ೫೮ |
| ಟಿಪ್ಪಣಿಗಳು | .... | ೬೯ |

" ನಾರಿಕೇಲಫಲಸಂಮಿತಂ ವಚೋ ಭಾರವೇಃ ಸಪದಿ ತದ್ವಿಭಜ್ಯತೇ ।
ಸ್ವಾದಯಂತು ರಸಗರ್ಭನಿರ್ಭರಂ ಸಾರಮಸ್ಯ ರಸಿಕಾ ಯಥೇಪ್ಸಿತಂ ॥ "

—ಮಲ್ಲಿನಾಥ

ಭಾರವಿಕಾವ್ಯಂ ಭಾವಿಸೆ
ಧಾರಿಣಿಯೊಳ್ ನಾರಿಕೇಲಫಲಕೆಣೆಯದರಿಂ ।
ಧೀರರ್ ಕರಟಮನೊಡೆಯಲ್
ಸಾರಂ ಸವಿಯಲ್ಕೆವರ್ಪುದೊಳಗಿಂ ಮಧುರಂ ॥

# ಪೀಠಿಕೆ

## ೧. ಭಾರವಿಯ ಕಾಲ, ದೇಶ ಮತ್ತು ಜೀವನವೃತ್ತಾಂತ

೧. ಇತಿಹಾಸಪ್ರಸಿದ್ಧನಾದ ಹರ್ಷಚಕ್ರವರ್ತಿಯನ್ನು ನರ್ಮದಾ ತೀರದಲ್ಲಿ ಸೋಲಿಸಿ ತನ್ನ ಕೀರ್ತಿಗೆ ಕಳಸವಿಟ್ಟ ಚಾಲುಕ್ಯರಾಜ ಇಮ್ಮಡಿ ಪುಲಿಕೇಶಿಯ ಪ್ರಶಸ್ತಿಯನ್ನು ಆತನ ಆಶ್ರಿತನಾಗಿದ್ದ ರವಿಕೀರ್ತಿಯೆಂಬ ಕವಿ ಬರೆದಿದ್ದಾನೆ. ಪುಲಿಕೇಶಿಯ ರಾಜಧಾನಿಯಾಗಿದ್ದ ಬಾದಾಮಿಯ ಸಮೀಪ ದಲ್ಲಿ, ಐಹೊಳೆಯೆಂಬ ಊರಿನಲ್ಲಿ, ತನ್ನ ಕಾವ್ಯಪ್ರಶಸ್ತಿಯನ್ನು ರವಿಕೀರ್ತಿ ಕಲ್ಲಿನಲ್ಲಿ ಕೆತ್ತಿಸಿರುವುದು ಇಂದಿಗೂ ಉಪಲಬ್ಧವಿದೆ. ಅದರ ಕಡೆಯಲ್ಲಿ ತನ್ನ ಪ್ರಶಂಸೆಯನ್ನು ಹೇಳಿಕೊಳ್ಳುವಾಗ ಕವಿತೆಯಲ್ಲಿ ಕಾಳಿದಾಸ, ಭಾರವಿ ಗಳಿಬ್ಬರ ಕೀರ್ತಿಗೂ ತಾನೇ ಆಶ್ರಯನೆಂದೂ, ವಿವೇಕಿಯಾದ್ದರಿಂದ ತನ್ನ ಧನಾರ್ಜನೆ ಸಾರ್ಥಕವಾಗುವಂತೆ ಕಲ್ಲಿನಲ್ಲಿ ಶಾಶ್ವತವಾದ ಜಿನಾಲಯ ವನ್ನು ಕಟ್ಟಿಸಿರುವುದಾಗಿಯೂ ಹೊಗಳಿಕೊಂಡಿದ್ದಾನೆ:—

ಯೇನಾಯೋಜಿ ನವೇಽಶ್ಮಸ್ಥಿರಮರ್ಥವಿಧೌ ವಿವೇಕಿನಾ ಜಿನವೇಶ್ಮ ।
ಸ ವಿಜಯತಾಂ ರವಿಕೀರ್ತಿಃ ಕವಿತಾಶ್ರಿತಕಾಲಿದಾಸಭಾರವಿಕೀರ್ತಿಃ॥

ಈ ಶಾಸನದ ಕಾಲ ಕ್ರಿ. ಶ. ೬೩೪. ಆದ್ದರಿಂದ ಭಾರವಿ ಇದಕ್ಕೆ ಮುಂಚೆಯೇ ಕಾವ್ಯವನ್ನು ಬರೆದು ಕಾಳಿದಾಸನಿಗೆ ಸರಿಸಮವಾದ ಕೀರ್ತಿಯನ್ನು ದೇಶ ದಲ್ಲೆಲ್ಲ ಗಳಿಸಿದ್ದನೆಂಬುದು ಸಿದ್ಧವಾಗುತ್ತದೆ.

೨. ಪಾಣಿನಿಯ ವ್ಯಾಕರಣಸೂತ್ರಗಳಿಗೆ "ಕಾಶಿಕಾ" ಎಂಬ ವೃತ್ತಿ ಯಿದೆ. ಇದನ್ನು ರಚಿಸಿದವರು ವಾಮನ ಮತ್ತು ಜಯಾದಿತ್ಯರು. ಇದರ ಪರಿಚಯವನ್ನು ಚೀಣೀ ಯಾತ್ರಿಕನಾದ ಇತ್ಸಿಂಗನು (ಕ್ರಿ. ಶ. ೬೭೦) ತೋರಿ ಸುವುದರಿಂದ ಅದಕ್ಕಿಂತ ಮೊದಲೇ ಆ ಗ್ರಂಥ ರಚಿತವಾಗಿದ್ದಿರಬೇಕು. ಆ ಗ್ರಂಥದಲ್ಲಿ "ಪ್ರಕಾಶನಸ್ಥೇಯಾಖ್ಯಯೋಶ್ಚ" [1] ಎಂಬ ಸೂತ್ರಕ್ಕೆ ಲಕ್ಷ್ಯ

1. ಪಾಣಿನಿಸೂತ್ರ I. iii. 23

ವಾಗಿ ಭಾರವಿಕಾವ್ಯದ "ಸಂಶಯ್ಯ ಕರ್ಣಾದಿಷು ತಿಷ್ಠತೇ ಯಃ"[2] ಎಂಬ ಪ್ರಯೋಗ ಉದಾಹೃತವಾಗಿದೆ. ಹೀಗೆ ಏಳನೆಯ ಶತಮಾನಕ್ಕೂ ಮುಂಚೆಯೇ ಪ್ರಸಿದ್ಧ ವ್ಯಾಕರಣಕ್ಕೆ ಲಕ್ಷ್ಯವನ್ನೊದಗಿಸುವಷ್ಟು ಕೀರ್ತಿ ಭಾರವಿಗೆ ಬಂದಿತ್ತೆನ್ನಲು ಸಂದೇಹವಿಲ್ಲ.

೩. ಭಾರವಿಯ ಕಾವ್ಯವನ್ನೇ ಮೇಲ್ಪಂಕ್ತಿಯಾಗಿಟ್ಟುಕೊಂಡು ಮುಂದೆ ಮಾಘನು 'ಶಿಶುಪಾಲವಧ'ವೆಂಬ ಮಹಾಕಾವ್ಯವನ್ನು ರಚಿಸಿರುವನು. ಆದರೆ ಮಾಘನ ಕಾಲವಿಚಾರದಲ್ಲಿಯೇ ವಿದ್ವಾಂಸರಿಗೆ ನಿಷ್ಕರ್ಷವಿಲ್ಲ. ಪ್ರೊ. ಹರ್ಮಾನ್ ಯಾಕೊಬಿ ಎಂಬ ಜರ್ಮನ್ ವಿದ್ವಾಂಸರು ಮಾಘನ ಕಾಲ ಸುಮಾರು ಕ್ರಿ. ಶ. ೬೦೦ ಎಂದರೆ[3] ಡಾ. ಸುಶೀಲ ಕುಮಾರ ಡೇ ಅವರು ಕ್ರಿ. ಶ. ೭೦೦ ಎನ್ನುತ್ತಾರೆ.[4] ಯಾಕೊಬಿಯವರ ಊಹೆ ಸರಿಯಾದರೆ ಭಾರವಿಯ ಕಾಲ ಸುಮಾರು ಕ್ರಿ. ಶ. ೫೫೦ ಎನ್ನಬಹುದು.

೪. 1923 ರಲ್ಲಿ ಶ್ರೀ ರಾಮಕೃಷ್ಣಕವಿಗಳು ದಂಡಿಯ ಕೃತಿಗಳೆಂದು ಹೇಳಲಾದ "ಅವಂತಿಸುಂದರೀಕಥಾ (ಗದ್ಯ) ಮತ್ತು ಅವಂತಿಸುಂದರೀ ಕಥಾಸಾರ (ಪದ್ಯ) ಗಳನ್ನು ಪ್ರಕಟಿಸಿರುವರು. ಪಾಶ್ಚಾತ್ಯಪಂಡಿತರಾದ ಎ. ಬಿ. ಕೀತ್ ಮುಂತಾದವರೂ ಭಾರತೀಯ ವಿದ್ವಾಂಸರಾದ ಡಾ. ಡೇ ಮುಂತಾದವರೂ ಇವು ದಂಡಿಕೃತವೆಂದೊಪ್ಪುವುದಿಲ್ಲ. ಆದರೆ ಡಾ. ರಾಘವನ್ ಅವರು ಈ ಕೃತಿಗಳ ಪ್ರಾಮಾಣ್ಯವನ್ನು ಅಂಗೀಕರಿಸುತ್ತಾರೆ.[5] ಈ ಗ್ರಂಥದ ಉಪಕ್ರಮ ಶ್ಲೋಕಗಳಲ್ಲಿ ದಂಡಿ ಭಾರವಿಯ ಮಗನ ಪ್ರಪೌತ್ರನೆಂದೂ, ದಾಮೋದರನೆಂಬುದು ಭಾರವಿಯ ಮತ್ತೊಂದು ಹೆಸರೆಂದೂ ಹೇಳಿದಂತೆ ತೋರುತ್ತದೆಯಲ್ಲದೆ ಭಾರವಿಯ ಜೀವನದ ಬಗ್ಗೆ ಎಷ್ಟೋ ವಿವರಗಳು ಬರುತ್ತವೆ. ಅವನ್ನು ಕೆಳಗೆ ಸಂಗ್ರಹಿಸಲಾಗಿದೆ :—

---

2. ಕಿರಾತಾರ್ಜುನೀಯ, III. 14

3. Vienna Oriental Journal, vol. III.

4. History of Sanskrit Literature, p, 188.

5. ಅವರು ಮದ್ರಾಸಿನ ಹಿಂದೂಪತ್ರಿಕೆಯಲ್ಲಿ ಒಂದು ವರ್ಷದ ಕೆಳಗೆ ಬರೆದಿರುವ ಲೇಖನದಲ್ಲಿ.

'ದಕ್ಷಿಣಾಪಥದಲ್ಲಿ ಪ್ರಸಿದ್ಧವಾದ ಪಟ್ಟಣ—ಕಾಂಚಿ. ಅದನ್ನು ಸಿಂಹ ವಿಷ್ಣುವೆಂಬ ಪಲ್ಲವರಾಜನು ಆಳುತ್ತಿದ್ದನು. ಆತನಿಗೆ ಕವಿಗಳೆಂದರೆ ಪ್ರಾಣ. ಒಂದು ದಿನ ಅಪರಿಚಿತನೊಬ್ಬನು ಅವನ ಆಸ್ಥಾನಕ್ಕೆ ಬಂದು ವಿಷ್ಣುವಿನ ನರಸಿಂಹಾವತಾರವನ್ನು ಬಣ್ಣಿಸುವ ಶ್ಲೋಕವೊಂದನ್ನು ಹೇಳಿದನು. ಶ್ಲೋಕದ ಭಾವದಿಂದ ಪರವಶನಾದ ರಾಜನು ಅದನ್ನು ಬರೆದವನ ಬಗ್ಗೆ ಆಸಕ್ತಿಯಿಂದ ವಿಚಾರಿಸಲು, ಆ ಅಪರಿಚಿತನು—ವಸ್ತುತಃ ಅವನೊಬ್ಬ ಗಂಧರ್ವ—ಹೀಗೆಂದನಂತೆ :—"ಭಾರತದ ಪಶ್ಚಿಮೋತ್ತರ ದಿಗ್ಭಾಗದಲ್ಲಿ ಆನಂದಪುರವೆಂಬ ನಗರ ಆರ್ಯಾವರ್ತಕ್ಕೆ ಶಿರೋರತ್ನದಂತೆ ರಾಜಿಸುತ್ತಿದೆ. ಅಲ್ಲಿ ಅನೇಕ ಪ್ರಸಿದ್ಧರಾಜರು ಆಗಿ ಹೋದರು. ಅಲ್ಲಿಯ ನಿವಾಸಿಗಳಲ್ಲಿ ಕೌಶಿಕಗೋತ್ರದ ಬ್ರಾಹ್ಮಣವಂಶವೊಂದು ದಕ್ಷಿಣಾಪಥದ ಅಚಲಪುರಕ್ಕೆ ವಲಸೆ ಬಂದಿತು. ಈ ವಂಶಕ್ಕೆ ಸೇರಿದ ನಾರಾಯಣಸ್ವಾಮಿಯೆಂಬಾತನಿಗೆ ದಾಮೋದರನೆಂಬ ಮಗನಾದನು. ಈತನು ತನ್ನ ನಿರುಪಮ ಪ್ರತಿಭೆಯಿಂದ "ಭಾರವಿ" ಅಥವಾ ಬೆಳಗುವ ಸೂರ್ಯನೆಂಬ ಪ್ರಖ್ಯಾತಿಯನ್ನು ಪಡೆದನು; ಚಾಲುಕ್ಯರಾಜನಾದ ವಿಷ್ಣುವರ್ಧನನ ಗೆಳೆಯನಾದನು. ಒಮ್ಮೆ ವಿಷ್ಣುವರ್ಧನನೊಡನೆ ಭಾರವಿ ಬೇಟೆಗೆ ಹೋಗಿರುವಾಗ ಅವನ ಒತ್ತಾಯದಿಂದ ಅನಿವಾರ್ಯವಾಗಿ ಮಾಂಸವನ್ನು ತಿನ್ನಬೇಕಾಗಿ ಬಂದಿತು. ಆ ದೋಷದ ಪ್ರಾಯಶ್ಚಿತ್ತಕ್ಕಾಗಿ ಆತನು ತೀರ್ಥಯಾತ್ರೆ ಕೈಗೊಂಡು ದೇಶಾಟನೆ ಮಾಡಿ ಕಡೆಗೆ ದುರ್ವಿನೀತನೆಂಬ ರಾಜನ ಆಸ್ಥಾನವನ್ನು ಸೇರಿದನು. ಆತನೇ ಈಗ ನಾನು ಹೇಳಿದ ಶ್ಲೋಕವನ್ನು ರಚಿಸಿದ ಕವಿ." 6

ಇದನ್ನು ಕೇಳಿದೊಡನೆಯೇ ಪಲ್ಲವರಾಜನ ಕುತೂಹಲ ನೂರ್ಮಡಿಯಾಗಿ ಕೆರಳಿತು. ಆತನು ಮೇಲಿಂದ ಮೇಲೆ ಭಾರವಿಗೆ ಆಮಂತ್ರಣಗಳನ್ನು ಕಳುಹಿಸಿ ಕಡೆಗೊಮ್ಮೆ ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು.

---

6. ಹೋಲಿಸಿ—

ಸ ಮೇಧಾವೀ ಕವಿರ್ವಿದ್ವಾನ್ ಭಾರವಿಃ ಪ್ರಭವೋ ಗಿರಾಮ್ |
ಅನುರುಧ್ಯಾಕರೋನ್ಮೈತ್ರೀಂ ನರೇಂದ್ರೇ ವಿಷ್ಣುವರ್ಧನೇ ||

—ಅವಂತಿಸುಂದರೀಕಥಾಸಾರ 1. 22

ಅವನಿಗಾಗಿ ಮನೆಯನ್ನೂ ಕಟ್ಟಿಸಿಕೊಟ್ಟನು. ಭಾರವಿ ಅಲ್ಲೀ ನೆಲಸಿ ತನ್ನ ಸುಭಾಷಿತಗಳಿಂದ ರಾಜನಿಗೆ ಅಚ್ಚುಮೆಚ್ಚಾಗಿದ್ದನು. ಭಾರವಿಯನ್ನು 'ಮಹಾಶೈವ' ನೆಂದೂ 'ಮಹಾಪ್ರಭಾವನೆಂದೂ 'ಪ್ರದೀಪ್ತಭಾಸ' ನೆಂದೂ ಇಲ್ಲಿ ಉಲ್ಲೇಖಿಸಿದೆ.

ಈ ಕಥೆಯಲ್ಲಿ ಬರುವ ಪಲ್ಲವ ಸಿಂಹವಿಷ್ಣು, ಚಾಲುಕ್ಯ ವಿಷ್ಣುವರ್ಧನ, ಗಂಗದುರ್ವಿನೀತ ಎಲ್ಲರೂ ಸಮಕಾಲೀನರಾಗಿದ್ದುದು ಐತಿಹಾಸಿಕ ಸತ್ಯ. ಸಿಂಹವಿಷ್ಣುರಾಜನು ಕ್ರಿ. ಶ. ೫೭೫ ರಿಂದ ೬೦೦ ರವರೆಗೆ ಕಾಂಚಿಯಲ್ಲಾಳುತ್ತಿದ್ದನು. ಅವನು ಮಲಯ, ಪಾಂಡ್ಯ, ಚೋಳ ರಾಜರನ್ನು ಗೆದ್ದು ಪ್ರಸಿದ್ಧಿಗೆ ಬಂದಿದ್ದನು. "ಮತ್ತವಿಲಾಸ ಪ್ರಹಸನ" ಮುಂತಾದ ಗ್ರಂಥಗಳನ್ನು ಬರೆದ ಮಹೇಂದ್ರವಿಕ್ರಮವರ್ಮನು ಆತನ ಮಗ. ಹಾಗೆಯೇ ವಿಷ್ಣುವರ್ಧನನು ಕ್ರಿ. ಶ. ೬೦೮ ರಲ್ಲಿ ಪಟ್ಟಕ್ಕೆ ಬಂದ ಸತ್ಯಾಶ್ರಯ ಪುಲಿಕೇಶಿಯ ತಮ್ಮ. ಪಲ್ಲವರಿಂದ ವೆಂಗಿಯನ್ನು ಕಸಿದ ಕೀರ್ತಿ ಇವನದು. ದುರ್ವಿನೀತನು ಕೊಂಗಣಿ ಅವಿನೀತನ ಮಗ; ಪುನ್ನಾಡಿನ ರಾಜ ಸ್ಕಂಧವರ್ಮನ ದೌಹಿತ್ರ. ದುರ್ವಿನೀತನು ರಾಜ್ಯಕ್ಕಾಗಿ ಮೊದಲು ಸ್ವಲ್ಪ ಹೋರಾಡಬೇಕಾಯಿತು. ಕಡೆಗೆ ತನ್ನ ಪ್ರತಾಪದಿಂದ ಅರಿಗಳನ್ನೆಲ್ಲ ಮೆಟ್ಟಿ ರಾಜಾಧಿರಾಜನೆನಿಸಿದನು. ನೃಪತುಂಗನ ಕವಿರಾಜಮಾರ್ಗದಲ್ಲಿ ದುರ್ವಿನೀತನನ್ನು ಕನ್ನಡ ಗ್ರಂಥಕಾರನೆಂದು ಬಣ್ಣಿಸಿರುವಂತೆ ಶಾಸನಗಳೂ ಈತನನ್ನು **ಶಬ್ದಾವತಾರಕಾರನೆಂದೂ**, ಬೃಹತ್ಕಥೆಯನ್ನು ದೇವಭಾರತಿಯಲ್ಲಿ ಬರೆದವನೆಂದೂ, ಭಾರವಿಯ ಕಿರಾತಾರ್ಜುನೀಯದ **ಪಂಚದಶ ಸರ್ಗ ಟೀಕಾಕಾರನೆಂದೂ** ಸಾರುತ್ತವೆ.[7] ರಾಜಾಧಿರಾಜನಾದ ದುರ್ವಿನೀತನು ಟೀಕೆ ಬರೆಯುವಂತಹ ಗೌರವವನ್ನು ಸಲ್ಲಿಸಬೇಕಾಗಿದ್ದರೆ

---

7. ಹೋಲಿಸಿ—ಶ್ರೀಮತ್ಕೊಂಗಣ ಮಹಾರಾಜಾಧಿರಾಜಸ್ಯ, ಅವಿನೀತಾತ್ಮನಃ ಪುತ್ರೇಣ, ಶಬ್ದಾವತಾರಕಾರೇಣ, ದೇವಭಾರತೀನಿಬದ್ಧಬೃಹತ್ಕಥೇನ, ಕಿರಾತಾರ್ಜುನೀಯಪಂಚದಶಸರ್ಗಟೀಕಾಕಾರೇಣ ದುರ್ವಿನೀತ ನಾಮಧೇಯೇನ....................Mysore Archaeological Report, 1916; Epigraphica Karnatica, 23, ಇತ್ಯಾದಿ.

ಭಾರವಿಯ ಗ್ರಂಥದ ಮಹತ್ತ್ವವೆಂತಹುದಾಗಿದ್ದಿರಬೇಕೆಂದು ಬಿಡಿಸಿ ಹೇಳುವ ಕಾರಣವಿಲ್ಲ. 'ಪಂಚದಶಸರ್ಗಟೀಕೆ' ಯೆಂದರೆ ಹದಿನೈದನೆಯ ಸರ್ಗದ ಟೀಕೆ ಯೆನ್ನಲು ಅದು ಚಿತ್ರಬಂಧಗಳಿಂದ ಬಹಳ ಗಡುಚಾಗಿ ವ್ಯಾಖ್ಯಾಗಮ್ಯವಾಗಿ ರುವುದೇ ಮುಖ್ಯ ಕಾರಣ. ಆದರೆ ಈ ಮಾತಿಗೆ ' ಹದಿನೈದು ಸರ್ಗಗಳಿಗೆ ' ಎಂದು ಅರ್ಥ ಮಾಡಲೂ ಅವಕಾಶವುಂಟು. ದುರ್ದೈವದಿಂದ ಇಂದು ಆ ಟೀಕೆ ನಷ್ಟವಾಗಿ ಹೋಗಿದೆ. ದುರ್ವಿನೀತನ ಕಾಲ ಕೂಡ ಕ್ರಿ. ಶ. ೫೫೦–೬೦೦[೮]

ಹೀಗೆ ಭಾರವಿಯ ಕಾಲ ಕ್ರಿ.ಶ. ೫೫೦ ರಿಂದ ೬೦೦ ಎಂದು ನಿರ್ಧರಿಸ ಬಹುದು; ಅವನು ಕರ್ಣಾಟಕದಲ್ಲೇ ತನ್ನ ಜೀವನದ ಹೆಚ್ಚು ಭಾಗವನ್ನು ಕಳೆದಿದ್ದಂತೆ ತೋರುತ್ತದೆ; ಇದು ಕನ್ನಡಿಗರಿಗೆ ಅಭಿಮಾನಾಸ್ಪದವಾದ ವಿಷಯ. ಮಿಕ್ಕ ಪ್ರಾಚೀನ ಕವಿಗಳ ವಿಷಯವಾಗಿ ದಂತಕಥೆಗಳು ಹುಟ್ಟಿ ಕೊಂಡಿರುವಂತೆಯೇ ಭಾರವಿಯನ್ನು ಕುರಿತ ದಂತಕಥೆಗಳೂ ಉಂಟು. ಒಂದೆರಡನ್ನಿಲ್ಲಿ ಸಂಗ್ರಹವಾಗಿ ಹೇಳಬಹುದು :–

೧. ಭಾರವಿಗೆ ಚಿಕ್ಕಂದಿನಲ್ಲಿಯೇ ಸರಸ್ವತಿ ಒಲಿದಿದ್ದಳು; ಅವನ ಶ್ಲೋಕಗಳನ್ನು ಉದ್ದಾಮ ಪಂಡಿತರೂ ಕೇಳಿದೊಡನೆ ತಲೆದೂಗುತ್ತಿದ್ದರು; ತಮ್ಮ ಸಂತೋಷ ಹಿಡಿಸದೆ ಅವನ ತಂದೆಯ ಹತ್ತಿರ ಬಂದು ಭಾರವಿಯ ಕವಿತ್ವಶಕ್ತಿಯನ್ನು ಕೊಂಡಾಡುತ್ತಿದ್ದರು. ಆದರೆ ತಂದೆ ಮಾತ್ರ ಮಗನನ್ನು ಎಂದೂ ಹೊಗಳುತ್ತಿರಲಿಲ್ಲ–'ಏನೋ ಹುಡುಗಬುದ್ಧಿ' ಎನ್ನುತ್ತಿದ್ದನಂತೆ. ಹುಡುಗನಿಗೆ ಇದರಿಂದ ಬಹಳ ಉತ್ಸಾಹಭಂಗವಾಗುತ್ತಿದ್ದಿತು. ತಂದೆ ಯನ್ನು ಕೊಂದಲ್ಲದೆ ತನಗೆ ಪ್ರಶಸ್ತಿ ಬರುವುದಿಲ್ಲವೆಂದುಕೊಂಡು ಒಂದು ದಿನ ದೊಡ್ಡ ಕಲ್ಲನ್ನು ಅಟ್ಟದ ಮೇಲಿಟ್ಟುಕೊಂಡು ಕೆಳಗೆ ಊಟಮಾಡಲು ತಂದೆ ಬರುವುದನ್ನೇ ಭಾರವಿ ಕಾಯುತ್ತಿದ್ದನಂತೆ. ಆ ದಿನ ತಂದೆ ಬಂದಾಗ ತಾಯಿ ಇದೇ ವಿಷಯವನ್ನು ಪ್ರಸ್ತಾಪಿಸಿದಳು–ನೀವೇಕೆ ಹುಡುಗ ನನ್ನು ದೂರುತ್ತೀರಿ ? ಎಂದು. ಆಗ ತಂದೆ 'ನನಗೆ ಮಗನಲ್ಲಿ ಎಲ್ಲರಿಗಿಂತಲೂ

---

೮. ಪಾಶ್ಚಾತ್ಯ ಪಂಡಿತರಲ್ಲಿ ಕೆಲವರು ಈ ಶಾಸನಗಳು 'ಫೋರ್ಜರಿ' ಗಳೆಂದರೂ, ಭಾರತೀಯ ವಿದ್ವಾಂಸರು ಇವುಗಳನ್ನು ಪ್ರಾಮಾಣಿಕವೆಂದೇ ಒಪ್ಪುತ್ತ ಬಂದಿದ್ದಾರೆ.

ಹೆಚ್ಚಿನ ವಿಶ್ವಾಸವಿದೆ; ಆದರೆ ಹುಡುಗನಿಗೆ ಗರ್ವ ಬಾರದಂತೆ ಗಾಗೆ ಹೇಳುತ್ತೇನೆ' ಎಂದು ತನ್ನ ಅಂತರಂಗವನ್ನು ಬಿಚ್ಚಿ ಹೇಳಿದನಂತೆ. ತನ್ನ ಮೌಢ್ಯವನ್ನು ತಿಳಿದ ಬಾಲಕನು ಕೆಳಗಿಳಿದು ಬಂದು ತನ್ನ ತಪ್ಪನ್ನೊಪ್ಪಿಕೊಂಡು ಶಿಕ್ಷೆ ವಿಧಿಸುವಂತೆ ತಂದೆಗೆ ಬೇಡಿಕೊಂಡನಂತೆ. 'ಮಾವನ ಮನೆಯಲ್ಲಿ ಆರು ತಿಂಗಳಿರು' ಎಂಬುದೇ ತಂದೆ ಮಗನಿಗೆ ವಿಧಿಸಿದ ಶಿಕ್ಷೆ. ಅಲ್ಲಿ ಮೊದಮೊದಲಿದ್ದ ಆದರವೆಲ್ಲ ತಪ್ಪಿ ಕಡೆಗೆ ನಾಯಿಗಿಂತ ಕಡೆಯಾದ ತನ್ನ ಸ್ಥಿತಿಯನ್ನು ಅವನು ಒಂದು ಶ್ಲೋಕದಲ್ಲಿ ಹೀಗೆ ವರ್ಣಿಸಿದ್ದಾನೆ—

ಶ್ವಶುರಗೃಹನಿವಾಸಃ ಸ್ವರ್ಗತುಲ್ಯೋ ನರಾಣಾಂ
ಯದಿ ವಸತಿ ದಿನಾನಿ ತ್ರೀಣಿ ಪಂಚಾಥ ಸಪ್ತ ।
ದಧಿಘೃತಮಧುಭಕ್ಷ್ಯಕ್ಷೀರಸಾರಪ್ರವಾಹಃ
ತದುಪರಿ ದಿನಮೇಕಂ ಪಾದರಕ್ಷಾಪ್ರಯೋಗಃ ॥

'ಮಾವನ ಮನೆಯ ವಾಸ ಮನುಷ್ಯರಿಗೆ ಸ್ವರ್ಗದ ಹಾಗೆ—ಮೂರು ಅಥವಾ ಐದು, ಹೆಚ್ಚೆಂದರೆ ಏಳು ದಿನ ಮಾತ್ರ ಇರುವುದಾದರೆ. ಆಗ ತುಪ್ಪ, ಮೊಸರು ಹಾಲು, ಜೇನು, ಭಕ್ಷ್ಯ–ಭೋಜ್ಯ, ಎಲ್ಲಾ ಬೇಕು ಬೇಕಾದಷ್ಟು ಪ್ರವಾಹದಂತೆ ಹರಿಯುತ್ತದೆ. ಆದರೆ ಒಂದೇ ಒಂದು ದಿನ ಹೆಚ್ಚಾಗಿ ನಿಂತರೂ ಪಾದರಕ್ಷೆಯ ರುಚಿಯೇ ಸಿಕ್ಕುವುದು.' ಹೊಲವನ್ನು ಕಾಯುವ ಕೆಲಸ ಮಾಡುತ್ತಾ, ಭಾರವಿ ಹೊತ್ತು ಕಳೆಯಲು ಕಿರಾತಾರ್ಜುನೀಯವನ್ನು ಬರೆದನಂತೆ. ಬಡತನದಿಂದ ಬೇಯುತ್ತಿದ್ದ ಹೆಂಡತಿಯನ್ನು ಸಮಾಧಾನಪಡಿಸಲು ಒಂದು ಶ್ಲೋಕವನ್ನು [9] ನೂರು ಹೊನ್ನುಗಳಿಗೆ ಮಾರಿಸಿದನಂತೆ. ಅಂತೂ ಶಿಕ್ಷೆಯ ಗಡುವು ಮುಗಿದಮೇಲೆ ಕವಿ ಮನೆಗೆ ಬಂದು ಸುಖವಾಗಿದ್ದನು.[10]

೨. ಯಾವಾಗಲೂ ಕಾವ್ಯಾಸಕ್ತನಾದ ಭಾರವಿ ಮನೆವಾರ್ತೆಗೆ ಲಕ್ಷ್ಯ ಹಾಕುತ್ತಿರಲಿಲ್ಲ. ಬಡತನದ ಬವಣೆಯನ್ನು ತಾಳಲಾರದ ಅವನ ಹೆಂಡತಿ ಯಾವಾಗಲೂ ಅವನನ್ನು ಹಂಗಿಸುತ್ತಿದ್ದಳು. ಆವಳ ಕಾಟವನ್ನು

---

9. ಸಹಸಾ ವಿದಧೀತ ನ ಕ್ರಿಯಾಂ II. ೩೦, ಎಂಬುದೇ ಆ ಶ್ಲೋಕ.

10. ಸೂರ್ಯನಾರಾಯಣಶಾಸ್ತ್ರಿಗಳ 'ಸಂಸ್ಕೃತಕವಿ ಜೀವಿತವು,' ಪು92-6

ತಡೆಯಲಾರದೆ ಕೊನೆಗೆ ದ್ರವ್ಯಾರ್ಜನೆಗೆಂದು ಭಾರವಿ ಹೊರಟನು. ದಾರಿಯಲ್ಲೊಂದು ತಾವರೆ ಕೊಳ ಸಿಕ್ಕಿತು. ಅಲ್ಲಿಯೇ ಸ್ವಲ್ಪ ಪ್ರಯಾಣ ನಿಲ್ಲಿಸಿ ಒಂದು ತಾವರೆಯೆಲೆಯ ಮೇಲೆ ಆಗಲೇ ಹೇಳಿದ ಶ್ಲೋಕ[11]ವನ್ನು ಬರೆದು ತೇಲಿಬಿಟ್ಟನು. ಇದು ಬೇಟೆಗೆ ಅಲ್ಲಿಯೇ ಬಂದಿದ್ದ ರಾಜನಿಗೆ ಸಿಕ್ಕಿತು. ಅವನು ಅದನ್ನು ಮೆಚ್ಚಿ ಅರಮನೆಯಲ್ಲಿ ತನ್ನನ್ನು ಕಾಣಬೇಕೆಂದು ಕವಿಗೆ ಹೇಳಿ ಕುದುರೆಯ ಮೇಲೆ ಹೊರಟುಹೋದನು. ದೊರೆ ಅರಮನೆಯಲ್ಲಿ ತನ್ನ ಮಲಗುವ ಕೋಣೆಯಲ್ಲಿಯೇ ಅದನ್ನು ಸುವರ್ಣಾಕ್ಷರದಲ್ಲಿ ಕೆತ್ತಿಸಿಟ್ಟನು. ಬಡವನಾದ ಭಾರವಿಗೆ ಅರಮನೆಯಲ್ಲಿ ಪ್ರವೇಶವೇ ಸಿಕ್ಕಲಿಲ್ಲ. ಒಂದು ವರ್ಷದ ನಂತರ ಒಂದು ಸ್ಮರಣೀಯ ಸಂಗತಿ ನಡೆಯಿತು. ರಾಜನು ಒಂದು ದಿನ ಬೇಟೆಯಿಂದ ಶಯ್ಯಾಗೃಹಕ್ಕೆ ಹಿಂದಿರುಗಿ ಬಂದಾಗ ಪತ್ನಿ ತನ್ನ ಮಂಚದ ಮೇಲೆ ಪುರುಷನೊಬ್ಬನ ಜತೆಯಲ್ಲಿ ಮಲಗಿ ನಿದ್ರಿಸುತ್ತಿದ್ದಳು. ಕೂಡಲೆ ಅವರಿಬ್ಬರನ್ನು ಕತ್ತರಿಸಲು ಕತ್ತಿಯನ್ನೆತ್ತಿದಾಗ ಭಾರವಿಯ ಶ್ಲೋಕ ಕಾಣಿಸಲು, ಒಂದು ಕ್ಷಣ ತಡೆದು ಅವರನ್ನೆಬ್ಬಿಸಿದನು. ಪುರುಷನು ತನ್ನ ಪುತ್ರನೇ ಎಂಬುದು ತಿಳಿದೊಡನೆ ಅವನು ಶ್ಲೋಕದ ನೀತಿಯನ್ನು ಮತ್ತೆ ಮತ್ತೆ ಕೊಂಡಾಡಿ ಭಾರವಿಯನ್ನು ಕರೆಯಿಸಿ ಸನ್ಮಾನ ಮಾಡಿದನು.[12]

ಈ ಶ್ಲೋಕ ಎಷ್ಟು ಪ್ರಸಿದ್ಧವಾಗಿತ್ತೆನ್ನಲು ಪ್ರಸಿದ್ಧ ಮೀಮಾಂಸಕನಾದ ಪ್ರಭಾಕರಭಟ್ಟನು ಇದರ ದ್ವಿತೀಯಚರಣವನ್ನು ಶಾಸ್ತ್ರಾರ್ಥದ ಚರ್ಚೆಯಲ್ಲಿ ಕೂಡ ಉದಾಹರಿಸುವುದು ಸಾಕ್ಷಿಯಾಗಿದೆ.

ಮೇಲಿನ ದಂತಕಥೆಗಳ ವಿವರಗಳು ಸುಳ್ಳಾಗಿದ್ದರೂ ಭಾರವಿ ಮೊದಲು ಬಡವನಾಗಿದ್ದು, ತನ್ನ ಕಾವ್ಯಮಹಿಮೆಯಿಂದ ದೊಡ್ಡ ದೊಡ್ಡ ರಾಜರ ಪ್ರಶಂಸೆ ಹಾಗೂ ಅನುಗ್ರಹಗಳಿಗೆ ಪಾತ್ರನಾದುದು ನಿಜವೆನ್ನಬಹುದಾಗಿದೆ.

---

11. ಕಿರಾತಾರ್ಜುನೀಯ, II. ೩೦
12. ಪರಗಣಕರ

## ೨. ಸಂಸ್ಕೃತ ಮಹಾಕಾವ್ಯಗಳಲ್ಲಿ ಕಿರಾತಾರ್ಜುನೀಯದ ಸ್ಥಾನ

ಸಂಸ್ಕೃತ ಸಾಹಿತ್ಯದ ಇತಿಹಾಸವನ್ನು ಪರಿಶೀಲಿಸುವವರಿಗೆ ಕಾವ್ಯಗಂಗೆ ತ್ರಿಪಥಗಾಮಿನಿಯಾಗಿರುವುದು ಕಾಣಬರುತ್ತದೆ. ಆದಿಕಾವ್ಯವೆಂದು ನಾವಿಂದು ಪರಿಗಣಿಸುವ ವಾಲ್ಮೀಕಿರಾಮಾಯಣ ಅದರ ಉದ್ಗಮಸ್ಥಾನ; ಅಲ್ಲಿಯ ಕಾವ್ಯಸಲಿಲ ಸುಂದರವಾದಂತೆ ಸ್ವಚ್ಛವೂ ಆಗಿದೆ. ಭಾವಾವೇಶ ಪ್ರಬಲವಾಗಿರುವಂತೆ ಪ್ರಸನ್ನವೂ ಆಗಿದೆ. ವಾಕ್ಪ್ರವಾಹವು ನಿರರ್ಗಳವಾಗಿರುವಂತೆ ತಿಳಿಯಾಗಿಯೂ ಇದೆ. ಹಿಮಾಚಲದ ಉತ್ತುಂಗ ಶೃಂಗಗಳಲ್ಲಿ ಪ್ರಕೃತಿಸಹಜವಾದ ವಿಷಮತೆಯಿದ್ದರೂ ಸರ್ವವ್ಯಾಪಿಯಾದ ಧವಲತೆಯೂ ಇರುವಂತೆ ವಾಲ್ಮೀಕಿಮಹರ್ಷಿಗಳ ವರ್ಣನಾವಿಷಯದಲ್ಲಿ ಬದುಕಿನ ಬಹುಮುಖಗಳ ವೈಷಮ್ಯಗಳೆಲ್ಲ ಬಿಂಬಿತವಾಗಿದ್ದರೂ ಸರ್ವಾಕರ್ಷಣೀಯವಾದ ಸೊಬಗು ಮಾತ್ರ ಮಾಸುವುದಿಲ್ಲ. ಅವರ ಭಾವ, ಭಾಷೆ, ಗ್ರಂಥದ ವ್ಯಾಪ್ತಿ, ವೈಶಾಲ್ಯ, ಎಲ್ಲದರಲ್ಲಿಯೂ ಭವ್ಯತೆಯೇ ಮೈವೆತ್ತಂತೆ ಭಾಸವಾಗುತ್ತದೆ. ಹೀಗೆ ಒಂದು ಕಡೆ ಮಾನವನ ಸಾಂಸಾರಿಕ ಜೀವನದ, ಮಾನಸಿಕ ಜಗತ್ತಿನ, ಪದರ ಪದರಗಳನ್ನೂ, ಎಳೆ ಎಳೆಗಳನ್ನೂ, ನಿತ್ಯರಮಣೀಯವಾಗಿಯೂ ನಿಸರ್ಗಸುಂದರವಾಗಿಯೂ ವಾಲ್ಮೀಕಿಗಳು ಚಿತ್ರಿಸಿರುವಂತೆ, ಇನ್ನೊಂದು ಕಡೆ ವ್ಯಾಸರು ಮಾನವನ ರಾಜಕೀಯ ಜೀವನದ, ನೆಲೆ–ಸೆಲೆಗಳನ್ನೂ, ಗೊತ್ತು ಗುರಿಗಳನ್ನೂ, ನೀತಿ–ರೀತಿಗಳ ವೈಚಿತ್ರ್ಯ ವೈವಿಧ್ಯಗಳನ್ನೂ ರಾಮಾಯಣಕ್ಕಿಂತ ಹೆಚ್ಚಿನ ಗಾತ್ರದ ಮಹಾಭಾರತದಲ್ಲಿ ಬಣ್ಣಿಸಿದ್ದಾರೆ. ಈ ಎರಡು ಗ್ರಂಥಗಳೂ ಎರಡು ಮಹಾಸಾಗರಗಳಂತೆ ಅನರ್ಘ್ಯ ಕಥಾರತ್ನಗಳಿಗೆ ಆಕರಗಳು ; ಧರ್ಮನಿರೂಪಣೆಗೆ ಎರಡೂ ಆಧಾರಗಳು ; ಆದರ್ಶಪಾತ್ರಗಳಿಗೆ ಎರಡೂ ಬಾಳ್ಮನೆಗಳು. ಹೀಗೆ ಸರ್ವರಿಗೂ ನೀತಿಬೋಧೆ, ಜ್ಞಾನಪ್ರಸಾರ, ಮನೋರಂಜನೆ, ಮೂರು ಉದ್ದೇಶಗಳನ್ನು ಏಕಕಾಲದಲ್ಲಿ ಸಾಧಿಸುವ ಈ ಬೃಹದ್ಗ್ರಂಥಗಳಲ್ಲಿ ಕಾವ್ಯಕಲೆಯೊಂದನ್ನೇ ಸಾಧಿಸಬೇಕೆಂಬ ಸಾಹಸವಾಗಲಿ, ಸಿದ್ಧಿಯಾಗಲಿ, ಎರಡೂ ಇಲ್ಲ. ಇವೆರ

ಡರ ಮೂಲರಚನೆಯೂ ಕ್ರಿ. ಪೂ. ನಾಲ್ಕನೆಯ ಶತಮಾನದ ಹೊತ್ತಿಗೆ ಮುಗಿಯಿತೆಂದು ಸ್ಥೂಲವಾಗಿ ಹೇಳಬಹುದು.

ಅದೇ ಕಾಲದಲ್ಲಿ ಸಂಸ್ಕೃತದ ಜ್ಞಾನರಾಶಿ ವಿಶ್ವತೋಮುಖವಾಗಿ ಬೆಳೆಯತೊಡಗಿತು. ಕ್ರಿಸ್ತಶಕದ ಆರಂಭದ ವೇಳೆಗೆ ಆಗಲೇ ಒಂದು ಕಡೆ ಷಡ್ದರ್ಶನಗಳ ವ್ಯವಸ್ಥೆಯೂ ಇನ್ನೊಂದು ಕಡೆ ಶಿಕ್ಷಾ, ವ್ಯಾಕರಣ, ಛಂದಸ್ಸು ಮುಂತಾದ ವೇದಾಂಗಗಳ ಅಭಿವೃದ್ಧಿಯೂ ನಡೆದುವು. ಇವುಗಳಲ್ಲಿ ಒಂದೊಂದರ ಪೂರ್ಣಪಾಂಡಿತ್ಯಕ್ಕೂ ಅನೇಕ ವರ್ಷಗಳ ಅಭ್ಯಾಸ ಬೇಕಾಗುತ್ತಿತ್ತು. ಹೀಗಾಗಿ ಹಿಂದಿನಂತೆ ಸಕಲ ವಿದ್ಯಾಪಾರಂಗತರ ಸಂಖ್ಯೆ ಕಡಿಮೆಯಾಗುತ್ತಾ ವಿಶಿಷ್ಟ ವಿದ್ಯಾಪ್ರವೀಣರ ಸಂಖ್ಯೆ ಹೆಚ್ಚಿತು; ರಾಜಾಶ್ರಯದಿಂದ ಇಂತಹವರ ಪ್ರತಿಷ್ಠೆಯೂ ಹೆಚ್ಚಾಯಿತು. ಈ ನೂತನ ವಾತಾವರಣದಲ್ಲಿ ಕಾವ್ಯರಚನೆಯ ಸೂತ್ರಗಳನ್ನೂ ಶಾಸ್ತ್ರೀಯವಾಗಿ ನಿಷ್ಕರ್ಷಿಸುವ ಪ್ರಯತ್ನಗಳು ನಡೆದಿರಬೇಕು. 'ಅಲಂಕಾರವೇ ಜಾಣ್ನುಡಿಯ ಜೀವಾಳ; ಸಮಾಸದ ಸಮುಚಿತ ಸಂಯೋಜನೆಯಿಂದ ಶೈಲಿಯಲ್ಲಿ ಓಜೋಗುಣವೇ ಮುಂತಾದುವು ಬರುತ್ತವೆ; ಕಾವ್ಯದಲ್ಲಿ ವ್ಯಾಕರಣಾದಿ ದೋಷಗಳಿರಬಾರದು; ವರ್ಣನೆಯಿಲ್ಲದೆ ಕವಿಯೆನಿಸಲಾರ' ಇತ್ಯಾದಿ ಅಲಂಕಾರಶಾಸ್ತ್ರದ ಮೂಲಸೂತ್ರಗಳನ್ನೂ ಇಷ್ಟುಹೊತ್ತಿಗೆ ಆಗಲೇ ಶೋಧಮಾಡಿಯಾಗಿತ್ತು. ಈ ಕಾಲದ ಕವಿಗಳು ತಮ್ಮ ಬರವಣಿಗೆಯಲ್ಲಿ ಹೆಚ್ಚುಹೆಚ್ಚಾಗಿ ಈ ನಿಯಮಗಳನ್ನನುಸರಿಸಲಾರಂಭಿಸಿದರು. ಅನೇಕ ಕಥೋಪಕಥೆಗಳನ್ನುಳ್ಳ ಪುರಾಣದ ಬದಲು, ಒಂದೇ ಕಥೆಯ ಮುಖ್ಯಭಾಗವನ್ನಷ್ಟೆ ವಸ್ತುವನ್ನಾಗಿ ಮಾಡಿಕೊಂಡು ಅದರ ರಸಸ್ಥಾನಗಳನ್ನು ಮಾತ್ರ ಅಲಂಕಾರಮಯವಾದ ಭಾಷೆಯಲ್ಲಿ ಬಣ್ಣಿಸಲು ಉಪಕ್ರಮಿಸಿದರು. ಒಂದು ಯುದ್ಧದ ವಿಜಯ ವೃತ್ತಾಂತ, ಒಂದು ಕನ್ಯಾಹರಣ, ಒಂದು ರಾಜವಂಶ—ಇತ್ಯಾದಿಗಳನ್ನವಲಂಬಿಸಿ ಬರೆದ ಈ ಎರಡನೆಯ ಜಾತಿಯ ಮಹಾಕಾವ್ಯಗಳಲ್ಲಿ ಭಾವನಾವೇಶದ ಕಾವು ಕಡಿಮೆಯಾಗಿ ಬುದ್ಧಿಚಾತುರ್ಯದ ಹೊಳಪು ಕೋರೈಸುತ್ತದೆ; ಭಾಷೆಯ ಸ್ವಚ್ಛಂದ ಸುಂದರತೆ ಸಣ್ಣನಾಗಿ ವ್ಯಾಕರಣನಿಯಮಗಳ ಬಂಧನ ಹೆಚ್ಚಾಗುತ್ತದೆ. ಕಥೆಯ ವಿಸ್ತಾರ ಕುಂದಿ ವರ್ಣನಾವಿಲಾಸ ವಿಶೇಷವಾಗುತ್ತದೆ. ಕವಿದರ್ಶನದ ಜ್ಯೋತಿ ಮಂಕಾಗಿ ಶಾಸ್ತ್ರಾದಿ ಪಾಂಡಿತ್ಯ

ಪ್ರದರ್ಶನದ ಮೋಹ ತಲೆದೋರುತ್ತದೆ. ಕಾಳಿದಾಸನಿಗಿಂತ ಪೂರ್ವದಲ್ಲಿಯೇ —ಪಾಣಿನಿ, ವರರುಚಿ, ಮುಂತಾದ ವೈಯ್ಯಾಕರಣಿಗಳಿಂದ ಸಹ—ಹುಟ್ಟಿರ ಬಹುದಾದ ಹತ್ತಾರು ಮಹಾಕಾವ್ಯಗಳೆಲ್ಲವನ್ನೂ ಕಾಳಿದಾಸನ ರಘುವಂಶಾದಿ ಕೃತಿಗಳು 'ಇಕ್ಕಿ ಮೆಟ್ಟಿದುವು.' ಇದಕ್ಕೆ ಮುಖ್ಯವಾದ ಕಾರಣ ರಾಮಾ ಯಣಾದಿಗಳನ್ನೋದಿದ ರಸಿಕರಿಗೆ ಕಾಳಿದಾಸನು ಮೆಚ್ಚಾದಂತೆ ಉಳಿದವರು ಮೆಚ್ಚಾಗಲಿಲ್ಲ. ಕಾಳಿದಾಸನಲ್ಲಿ ಹೊಸ ದೃಷ್ಟಿ ಸೇರಿದ್ದರೂ ಅವನು ಮುಖ್ಯವಾಗಿ ವಾಲ್ಮೀಕಿಯ ಶಿಷ್ಯ ; ಪಾಂಡಿತ್ಯದಗ್ಧನಲ್ಲ. ಅವನ ಕವಿತಾ ರಸವನ್ನು ಸವಿದವರಿಗೆ ಹಿಂದಿನ ಕೃತಿಗಳು ಸಪ್ಪೆಯೆನಿಸಿರಬಹುದು. ಅವ, ನಲ್ಲಿ ಕೂಡ ರಸೈಕದೃಷ್ಟಿಯ ಜತೆಗೆ, ವಿವಿಧವೃತ್ತವಿಲಾಸವನ್ನೂ, ಉಪಮಾ ಉತ್ಪ್ರೇಕ್ಷಾ ಮುಂತಾದ ಅಲಂಕಾರ ವೈಭವವನ್ನೂ ಗುರುತಿಸಬಹುದು. ಕಥೆ ಕಿರಿದು, ವರ್ಣನೆ ಹಿರಿದು. ಆದರೆ ಶಾಸ್ತ್ರಾರ್ಥಯೋಜನೆ ಕಡಿಮೆ ; ಸಾರಾರ್ಥವಿವೇಕ ಹೆಚ್ಚು. ಕಾಳಿದಾಸನ ಮಾರ್ಗವನ್ನೇ ಅನುಸರಿಸಿ ಬೌದ್ಧಕವಿಯಾದ ಅಶ್ವಘೋಷನು ತನ್ನ 'ಸೌಂದರನಂದ' ಮತ್ತು 'ಬುದ್ಧಚರಿತ' ಎಂಬ ಮಹಾಕಾವ್ಯಗಳಲ್ಲಿ ಜನರಂಜನೆಯಂತೆ ಧರ್ಮ ಪ್ರಚಾರವನ್ನೂ ಮಾಡಲು ಪ್ರಯತ್ನಿಸಿದನು. ಹೀಗೆ ಸಂಸ್ಕೃತ ಮಹಾ ಕಾವ್ಯದ ಚರಿತ್ರೆಯ ಎರಡನೆಯ ಘಟ್ಟದಲ್ಲಿ ಕಾಳಿದಾಸನೇ ಶಿಖರ. ಕನ್ನಡಿ ಗರಿಗೆ ಸಂಸ್ಕೃತ ಕಾವ್ಯದ ಮೊದಲ ಘಟ್ಟದ ಪರಿಚಯವನ್ನು ಶ್ರೀಮಾನ್ ಕು. ವೆಂ. ಪು. ಮತ್ತು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ತಮ್ಮ ತಮ್ಮ ವೈಶಿಷ್ಟ್ಯವನ್ನು ಬಿಡದ ಪದ್ಯಗದ್ಯ ರಚನೆಗಳ ಮೂಲಕ ಮಾಡಿಕೊಟ್ಟಿದ್ದಾರೆ. ಎರಡನೆಯ ಘಟ್ಟದ ಶಿಖರಪ್ರಾಯನಾದ ಕಾಳಿದಾಸನ ಕಾವ್ಯಗಳನ್ನು ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟರು ಕನ್ನಡಿಸಿದ್ದಾರೆ. ಅಶ್ವ ಘೋಷನು ಮಾತ್ರ ಇನ್ನೂ ಕನ್ನಡ ಕವಿವೃಂದವನ್ನಾಕರ್ಷಿಸಿಲ್ಲ.

ಆದರೆ ಭಾರವಿ ಬರುವುದು ಮೂರನೆಯ ಘಟ್ಟದಲ್ಲಿ. ನಾನೂರು ವರ್ಷ ಗಳ ಕಾಲವನ್ನು ರಾಮಾಯಣಾದಿ ಮೂಲಕಾವ್ಯರಚನೆಯ ಅವಧಿಯೆಂದರೆ ಅದರ ಮುಂದಿನ ನಾನೂರು ವರ್ಷಗಳಲ್ಲಿ ಕಾಳಿದಾಸನು ಕವಿತಾರಾಜ್ಯದ ಚಕ್ರವರ್ತಿ. ಅದಕ್ಕೂ ಮುಂದಿನ ನಾನೂರು ವರ್ಷಗಳಲ್ಲಿ ಆ ಕವಿತ್ವ ಸಿಂಹಾಸನವು ಭಾರವಿಗೆ ಬರುತ್ತದೆ. ಇದಕ್ಕೂ ನೂತನ ವಿಚಾರ

ಧಾರಣೆಯೇ ಕಾರಣ. ಹಿಂದಿನ ಅವಧಿಯಲ್ಲಿ ಹುಟ್ಟಿದ ವಿದ್ಯೆಗಳಲ್ಲೆಲ್ಲ ಕೃಷಿ ಹೆಚ್ಚಾಗಿ ನಡೆದು ಕ್ಷೇತ್ರ ದೊಡ್ಡದಾದ ಕಾಲ ಇದು. ಒಂದೊಂದು ವಿದ್ಯಾಕ್ಷೇತ್ರವೂ ವೃದ್ಧಿಂಗತವಾಗಿ ವಿಸ್ತಾರವಾಗಿ ಬೆಳೆದ ಮೇಲೆ ಅದನ್ನು ಸಂರಕ್ಷಿಸುವ ಮತ್ತು ಮುಂದಿನ ಪೀಳಿಗೆಗಳಿಗೆ ತಿಳಿಸಿಕೊಡುವ ಭಾರವು ಸಮಾಜದ ಮೇಲೆ ಎಂದರೆ ವಿಶಿಷ್ಟವಿದ್ಯಾಸ್ಥಾನಗಳಲ್ಲಿ ನುರಿತ ಪಂಡಿತರ (Specialists) ಮೇಲೆ ಬಿದ್ದಿತು. ಈ ಕಾಲದಲ್ಲಿ ನಾಳಂದಾ, ತಕ್ಷಶಿಲಾ, ಐಹೊಳೆ, ಮುಂತಾದ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯಗಳು ಉಚ್ಛ್ರಾಯಸ್ಥಿತಿಗೆ ಬಂದು ಪರದೇಶದಿಂದಲೂ ವಿದ್ಯಾರ್ಥಿಗಳನ್ನಾಕರ್ಷಿಸುತ್ತಿದ್ದುವು. ಒಂದೊಂದು ಪ್ರಾಂತದಲ್ಲಿಯೂ ಪ್ರಜಾಕ್ಷೇಮಕ್ಕೆ ಗೊತ್ತುಗಾರರಾಗಿದ್ದ ರಾಜಾದಿಗಳ ಶಿಕ್ಷಣವ್ಯವಸ್ಥೆ ಅತ್ಯಗತ್ಯವಾಗಿದ್ದಿತು. ಇಂದು ಸರಕಾರ ಹಾಗೂ ವಿಶ್ವವಿದ್ಯಾಲಯಗಳು ಶಿಕ್ಷಣಶಾಸ್ತ್ರಕ್ಕೆ ಅನುಗುಣವಾಗಿ ಅಭ್ಯಾಸಪತ್ರಿಕೆ ಮತ್ತು ಪಠ್ಯಗ್ರಂಥಗಳನ್ನು ನಿಯಮಿಸುವಂತೆ ಪ್ರಾಚೀನ ಭಾರತದಲ್ಲಿಯೂ ಸಂಸ್ಕೃತ ಪಠ್ಯಗ್ರಂಥಗಳ ಅಗತ್ಯ ತೋರಿಬಂದಿತು. ಪೂರ್ವದಲ್ಲಿದ್ದ ಗ್ರಂಥಗಳೆಲ್ಲ ಬಾಲರಿಗೆ ಮಾತ್ರ ಅರ್ಹವಾಗುವಂತೆ ತೋರಿಬಂದುದರಿಂದ ಪ್ರೌಢ ಮತ್ತು ಉಚ್ಚಶಿಕ್ಷಣಕ್ಕಾಗಿ ನೂತನ ಗ್ರಂಥಗಳನ್ನು ರಚಿಸುವ ಪ್ರವೃತ್ತಿ ಯುಂಟಾಯಿತು. ಸಂಸ್ಕೃತ ಸಾಹಿತ್ಯದ ಮೊದಲನೆಯ ವರ್ಗದ ವಿದ್ಯಾರ್ಥಿಗಳಿಗೆ ವಾಲ್ಮೀಕಿ ವ್ಯಾಸರ ಬರವಣಿಗೆ ಉಚಿತವೆನಿಸಿದರೆ, ಅವರ ಮುಂದಿನ ವರ್ಗದವರಿಗೆ ಕಾಳಿದಾಸನ ಎರಡು ಕಾವ್ಯಗಳೂ ಅನುಗುಣವೆನಿಸಿದವು. ಆದರೆ ಪ್ರೌಢರಿಗೂ ಪ್ರಗಲ್ಭರಿಗೂ ಬೇಕಾದಂತಹ ಕಾವ್ಯರಚನೆ ಪ್ರಾಚೀನರಿಗೆ ಸಿಕ್ಕಲಿಲ್ಲವೆಂದು ತೋರುತ್ತದೆ.

ಏಕೆಂದರೆ ಅಂದಿನ ಶಿಕ್ಷಣ ಸಂಪ್ರದಾಯದಲ್ಲಿ ಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ, ಈ ಎಲ್ಲ ಸ್ವತಂತ್ರ ಶಾಸ್ತ್ರಗಳಲ್ಲೂ ಪ್ರತ್ಯೇಕ ಪರಿಚಯ ಮಾಡಿಕೊಡುವುದಲ್ಲದೆ ಪ್ರಾಯೋಗಿಕವಾಗಿ ಕಾವ್ಯಗಳ ಅಭ್ಯಾಸವನ್ನೂ ನಿಯೋಜಿಸುತ್ತಿದ್ದರು. ರಾಜರ ಆಸ್ಥಾನದಲ್ಲಿ ಶಾಸ್ತ್ರಪಂಡಿತರಾದ ವಾದಿ, ವಾಗ್ಮಿಗಳಿಗೆ ಸ್ಥಾನವಿದ್ದಂತೆಯೇ ಕಾವ್ಯಶಾಸ್ತ್ರಧುರೀಣರಾದ ಕವಿಗಳಿಗೂ ಸನ್ಮಾನವಿದ್ದಿತು. ಹೀಗೆ ಕವಿಗಳ ಬೆಲೆ ಕಟ್ಟುವುದಕ್ಕೆ, ತಾರತಮ್ಯ ಜ್ಞಾನಕ್ಕೆ ಸಹೃದಯರ ಅಭಿಪ್ರಾಯಕ್ಕಿಂತಲೂ ಹೆಚ್ಚಿನ ಪುರಸ್ಕಾರ ಪಂಡಿತ ವರ್ಗಕ್ಕೆ

ಬಂದಿತು. ಎಂದರೆ ಸುಮ್ಮನೆ ಕವಿಗಳಿಗಿಂತಲೂ 'ಪಂಡಿತಕವಿ' ಗಳು ಅಥವಾ 'ವಿದ್ವತ್ಕವಿ' ಗಳು ಹೆಚ್ಚಿನವರೆಂಬ ಭಾವನೆ ದೇಶದಲ್ಲೆಲ್ಲ ಹರಡಿತು. ಕಾಳಿದಾಸಾದಿ ಕವಿಗಳಲ್ಲಿಲ್ಲದ 'ಪಾಂಡಿತ್ಯವನ್ನು ವಿದ್ವತ್ಕವಿಗಳು ತೋರಿಸಿ ಎಲ್ಲರನ್ನೂ ಬೆರಗುಮಾಡಲು ಹಾತೊರೆಯುತ್ತಿದ್ದರು. ಕಾಳಿದಾಸನಿಗಿಂತ ಹೆಚ್ಚಿನ ಶಬ್ದಸಂಗ್ರಹ, ವೃತ್ತವೈವಿಧ್ಯ, ವ್ಯಾಕರಣಪ್ರಭುತ್ವ, ಶ್ಲೇಷ ಯಮಕಾದಿ ದುಷ್ಕರ ಅಲಂಕಾರಗಳನ್ನುಪಯೋಗಿಸುವ ಪ್ರಗಲ್ಭತೆ, ಚಿತ್ರ ಬಂಧಗಳನ್ನೂ, ಏಕಾಕ್ಷರಿ, ದ್ವ್ಯಕ್ಷರೀ, ಗತ–ಪ್ರತ್ಯಾಗತ ಮುಂತಾದ ಸಾಹಸ ಚಮತ್ಕಾರಗಳು, ಇವೇ ಮುಂತಾದುವನ್ನು ಮೆರೆಯಲು, ಮೇಲ್ಪಂಕ್ತಿ ತೋರಿಸಿದ ಮಹಾನುಭಾವನೇ ಭಾರವಿ. ಹೀಗೆ ಸಂಸ್ಕೃತ ಭಾಷಾವ್ಯುತ್ಪತ್ತಿಯ ದೃಷ್ಟಿಯಿಂದ ಅಭ್ಯಾಸಿಗಳಿಗೆ ಕಾಳಿದಾಸನಿಗಿಂತ ಹೆಚ್ಚಿನ ಉಪಯೋಗ ಭಾರವಿಯಿಂದಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗೆಯೇ ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಇವುಗಳ ಮರ್ಮಗಳೆಲ್ಲ ಕೈಪಿಡಿಯ ರೂಪದಲ್ಲಿರುವಂತೆ ಕಾವ್ಯದಲ್ಲಿ ಕೂಡಿಸಿರುವುದರಿಂದ, ರಾಜಪುತ್ರಾದಿಗಳ ಶಿಕ್ಷಣಕ್ಕೂ ಭಾರವಿಯ ಕಾವ್ಯವು ಹೆಚ್ಚು ಉಪಯುಕ್ತವೆನಿಸುತ್ತದೆ. ವಾಲ್ಮೀಕಿ, ಕಾಳಿದಾಸರಲ್ಲಿ ಬರುವ ಹತ್ತೆಂಟು ಅಲಂಕಾರಗಳ ಜತೆಗೆ ಇನ್ನೂ ಹಲವಾರು ಅಲಂಕಾರಗಳ ಚಮತ್ಕಾರವನ್ನಿಲ್ಲಿ ಮೊತ್ತಮೊದಲು ನೋಡಬಹುದು. ಸಂಸ್ಕೃತದಲ್ಲಿ 'ಮಹಾಕಾವ್ಯ'ದ ಲಕ್ಷಣವನ್ನು ಬರೆದಿರುವ ದಂಡಿ, ಭಾಮಹ, ಮುಂತಾದವರೆಲ್ಲರೂ [13] ಭಾರವಿಯ ಕಿರಾತಾರ್ಜುನೀಯವನ್ನು ನೋಡಿಕೊಂಡೇ ಲಕ್ಷಣ ಬರೆಯುತ್ತಿರುವರೆನ್ನಿಸುತ್ತದೆ; ಏಕೆಂದರೆ ಅವರು ಹೇಳುವ ಅಷ್ಟಾದಶವರ್ಣನೆ ಮುಂತಾದುವು ಭಾರವಿಯ ಕೃತಿಗೆ ಅನ್ವಯಿಸುವಷ್ಟು ಚೆನ್ನಾಗಿ ಪೂರ್ವದ ಕೃತಿಗಳಿಗೆ ಅನ್ವಯಿಸುವುದಿಲ್ಲ. ಹೀಗೆ ಅಲಂಕಾರಶಾಸ್ತ್ರದ ಅಂಗೀಕಾರ ಮುದ್ರೆ ದೊರೆತು, ರಾಜಾಶ್ರಯವೂ ಸಿಕ್ಕಿದ ಮೇಲೆ ಭಾರತವರ್ಷದಲ್ಲೆಲ್ಲ 'ಪಂಡಿತ ಕವಿ' ಗಳ ಕಾವ್ಯಕ್ಕೇ ಮನ್ನಣೆ ಹೆಚ್ಚುತ್ತಾ ಹೋಯಿತು; ಮುಂದಿನ ಭಟ್ಟಿ, ಮಾಘ, ಶ್ರೀಹರ್ಷ

---

13 ಇದೇ ಗ್ರಂಥಕರ್ತರ ಕನ್ನಡ ಕಾವ್ಯಲಂಕಾರ ಪುಟ ೯–೧೦, ಮತ್ತು ೧೪೩–೧೪೪ ನ್ನು ನೋಡಿ.

ಮುಂತಾದವರೆಲ್ಲರೂ ಸ್ಪರ್ಧೆಯಿಂದ ಭಾರವಿಯ ಮಾರ್ಗಾನುಯಾಯಿಗಳಾಗಿ ವಿದ್ವತ್ಕಾವ್ಯಗಳನ್ನು ಬರೆದರು. ವಿದ್ವಾಂಸರಾದವರಿಗೂ ಔಷಧಪ್ರಾಯ ವಾಗಿದ್ದಂತೆಲ್ಲ ಕಾವ್ಯದ ಬೆಲೆ ಹೆಚ್ಚೆನ್ನುವ ಅಭಿಪ್ರಾಯ ಪಂಡಿತವರ್ಗಗಳಲ್ಲಿ ಪ್ರಬಲಿಸಿತು. ಆನಂದವರ್ಧನನೇ ಮುಂತಾದ ಕೆಲವರು ಆಲಂಕಾರಿಕರು ಮಾತ್ರ 'ರಸ-ಧ್ವನಿ'ಯ ಮಹತ್ವವನ್ನು ಬಿಚ್ಚಿ ತೋರಿಸಿದರೂ ಕವಿ ಗಳಲ್ಲಿ ರೂಢಮೂಲವಾಗಿದ್ದ ಪಂಡಿತಪ್ರಿಯತೆ ಕುಗ್ಗಿದಂತೆ ಕಾಣುವು ದಿಲ್ಲ; ಕಾಳಿದಾಸನನ್ನು ಅನುಸರಿಸಿ ಮಹಾಕಾವ್ಯಗಳನ್ನು ಬರೆದವರ ಸಂಖ್ಯೆ ಬಹಳ ಸಣ್ಣದು. ಹೀಗೆ ಪಾಂಡಿತ್ಯಪ್ರಚುರವಾದ ಸಂಸ್ಕೃತ ಪ್ರೌಢಗ್ರಂಥ ವನ್ನು ದೇಶಭಾಷೆಗಳಲ್ಲಿ ಹೇಳುವುದು ಅಸಾಧ್ಯವೆಂದೋ ಏನೋ ಹಿಂದಿನ ಪಂಡಿತ ಕವಿಗಳಾರೂ ಭಾರವಿಯ ಕೃತಿಯನ್ನೇ ಆಗಲಿ, ಮಾಘ, ಹರ್ಷರ ಕೃತಿಗಳನ್ನೇ ಆಗಲಿ ಕನ್ನಡಿಸಲು ಹೊರಡಲಿಲ್ಲ.

ಭಾರವಿಯನ್ನು ಪ್ರೌಢ ಮಹಾಕಾವ್ಯಗಳ ನೂತನ ಸಂಪ್ರದಾಯಕ್ಕೆ ಪ್ರವರ್ತಕನೆಂದು ಹೇಳುವಾಗ, ಅವನ ಪಾಂಡಿತ್ಯ ಕಾಳಿದಾಸನಿಗಿಂತಲೂ ಹೆಚ್ಚಿನದೆನ್ನುವಾಗ, ಅವನ ಪ್ರತಿಭೆ ಕಾಳಿದಾಸನಿಗಿಂತ ಕಡಿಮೆಯದೆನ್ನುವ ಅರ್ಥಮಾಡಿಕೊಳ್ಳುವ ಕಾರಣವಿಲ್ಲ. ಹೀಗೆ ಅರ್ಥಮಾಡಿಕೊಂಡ ಇಂದಿನ ಕೆಲವು ಪಾಶ್ಚಾತ್ಯಪಂಡಿತರ ಬರೆವಣಿಗೆಗಳಿಂದ ಆ ಕಾವ್ಯಗಳ ಅಭ್ಯಾಸಕ್ಕೆ ಅಪಾರ ಹಾನಿಯಾಗಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ವಾಲ್ಮೀ ಕಿಯ ಭಾಷೆ ಅರ್ಥವಾಗಲು ಎಷ್ಟು ವ್ಯುತ್ಪತ್ತಿ ಸಾಕೋ, ಅಷ್ಟೇ ವ್ಯುತ್ಪತ್ತಿಯಿಂದ ಭಾರವಿಯ ಕಾವ್ಯ ಅರ್ಥವಾಗುವುದಿಲ್ಲವೆಂಬುದು ನಿಜ. ವಾಲ್ಮೀಕಿಯ ಅಥವಾ ಕಾಳಿದಾಸನಲ್ಲಿ ಕಾಣಬರದ ಅನ್ವಯಕ್ಲೇಶವೂ ಅಲ್ಲಲ್ಲಿ ಭಾರವಿಯ ಶ್ಲೋಕಗಳಲ್ಲಿ ಕಾಣಬಹುದು. ಆದರೆ ಅವೆಲ್ಲ ತೆಂಗಿನ ಕಾಯಿನ ಮೇಲ್ಗಡೆ ಇರುವ ಕರಟ, ನಾರುಗಳಂತೆ. ಸಣ್ಣಮಕ್ಕಳು ಅವು ಗಳನ್ನು ಕಂಡು ಹೆದರಬಹುದು. ಆದರೆ ಪ್ರೌಢರು ನಾರನ್ನು ತೆಗೆದು ಕರಟ ವನ್ನೊಡೆದೊಡನೆ ಸುರಿಯುವ ಎಳನೀರಿನ ಸವಿ ಮತ್ತಾವ ನೀರಿನಲ್ಲೂ ದುರ್ಲಭ. ಕಾವ್ಯವಿಮರ್ಶೆಯಲ್ಲಿ ಬಾಲತ್ವವನ್ನು ಕಳೆದುಕೊಂಡು ಪ್ರೌಢಿ ಮೆಯನ್ನು ಪಡೆಯಬೇಕಾದುದು ಸಾಹಿತ್ಯೋಪಾಸಕರ ಕರ್ತವ್ಯ. ಇದೇ ನ್ಯಾಯವನ್ನು ಕನ್ನಡದಲ್ಲಿ ಭಾರವಿಯ ಮಾರ್ಗದಲ್ಲಿ ಬರೆದಿರುವ ಪಂಪರನ್ನ

ರಿಗೂ ಅನ್ವಯಿಸಬಹುದು. ಅವರ ಶೈಲಿಯ ಪ್ರೌಢಿಮೆ ಅವರ ಪ್ರತಿಭೆಯ ಭವ್ಯತೆಗೆ ಸಾಧಕವೇ ಹೊರತು ಬಂಧಕವಲ್ಲ. ಕನ್ನಡದಲ್ಲಿ ಭಾರವಿಯ ಭಾವವನ್ನು ಮಾತ್ರ ತಂದು ತೋರಿಸಲು ಮಾಡಿರುವ ನಮ್ಮ ಪ್ರಥಮ ಪ್ರಯತ್ನದಿಂದ ಅವನ ಪ್ರತಿಭೆಯ ಎತ್ತರವನ್ನು ಗುರುತಿಸಲು ಪ್ರತಿಬಂಧಕಗಳ ನಿವಾರಣೆಯಾದರೂ ಆದೀತೆಂದು ಆಶಿಸುತ್ತೇವೆ. ಪ್ರಕೃತಿಯ ಸೌಮ್ಯತೆಯಂತೆ ಭೀಷಣತೆಯನ್ನೂ, ಮಾನವನ ಅಲ್ಪತೆಯಂತೆ ಭವ್ಯತೆಯನ್ನೂ, ರಾಜನೀತಿಯಂತೆ ಪ್ರಜಾಧರ್ಮವನ್ನೂ, ರತಿರಹಸ್ಯದಂತೆ ಯೋಗಮರ್ಮವನ್ನೂ, ಮಾತಿನ ಜಾಣ್ಮೆಯಂತೆ ಕೃತಿಯ ಮೇಲ್ಮೆಯನ್ನೂ, ಪರಮೇಶ್ವರನ ಪ್ರಭಾವದಂತೆ ಪುರುಷನ ಪ್ರತಾಪವನ್ನೂ, ಒಂದೇ ಕಾವ್ಯದಲ್ಲಿ, ನೂರಾರು ವೃತ್ತಗಳಿಂದ, ಸಾವಿರಾರು ಭಂಗಿಗಳಿಂದ, ಶಬ್ದಚಮತ್ಕೃತಿಯಿಂದ ಬೆಕ್ಕಸಗೊಳಿಸುವ ಚಿತ್ರಬಂಧಗಳಿಂದ, ಬಣ್ಣಿಸಿರುವ ಮಹಾಕಾವ್ಯ–ಕಿರಾತಾರ್ಜುನೀಯ. ಸಂಸ್ಕೃತ ಕಾವ್ಯಮಾಲಿಕೆಯಲ್ಲಿ ಅದರ ಸ್ಥಾನ ಪಂಡಿತಕವಿಗಳ ದೃಷ್ಟಿಯಿಂದ ಅದ್ವಿತೀಯವಾದುದು. ರಸೈಕತಾನರಾದ ಸಹೃದಯರ ದೃಷ್ಟಿಯಿಂದಲೂ ಗಣ್ಯವಾದುದು. ಏಕೆಂದರೆ ಮಹಾಕಾವ್ಯವು ಕೇವಲ ಸಂಪ್ರದಾಯವಾಗಿಬಿಟ್ಟಮೇಲೆ ಬರೆದ ಪಂಡಿತಕವಿಗಳಲ್ಲಿ ಕಾಣುವ ಅಂಧಾನುಕರಣಾದಿ ದೋಷಗಳು ಭಾರವಿಯಲ್ಲಿ ಸರ್ವಥಾ ಇಲ್ಲ. 'ಭಾರವಿ'ಯೆಂಬ ಹೆಸರು ಅವನ ಪ್ರತಿಭೆಯ ಭಾಸ್ವರ ಗುಣಕ್ಕೆ ಅನ್ವರ್ಥಕವಾಗಿ ಒಪ್ಪುತ್ತದೆ. ಸಂಸ್ಕೃತದಲ್ಲಿ ಒಂದು ಸುಭಾಷಿತವು ಹೇಳುವಂತೆ—

ಅವಯಃ ಕೇವಲಕವಯಃ
ಕೇವಲಕೀರಾಸ್ತು ಕೇವಲಂ ಧೀರಾಃ ।
ಕವಯಃ ಪಂಡಿತಕವಯಃ
ತಾನವಮನ್ತಾ ತು ಕೇವಲಂ ಗವಯಃ ॥

'ಸುಮ್ಮನೆ ಕವಿಗಳು ಕುರಿಗಳು; ಸುಮ್ಮನೆ ಪಂಡಿತರು ಗಿಳಿಗಳು. ಪಂಡಿತ ಕವಿಗಳು ಮಾತ್ರ ನಿಜಕ್ಕೂ ಕವಿಗಳು; ಅವರನ್ನು ತೆಗಳುವವರು ದನಗಳು.'

## ೩. 'ಕಿರಾತಾರ್ಜುನೀಯ'ದ ಸಮೀಕ್ಷೆ

### (i) ಪೂರ್ವಕವಿಪ್ರಶಸ್ತಿ

ಈಗಾಗಲೇ ನಾವು ನೋಡಿದಂತೆ ಭಾರವಿ ಮಹಾಕವಿ; ಮಹಾಕಾವ್ಯದ ನೂತನ ಸಂಪ್ರದಾಯದ ಸ್ಥಾಪನಾಚಾರ್ಯ, ಸಂಸ್ಕೃತ ಕಾವ್ಯಮಾರ್ಗದಲ್ಲಿ ಸೀಮಾಪುರುಷ. ಅವನು ಮಹಾಪಂಡಿತನೂ ಅಹುದು. ವೈಯಾಕರಣಿಗಳಲ್ಲಿ ವೈಯಾಕರಣ ಹೇಗೋ ಹಾಗೆಯೇ ರಾಜನೀತಿಯಲ್ಲಿ [illegible]ರದ; ಧರ್ಮಮಾರ್ಗಧುರಂಧರಹೇಗೋ ಹಾಗೆಯೇ ಸರ್ವತಂತ್ರ ಸ್ವತಂತ್ರ. ಒಂದು ಕಡೆ ರಸಿಕರಿಗೆ ಹೇಗೆ ಮೆಚ್ಚಿನವನೋ ಹಾಗೆಯೇ 'ಪಂಡಿತರಿಗೂ ವಿವಿಧ ಕಳಾಮಂಡಿತರಿಗೂ' ಇನ್ನೊಂದು ಕಡೆ ಪ್ರೀತಿಪಾತ್ರ. ಈತನು ಬರೆದ ಕೃತಿ 'ಕಿರಾತಾರ್ಜುನೀಯ' ವೊಂದೇ ಎಂದು ಕಾಣುತ್ತದೆ. ಅದರ ಸಮೀಕ್ಷೆಗೆ ತೊಡಗುವ ಮೊದಲು ಸಾವಿರಾರು ವರ್ಷಗಳಿಂದಲೂ ಸಂತತವಾಗಿ ಅದನ್ನು ಪರಿಶೀಲಿಸಿದ ಪೂರ್ವಸೂರಿಗಳು ಹೇಳುವ ಮಾತುಗಳನ್ನು ನೆನಪಿಗೆ ತಂದುಕೊಳ್ಳುವುದು ಉಚಿತ. ಅವನ್ನು ಲಕ್ಷ್ಯದಲ್ಲಿಡದಿದ್ದರೆ ನಮ್ಮ ಇಂದಿನ ಪೂರ್ವಗ್ರಹಗಳಿಂದ ವಿಮರ್ಶೆ ದೂಷಿತವಾಗುವ ಸಂದರ್ಭವುಂಟು:–

೧. ಉಪಮಾ ಕಾಳಿದಾಸಸ್ಯ **ಭಾರವೇರರ್ಥಗೌರವಮ್** ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ ॥

ಇದು ಜನಜನಿತವಾಗಿ ಚಿರಪರಿಚಿತವಾದ ಸಮೀಕ್ಷೆ. ಕಾಳಿದಾಸನ ಅಸಾಧಾರಣ ಗುಣವು ಉಪಮಾಲಂಕಾರಗಳಲ್ಲಿರುವಂತೆ ಭಾರವಿಯ ಮೇಲ್ಮೆ 'ಅರ್ಥಗೌರವ'ದಲ್ಲಿ ಎಂದು ಒಬ್ಬ ಮಹಾಕವಿಯ ಮಹತ್ವವನ್ನೆಲ್ಲ ಒಂದು ಮಾತಿನಲ್ಲಿ ಅಳಿದು ಮುಗಿಸುವ ಈ ಸಮೀಕ್ಷೆ ಆಪಾತತಃ ಆಶ್ಚರ್ಯಜನಕವಾಗಬಹುದು. ಆದರೆ ಆ ಮಾತಿನ ಹಿಂದೆ ಅಡಗಿರುವ ಸೂಚನೆಗಳನ್ನೂ ಲಕ್ಷ್ಯದಲ್ಲಿ ತಂದರೆ ಅದರ ಸಾರ್ಥಕ್ಯದ ಕಲ್ಪನೆಯುಂಟಾಗುತ್ತದೆ. 'ಸರ್ವೋಪಮಾದ್ರವ್ಯಸಮುಚ್ಚಯೇನ ಯಥಾಪ್ರದೇಶಂ ವಿನಿವೇಶಿತೇನ' ಎಂದು ಮುಂತಾಗಿ ಪಾರ್ವತಿಯ ಸೌಂದರ್ಯವನ್ನು ವರ್ಣಿಸುವ ವ್ಯಾಜದಿಂದ ತನ್ನ ಕಾವ್ಯಸೌಂದರ್ಯದ ರಹಸ್ಯವನ್ನೂ ಕಾಳಿದಾಸನೇ ಸೂಚಿಸು

ತ್ತಿರುವುದನ್ನು ಮನಗಂಡ ಸಹೃದಯನೊಬ್ಬನು 'ಉಪಮಾ ಕಾಳಿದಾಸಸ್ಯ' ಎಂದು ಉದ್ಗರಿಸಿದಂತೆಯೇ ಭಾರವಿ ಎರಡನೆಯ ಸರ್ಗದಲ್ಲಿ ಭೀಮನ ಉಕ್ತಿಚಾತುರ್ಯವನ್ನು ಯುಧಿಷ್ಠಿರನ ಬಾಯಿಂದ ಬಣ್ಣಿಸುವ ನೆವದಿಂದ ತನ್ನ ಕಾವ್ಯವೈಶಿಷ್ಟ್ಯವನ್ನು ಧ್ವನಿಸುತ್ತಿರುವನೆಂಬುದನ್ನು ಸಹ ಅರಿತ ಆ ಸಹೃದಯನೇ 'ಭಾರವೇರರ್ಥಗೌರವಮ್' ಎಂದು ಸೂತ್ರಪ್ರಾಯವಾಗಿ ನುಡಿದಿದ್ದಾನೆ. ತನ್ನ ಸೌಂದರ್ಯ ಕೃತಿಗೆ ತಾನೆ ಮಣಿಯುವ ಅನುಭವ ಮಹಾಕವಿಗಳಿಗೂ ಕಲೆಗಾರರಿಗೂ ಸಹಜವಾದುದು. ಲೋಕಮಾತೆ ಪಾರ್ವತಿಯ ಸೌಂದರ್ಯವನ್ನು ಬಣ್ಣಿಸಿದ ಕಾಳಿದಾಸನಿಗೆ ಈ ಅನುಭವ ಒಂದು ಸಲ ಬಂದಿತ್ತು. ಹಾಗೆಯೇ ದುರ್ಯೋಧನನ ರಾಜ್ಯಭಾರದ ವೈಭವವನ್ನು ಕೇಳಿದ ಮೇಲೆಯೂ ಪ್ರಶಾಂತಚಿತ್ತನಾಗಿದ್ದ ಯುಧಿಷ್ಠಿರನನ್ನು ಕೆರಳಿಸುವಂತಹ ನುಡಿಗಳನ್ನು ದ್ರೌಪದಿಯಿಂದಲೂ, ಅವುಗಳಿಗೆ ಶಾಸ್ತ್ರೀಯವಾದ ಸಮರ್ಥನೆಯನ್ನು ಭೀಮನಿಂದಲೂ ಮಾಡಿಸಿದೊಡನೆ ಭಾರವಿಗೂ ತನ್ನ ನಿರ್ಮಾಣದ ಬಗ್ಗೆ ತನಗೇ ಪ್ರಶಂಸೆ ಉಕ್ಕಿ ಬಂದುದು ಸ್ಪಷ್ಟವಾಗಿದೆ. ಆ ಪ್ರಶಂಸೆಯನ್ನು ಧರ್ಮರಾಯನ ಬಾಯಿಂದ ನುಡಿಸಿದ್ದಾನೆ. ಇದಕ್ಕೆ ಅಲಂಕಾರಶಾಸ್ತ್ರದಲ್ಲಿ 'ಕವಿನಿಬದ್ಧಪ್ರೌಢೋಕ್ತಿ' ಎನ್ನುತ್ತಾರೆ. (ಕವಿನಿಬದ್ಧ ಎಂದರೆ ಕವಿಸೃಷ್ಟಿಯ ಪಾತ್ರ ಎಂದರ್ಥ) ಕಾಳಿದಾಸನ ಉಪಮಾಪ್ರೇಮವು **ಕವಿಪ್ರೌಢೋಕ್ತಿ;** ಭಾರವಿಯ ಅರ್ಥಗೌರವ ಕವಿನಿಬದ್ಧ **ಪ್ರೌಢೋಕ್ತಿ** ಎಂದು ಮೊದಲು ನೆನಪಿನಲ್ಲಿಡಬೇಕು. ಇದನ್ನು ನೆನಪಿನಲ್ಲಿಡದಿದ್ದರೆ 'ಅರ್ಥಗೌರವ' ಎಂಬ ಪದಕ್ಕೇ ಅನರ್ಥಕಾರಿಯಾದ ಅಪಾರ್ಥ ಮಾಡುವ ಸಂಭವವಿರುತ್ತದೆ. ಯಾವ ಕವಿಯ ಸೂಕ್ತಿಯಲ್ಲೂ ನಿರರ್ಥಕತ್ವ ಅಥವಾ ಅರ್ಥಶೂನ್ಯತೆಯಿರಲಾರದು; ಶಬ್ದಗಳೆಲ್ಲ ಸಾರ್ಥಕವಾಗಿಯೇ ಇರುತ್ತವೆ. ಅರ್ಥಗೌರವವೆಂದರೆ ಕಾವ್ಯದ ಸಾರಾರ್ಥವಾದ ವ್ಯಂಗ್ಯಾರ್ಥದ ವೈಭವವೆಂದೂ ತಿಳಿಯಲವಕಾಶವಿಲ್ಲ; ಏಕೆಂದರೆ ಇದೂ ಕಾಳಿದಾಸನಲ್ಲಿ ಅಪಾರವಾಗಿಯೇ ಇದೆ. ರಸಸಂಪತ್ತು ಕಾಳಿದಾಸನಿಗಿಂತ ಇನ್ನಾವ ಕವಿಯಲ್ಲೂ ಮಿಗಿಲೆನ್ನುವುದು ಸಾಹಸದ ಮಾತು. ಹಾಗಾದರೆ ಒಂದೊಂದು ಶಬ್ದಕ್ಕೂ ನಾನಾರ್ಥಗಳಿರುವ ಶ್ಲೇಷಾಲಂಕಾರ ಹೆಚ್ಚಿನ್ನೋಣವೇ ಎಂದರೆ ಭಾರವಿ ಶ್ಲೇಷಾಲಂಕಾರಪ್ರಿಯನೂ ಅಲ್ಲ; ಆ ಅಲಂಕಾರವನ್ನು ಅತಿ

ಯಾಗಿ ಬೆಳೆಸಿಯೂ ಇಲ್ಲ. ಹೀಗೆ ಹೆಚ್ಚಿನ ಅರ್ಥವೆಂದರೆ ಯಾವುದೆಂದು ಸಹೃದಯರು ಸಂದೇಹಪಡುವಂತಾಗುತ್ತದೆ. ಭಾರವಿಯ ನಿರ್ದಿಷ್ಟಶ್ಲೋಕ ವನ್ನೇ ಓದದಿದ್ದರೆ—

ಸ್ಫುಟತಾ ನ ಪದೈರಪಾಕೃತಾ ನ ಚ ನ ಸ್ವೀಕೃತಮರ್ಥಗೌರವಮ್।
ರಚಿತಾ ಪೃಥಗರ್ಥತಾ ಗಿರಾಂ ನ ಚ ಸಾಮರ್ಥ್ಯಮಪೋಹಿತಂ
ಕ್ವಚಿತ್ ॥ —II. 27.

ಸ್ಫುಟತೆಯಿರದ ನುಡಿಗಳಲ್ಲಿ ಬಂದಿತರ್ಥಗೌರವ
ಕೊಳ್ಳುತೆಲ್ಲಸಾರ್ಥವ ।
ಮಾತಿಗೆಲ್ಲ ನೂತನಾರ್ಥವಿರ್ಪುದೆಲ್ಲು ಕುಂದದು
ಸಮರ್ಥಕತ್ವವೆಂಬುದು ॥

ಮೇಲೆ ಹೇಳಿರುವಂತೆ ಇಲ್ಲಿಯು ಸಂದರ್ಭವನ್ನು ಗಮನಿಸಿದರೆ ಭೀಮನ ಮಾತಿನಲ್ಲಿ ಬರಿಯ ವೀರನ ಆರ್ಭಟವಾಗಲಿ, ಹೆಂಗಸಿನ ಆವೇಶವಾಗಲಿ ಇರದೆ ರಾಜನೀತಿಜ್ಞನ ಅಥವಾ ಅರ್ಥಶಾಸ್ತ್ರ ವಿಶಾರದನ ತೂಕವೂ ಇತ್ತೆಂಬುದು ಕವಿಯ ಆಶಯ. ಅರ್ಥವೆಂದರೆ ಮನಸ್ಸಿನಲ್ಲಿ ಉದ್ದೇಶಿಸಿದ ಅಭಿಪ್ರಾಯವೆಂದೂ ಆಗಬಹುದು (' ಇಷ್ಟಾರ್ಥ ' ಎಂಬಂತೆ); ಸಂಪತ್ತಿನ ಹೆಚ್ಚಿಗೆಯೆಂದೂ ಆಗಬಹುದು; ಭೀಮನು ರಾಜ್ಯಲಾಭಕ್ಕಾಗಿ ವಾದಿಸುತ್ತಿದ್ದುದರಿಂದ. ಹೀಗೆ ಈ ಎಲ್ಲ ಅಭಿಪ್ರಾಯಗಳನ್ನೂ ಭಾಷಾಂತರದಲ್ಲಿ ' ಕೊಳ್ಳುತೆಲ್ಲ ಸಾರ್ಥವ ' ಎಂದಂತೆ— ಕೂಡಿಸಿಕೊಂಡು ಅರ್ಥಮಾಡಿಕೊಂಡರೆ ಭಾರವಿ ಕಿರಿದರಲ್ಲಿ ಪಿರಿದರ್ಥವನ್ನು ಹೇಳುವ ಗುಣವುಳ್ಳವನೆಂಬುದು ಸೂಚಿತವಾಗುವಂತೆ ಅರ್ಥಶಾಸ್ತ್ರಪಾರಂಗತನೆಂಬುದೂ ವೇದ್ಯವಾಗುತ್ತದೆ. ಇಷ್ಟಾರ್ಥದಾಯಕನೆಂಬ ಅಭಿಪ್ರಾಯ ತೋರುವಂತೆ ಸಂಪದಭಿವೃದ್ಧಿಗೆ ಕಾರಕನೆಂಬುದೂ ಹೊಳೆಯುತ್ತದೆ. ಹೀಗೆ ಮಮ್ಮಟನು ಸಹೃದಯನಿಗೆ ಹೇಳುವ ಕಾವ್ಯಪ್ರಯೋಜನಗಳೆಲ್ಲವೂ—ಅರ್ಥ, ವ್ಯವಹಾರ ಜ್ಞಾನ, ಅಮಂಗಲನಿವಾರಣೆ, ಪರಮಾನಂದ—' ಅರ್ಥಗೌರವ ' ಎಂಬ ಒಂದು ಸಂಕ್ಷಿಪ್ತ ಸಮೀಕ್ಷೆಯಿಂದಲೇ ಸೂಚಿತವಾಗಿದೆಯೆಂದು ಹೇಳಬಹುದಲ್ಲವೆ? ಕಾಳಿದಾಸನಲ್ಲಿ ಅರ್ಥಶಾಸ್ತ್ರದ ಉಪದೇಶವು ಬರುವುದಿಲ್ಲವಾದ್ದರಿಂದ ಭಾರವಿಯ ಕಾವ್ಯಕ್ಕೆ ಅದು ಅಸಾಧಾರಣಗುಣವೆಂದು ತಿಳಿದರೆ ತಪ್ಪಿಲ್ಲ.

'ಗೌರವ' ಎಂದರೆ 'ಗುರುವಿನ ಭಾವ' ಅಥವಾ ಆಚಾರ್ಯತ್ವ ಎಂದರೆ ಸಾಧಾರವಾಗಿ ಮಾರ್ಗದರ್ಶನಮಾಡುವ ಸಾಮರ್ಥ್ಯ ಎಂಬ ತಾತ್ಪರ್ಯಕ್ಕೂ ಎಡೆಯಿಲ್ಲದೆ ಇಲ್ಲ. ಮತ್ತೆ ಹದಿನಾಲ್ಕನೆಯ ಸರ್ಗದ ಐದನೆಯ ಶ್ಲೋಕದಲ್ಲಿ "ಸ್ತುವಂತಿ ಗುರ್ವೀಮಭಿಧೇಯ ಸಂಪದಂ" ಎಂದು ಭಾರವಿಯೇ ಹೇಳುವಾಗ ವರ್ಣಿತವಾದ ವಿಷಯವು ಮಹತ್ವವುಳ್ಳುದು ಎಂಬರ್ಥವನ್ನೇ ಸೂಚಿಸುತ್ತಾನೆ. ಭವಭೂತಿಯೂ 'ಅರ್ಥತೋ ಗೌರವಂ' ಎಂಬ ಮಾತನ್ನು ಮುಂದೆ ತನಗೆ ಅನ್ವಯಿಸಿಕೊಂಡು ಹೇಳುವುದನ್ನೂ ಹೋಲಿಸಬಹುದು.

೨. ಪ್ರದೇಶವೃತ್ತ್ಯಾಪಿ ಮಹಾಂತಮರ್ಥಂ ಪ್ರದರ್ಶಯನ್ತೀ
ರಸಮಾದಧಾನಾ ।
ಸಾ ಭಾರವೇಃ ಸತ್ಪಥದೀಪಿಕೇವ ಶಮ್ಯಾ ಕೃತಿಃ ಕೈರಿವ
ನೋಪಜೀವ್ಯಾ ॥
—ಕೃಷ್ಣ ಕವಿ

'ಒಂದೇ ಕಡೆ ಇದ್ದರೂ ಸುತ್ತುಮುತ್ತಿನ ವಸ್ತುನಿಕರವನ್ನೆಲ್ಲ ಬೆಳಗುತ್ತಾ, ಆನಂದವನ್ನು ತರುವ ದಾರಿದೀಪದಂತೆ ಭಾರವಿಯ ಕೃತಿ ರಮಣೀಯವೂ ಸಕಲರಿಂದ ಸಂಸೇವ್ಯವೂ ಆಗಿದೆ.'

ಇಲ್ಲಿ ಕೃಷ್ಣಕವಿ ಕಿರಾತಾರ್ಜುನಿಯವನ್ನು ದಾರಿದೀಪಕ್ಕೆ ಹೋಲಿಸಿದ್ದಾನೆ. ಅದಕ್ಕೆ ಕಾರಣ ನಾವು ಮೊದಲೇ ವಿವರಿಸಿರುವಂತೆ ಭಾರವಿಯ ಸಂಪ್ರದಾಯ ಪ್ರವರ್ತಕತ್ವ. ಮಹಾಕಾವ್ಯಗಳ ತಾರತಮ್ಯವನ್ನು ಸ್ವರೂಪವನ್ನು, ಚೆನ್ನಾಗಿ ತಿಳಿಯಲು ಕಿರಾತಾರ್ಜುನೀಯ ದಾರಿಯಲ್ಲಿ ನಿಂತಿರುವ ದೀಪದಂತೆ. ಈ ಉಪಮಾನವು ಉತ್ತಮವಾಗಿದೆ. ಅದರಂತೆ ಕೃತಿಯಲ್ಲಿ ಕಾವ್ಯರಸವೂ ನಿರರ್ಗಳವಾಗಿ ಹರಿಯುವುದನ್ನು ಇಲ್ಲಿ ಸೂಚಿಸಲಾಗಿದೆ.

೩. 'ತಾದಾತ್ಮ್ಯಂ ಭಾವರಸಯೋಃ ಭಾರವಿಃ ಸ್ಪಷ್ಟಮೂಚಿವಾನ್'

ಇಲ್ಲಿ ಭಾರವಿಗೆ ಭಾವ–ರಸಗಳಲ್ಲಿರುವ ಅಭಿಮಾನವನ್ನು ಬೆರಳು ಮಾಡಿ ತೋರಿಸಿದೆ. ಕಾವ್ಯದಲ್ಲಿ ಭಾವವೇ ಪರಿಪುಷ್ಟವಾಗಿ ರಸವೆನಿಸುವುದೆಂದು ಪ್ರಾಚೀನ ಆಲಂಕಾರಿಕರ ಸಿದ್ಧಾಂತ. ಮನುಷ್ಯನ ಅಂತರಂಗದಲ್ಲಿ ವಾಸನಾತ್ಮಕವಾಗಿ ಇರುವ ರತಿ, ಕ್ರೋಧ, ಉತ್ಸಾಹ, ಮುಂತಾದ ಮುಖ್ಯ ಚಿತ್ತವೃತ್ತಿಗಳೇ ಭಾವ ಅಥವಾ ಸ್ಥಾಯಿಭಾವಗಳು. ಇವುಗಳ ಕಾರಣ,

ಕಾರ್ಯ,[೪] ಸಹಕಾರಿಗಳನ್ನು ಅಥವಾ ಶಬ್ದಾಂತರದಿಂದ ಹೇಳುವುದಾದರೆ ವಿಭಾವ, ಅನುಭಾವ, ವ್ಯಭಿಚಾರಿಗಳನ್ನು ಕಾವ್ಯದಲ್ಲಿ ಯಥೋಚಿತವಾಗಿ ವರ್ಣಿಸಿದರೆ ರತ್ಯಾದಿ ಭಾವಗಳು ಶೃಂಗಾರಾದಿರಸಗಳಾಗಿ ಪರಿಣಮಿಸಿ ರಸಿಕರ ಆನಂದಕ್ಕೆ ಕಾರಣವಾಗುತ್ತವೆ. ಪಾತ್ರಗಳ ಭಾವಗಳು ಯಾವ ಕವಿಯ ವರ್ಣನೆಯಲ್ಲಿ ರಸಿಕನಿಗೆ ರಸವಾಗಿ ಪರಿಣಮಿಸದೆ ಭಾವವಾಗಿಯೇ ಉಳಿದು ಬಿಡುತ್ತವೋ ಅವನಿಗೆ ಕಾವ್ಯಸಿದ್ಧಿಯಿಲ್ಲವೆಂದು ಸಂಸ್ಕೃತ ಲಾಕ್ಷಣಿಕರ ಮತ. ಭಾರವಿಯ ಕೃತಿಯಲ್ಲಿ ಮಾತ್ರ ರಸವಾಗಿ ಪರಿಣಮಿಸದ ಭಾವವೇ ಇಲ್ಲ. ಭಾವ, ರಸ, ಎರಡೂ ಒಂದೇ ಆಗುತ್ತವೆ ಎಂದರೆ ಅವನ ಕಾವ್ಯಸಿದ್ಧಿಯು ಒಬ್ಬ ಹೆಚ್ಚಿನ ಮಟ್ಟದ್ದು ಎಂದಂತಾಯಿತು.

೪. ಸುಬಂಧೌ ಭಕ್ತಿರ್ನಃ ಕ ಇಹ ರಘುಕಾರೇ ನ ರಮತೇ
ಧೃತಿರ್ದಾಕ್ಷೀಪುತ್ರೇ ಹರತಿ ಹರಿಚಂದ್ರೋಽಪಿ ಹೃದಯಮ್ ।
ವಿಶುದ್ಧೋಕ್ತೇಃ ಸೂರಃ **ಪ್ರಕೃತಿಮಧುರಾ ಭಾರವಿಗಿರಃ**
ತಥಾಪ್ಯನ್ತರ್ಮೋದಂ ಕಮಪಿ ಭವಭೂತಿರ್ವಿತನುತೇ ||
—ಸದುಕ್ತಿಕರ್ಣಾಮೃತ.

'ಸುಬಂಧುವನ್ನು ಕಂಡರೆ ನಮಗೆ ಭಕ್ತಿ; ಕಾಳಿದಾಸನನ್ನು ಮೆಚ್ಚದವರಾರು?; ಪಾಣಿನಿಯಲ್ಲಿ ಆಸಕ್ತಿಯುಂಟು; ಹರಿಚಂದ್ರನೂ ಹೃದ್ಯನೇ; ಸೂರನಲ್ಲಿ ಶುದ್ಧವಾದ ಸೂಕ್ತಿಗಳುಂಟು. **ಭಾರವಿಯ ಸೂಕ್ತಿಗಳು ಪ್ರಕೃತಿಮಧುರ.** ಆದರೂ ಭವಭೂತಿ ತರುವ ಆನಂದವೇ ಬೇರೆ.'

ಈ ವಿಮರ್ಶಕನು ಭಾರವಿಯ ಮಾತುಗಳ ಮರ್ಮವೇ ಮಾಧುರ್ಯ ಗುಣವೆಂದು ಸಾರುತ್ತಿದ್ದಾನೆ. ರಸವತ್ಕಾವ್ಯದ ಗುಣವೇ ಮಾಧುರ್ಯವೆಂದೂ, ಗ್ರಾಮ್ಯತ್ವವು ಅದನ್ನು ಕೆಡಿಸುವ ದೋಷವೆಂದೂ, ಸಮಾಸಗಳು ಅತಿಯಾಗದ ರಚನೆಯೇ ಇದರ ಲಕ್ಷಣವೆಂದೂ ಆಲಂಕಾರಿಕರು ಹೇಳುತ್ತಾರೆ. (ಹೋಲಿಸಿ **ಕನ್ನಡ ಕಾವ್ಯಾಲಂಕಾರ,** ಪು. ೨೨ ಮತ್ತು ೧೫೧-೪.) ಕಿರಾತಾರ್ಜುನೀಯದ ಕವಿಗೆ ಸಹಜವಾಗಿಯೇ ಎಂದರೆ ಪ್ರಯತ್ನದ ಶ್ರಮವೇ ಇಲ್ಲದೆ ಈ ಮಾಧುರ್ಯಗುಣ ಸಿದ್ಧಿಸಿದೆಯೆಂಬುದು ವಿಮರ್ಶಕನ ಅಭಿಪ್ರಾಯ. ಇದನ್ನು ಭಾರವಿಯ ಶೈಲಿಗೆ ಅನ್ವಯಿಸಿಕೊಳ್ಳಬಹುದು.

ಅವನ ರಚನೆಯಲ್ಲಿ ಶಬ್ದಾಡಂಬರವೂ ದೀರ್ಘಸಮಾಸಗಳೂ ಗ್ರಾಮ್ಯ ದೋಷವೂ ಇಲ್ಲ ; ಮಧುರವಾದ ಪದಾವಲಿಗಳು ರಸಾವಹವಾಗಿವೆ.

೫-೬. ಮಾಘೇನ ವಿಘ್ನಿತೋತ್ಸಾಹಾಃ ನೋತ್ಸಹನ್ತೇ ಪದಕ್ರಮಮ್ ।
ಸ್ಮರನ್ತೋ ಭಾರವೇರೇವ ಕವಯಃ ಕಪಯೋ ಯಥಾ ॥
ತಾವದ್ಭಾ ಭಾರವೇರ್ಭಾತಿ ಯಾವನ್ಮಾಘಸ್ಯ ನೋದಯಃ ।
ಉದಿತೇ ತು ಪುನರ್ಮಾಘೇ ಭಾರವೇರ್ಭಾ ರವೇರಿವ ॥

ಇವೆರಡು ಶ್ಲೋಕಗಳಲ್ಲೂ 'ಭಾರವಿ' 'ಮಾಘ', ಈ ಶಬ್ದಗಳ ಉಭಯಾರ್ಥಗಳನ್ನಾಶ್ರಯಿಸಿ ಬರುವ ಶ್ಲೇಷೆಯ ಚಮತ್ಕಾರವಿದೆ. 'ಭಾರವಿ' ಯೆಂದರೆ ಕವಿಯ ಹೆಸರಿನಂತೆ ಸುಡುವ ಸೂರ್ಯನೆಂಬರ್ಥವೂ ಇದೆ. ಹಾಗೆಯೇ 'ಮಾಘ' ಎಂದರೂ ಕವಿಯ ಹೆಸರಿನಂತೆ 'ಚಳಿಯ ಮಾಸ' ವೆಂಬ ಅರ್ಥವೂ ಇದೆ.

ಮಾಘನೆಂದರೆ ಕವಿಗಳ ಉತ್ಸಾಹಕ್ಕೆ ಚಳಿ ಬಂದಂತೆಯೇ. ಕಪಿಗಳು ಚಳಿಯಲ್ಲಿ ಕಾಲಿಡಲು ಹಿಂತೆಗೆಯುವಂತೆಯೇ ಕವಿಗಳು ಪದವಿಡಲು ಹಿಂತೆ ಗೆಯುತ್ತಾರೆ. ಕಪಿಗಳು ನಡುಗುತ್ತಾ ಸುಡುಬಿಸಿಲನ್ನು ಬಯಸುವಂತೆ ಕವಿ ಗಳೂ ಅಳುಕುತ್ತಾ ಭಾರವಿಯನ್ನೇ ನೆನೆಯುತ್ತಾರೆ.

ಮಾಘೋದಯವಾಗುವವರೆಗೆ ಮಾತ್ರ ಭಾರವಿಯ ತೇಜವು ಪ್ರಕಾಶಿ ಸುತ್ತದೆ. ಮಾಘೋದಯವಾದ ಮೇಲೆ ಭಾರವಿಯ ತೇಜವು ಸೂರ್ಯನ ತೇಜದಂತೆಯೇ (ಕುಂದುತ್ತದೆ.) ಈ ಎರಡು ಶ್ಲೋಕಗಳಲ್ಲಿಯೂ ಅರ್ಥ ಚಮತ್ಕಾರಕ್ಕಿಂತ ಶಬ್ದಚಮತ್ಕಾರವೇ ಹೆಚ್ಚು, ಆದರೂ ಭಾರವಿ, ಮಾಘ, ಇಬ್ಬರೂ ಕೀರ್ತಿಗೆ ಸ್ಪರ್ಧಿಸುವ ಮಹಾಕವಿಗಳೆಂಬ ಅಂಶವೂ, ಭಾರವಿಯ ಕೀರ್ತಿ ಸೂರ್ಯನ ತೇಜದಂತೆ ಒಮ್ಮೆ ಕುಂದಿದ ಹಾಗಿದ್ದರೂ ಚಿರಸ್ಥಾ ಯಿಯಾದುದೆಂಬ ಅಂಶವೂ ಗಮನಾರ್ಹ.

೭. ವೃತ್ತಚ್ಛತ್ರಸ್ಯ ಸಾ ಕಾಪಿ ವಂಶಸ್ಥಸ್ಯ ವಿಚಿತ್ರತಾ ।
ಪ್ರತಿಭಾ ಭಾರವೇರ್ಯೇನ ಸಚ್ಛಾಯೇನಾಧಿಕೀಕೃತಾ ॥
—ಕ್ಷೇಮೇಂದ್ರ (ಸುವೃತ್ತತಿಲಕ)

'ಸುವೃತ್ತತಿಲಕ' ವೆಂಬ ಛಂದೋಗ್ರಂಥವನ್ನು ಬರೆದ ಪ್ರಸಿದ್ಧ ಕವಿ ಕ್ಷೇಮೇಂದ್ರನು ಭಾರವಿಯ ವೃತ್ತಕೌಶಲವನ್ನು ಶ್ಲಾಘಿಸಿದ್ದಾನೆ. 'ವೃತ್ತ'

ಗಳನ್ನು ಕೊಡೆಯೆಂದು ಭಾವಿಸಿದರೆ ಕೊಡೆಗೆ ಬಿದುರಿನ ಕೋಲು ಇದ್ದಂತೆ ವಂಶಸ್ಥವೆಂಬ ವೃತ್ತವು ರಾಜಿಸುತ್ತದೆ. ಅದರ ಚಮತ್ಕಾರದಿಂದಲೇ ಭಾರವಿಯ ಪ್ರತಿಭೆ ಮತ್ತಷ್ಟು ಉಜ್ಜ್ವಲವಾಗಿ ಕಂಗೊಳಿಸುತ್ತಿರುವುದು.

ಹೀಗೆ ಪೂರ್ವಸೂರಿಗಳು ಮುಕ್ತಕಂಠದಿಂದ ಭಾರವಿಯ ಶಬ್ದ ಸಂಪತ್ತು, ಅರ್ಥಪುಷ್ಟಿ, ರಸಭಾವವಿಲಾಸ, ಪ್ರತಿಭಾಪ್ರಸಾರ, ಅಲಂಕಾರ ಸೌಷ್ಠವ, ವೃತ್ತವಿನ್ಯಾಸಕೌಶಲಗಳನ್ನು ಹೊಗಳಿರುವುದಲ್ಲದೆ ಅವನ ಮಾರ್ಗ ದರ್ಶನವನ್ನು ಮಾತಿನಿಂದಲ್ಲದಿದ್ದರೆ ಕೃತಿಯಿಂದಲಾದರೂ ಒಪ್ಪಿಕೊಂಡಿ ದ್ದಾರೆಂದು ಹೇಳಬಹುದಾಗಿದೆ.

## ii. ಕಿರಾತಾರ್ಜುನೀಯ ಕಾವ್ಯದ ಪರಿಚಯ

### ಕಥಾಭಾಗ

ಭಾರವಿ ಪ್ರವರ್ತಕವಾದ ಮಹಾಕಾವ್ಯ ಸಂಪ್ರದಾಯದಲ್ಲಿ ಕಥಾ ಭಾಗಕ್ಕೆ ಪ್ರಾಶಸ್ತ್ಯ ಕಡಿಮೆ; ವರ್ಣನಾಚಮತ್ಕಾರಕ್ಕೆ ಮಹತ್ವ ಹೆಚ್ಚು ಎಂಬುದನ್ನು ಆಗಲೇ ಹೇಳಲಾಯಿತು. ಆದರೂ ರಸಮಯವಾದ ಪ್ರಸಿದ್ಧ ಸನ್ನಿವೇಶವೊಂದನ್ನು ಆರಿಸಿಕೊಳ್ಳುವುದರಲ್ಲಿ ಕವಿ ತನ್ನ ಪ್ರತಿಭೆಯನ್ನು ತೋರಿಸಬೇಕಾಗುತ್ತದೆ. ಸಂಸ್ಕೃತಕಾವ್ಯಗಳಿಗೆಲ್ಲ ಇಂತಹ ನೂರಾರು ಸನ್ನಿ ವೇಶಗಳನ್ನೊದಗಿಸಿದ ಆಕರಗಳು ರಾಮಾಯಣ ಮಹಾಭಾರತಗಳೆಂದು ನೋಡಿದೆವು. ಭಾರವಿಗೆ ರಾಜನೀತಿಯಲ್ಲಿ ಹೆಚ್ಚಿನ ಆಸಕ್ತಿಯಿದ್ದುದರಿಂದ ಅವನು ಮಹಾಭಾರತವನ್ನೇ ಆಶ್ರಯಿಸುತ್ತಾನೆ. ಅಲ್ಲಿಯ ಘಟನೆಗಳನ್ನೆಲ್ಲ ತರುವುದಿಲ್ಲ; ವನಪರ್ವದಲ್ಲಿ ಬರುವ ಕೆಲವೇ ಭಾಗವನ್ನು ಆರಿಸಿಕೊಳ್ಳುತ್ತಾನೆ. ಪಾಶುಪತಾಸ್ತ್ರವನ್ನು ಪಡೆಯಲು ಅರ್ಜುನನು ಹೊರಡುವ ಸನ್ನಿವೇಶ, ಅದರ ಹಿನ್ನೆಲೆ, ಅರ್ಜುನನ ತಪಸ್ಸಾಧನೆ ಮತ್ತು ಸಿದ್ಧಿ—ಇದೇ ಕಾವ್ಯದ ಮುಖ್ಯ ಸೂತ್ರ. ಮಹಾಭಾರತದಲ್ಲಿ ಹದಿನೆಂಟು ಪರ್ವಗಳಿರುವಂತೆ, ಭಗವ ದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿರುವಂತೆ, ಕಿರಾತಾರ್ಜುನೀಯದಲ್ಲೂ ಹದಿನೆಂಟು ಸರ್ಗಗಳಿವೆ. ಈ ಹದಿನೆಂಟು ಅಧ್ಯಾಯಗಳಲ್ಲೂ ಹದಿನೆಂಟು ವರ್ಣನೆಗಳಿಗೇ ಪ್ರಾಧಾನ್ಯವೆಂದರೂ ಆ ವರ್ಣನೆಯ ಚಿತ್ರಗಳಿಗೆ ಭಿತ್ತಿ

ಯಾದ ಕಥೆಯನ್ನು ಸಂಗ್ರಹವಾಗಿಯಾದರೂ ನೋಡಿದಲ್ಲಗೆ ಆದರ ಔಚಿತ್ಯದ ಕಲ್ಪನೆ ಬರಲಾರದು. ಭಾರವಿಯ ಕಥೆಯನ್ನು ಹೀಗೆ ಸಂಗ್ರಹಿಸಬಹುದು.

ಜೂಜಾಡಿ ರಾಜ್ಯಭ್ರಷ್ಟರಾದ ಪಾಂಡವರು ಪ್ರತಿಜ್ಞಾಪಾಲನೆಗಾಗಿ ದ್ವೈತವನಕ್ಕೆ ಬಂದಿದ್ದಾರೆ. ಅವರಿಗೆ ಕೌರವರಿಂದಾದ ಅನ್ಯಾಯವೂ ಅಪಮಾನವೂ ಒಳಗೊಳಗೇ ಶೂಲದಂತೆ ಕೊರೆಯುತ್ತಿದೆ; ಮತ್ತೆ ರಾಜ್ಯವನ್ನು ಪಡೆಯುವ ಆಸೆ ತಪ್ಪಿಲ್ಲ. ಅತ್ತ ಜನಾಭಿಪ್ರಾಯವೆಂತಿದೆ? ದುರ್ಯೋಧನನಲ್ಲಿ ಏನಾದರೂ ಲೋಪದೋಷಗಳುಂಟೇ ಹೇಗೆ ಎಂಬುದನ್ನು ತಿಳಿದುಕೊಂಡು ಬರಲು ಒಬ್ಬ ವನೇಚರನನ್ನು ಗೂಢವಾಗಿ ಹಸ್ತಿನಾವತಿಗಟ್ಟುತ್ತಾರೆ. ಸಮಾಚಾರವನ್ನು ಅವನು ತಿಳಿದುಬಂದು ಅಪ್ರಿಯವಾದರೂ ಇದ್ದ ಸಂಗತಿಯನ್ನು ತಿಳಿಸುತ್ತಾನೆ:—'ದುರ್ಯೋಧನನಿಗೆ ರಾಜಸಿಂಹಾಸನ ಸಿಕ್ಕಿದ್ದರೂ ಅದು ಮೋಸದಿಂದ ಬಂದುದೆಂಬ ಪರಿಜ್ಞಾನವಿದೆ. ಆದ್ದರಿಂದ ಅದನ್ನು ಸ್ಥಿರವಾಗಿಸಿಕೊಳ್ಳಲು ರಾಜನೀತಿಯನ್ನು ಸ್ವಲ್ಪವೂ ಬಿಡದೆ ನಡೆಯುತ್ತಿದ್ದಾನೆ. ಅವನ ಜನ್ಮಗುಣವೇ ಕುಟಿಲತೆಯಾದರೂ ತೋರಿಕೆಗೆ ಧರ್ಮಾತ್ಮನಾಗಿಬಿಟ್ಟಿದ್ದಾನೆ. ಪ್ರಜಾನುರಾಗ ಬಂದಲ್ಲದೆ ರಾಜ್ಯಸ್ಥಿರವಲ್ಲವೆಂದರಿತು ಅರಿಷಡ್ವರ್ಗಗಳನ್ನು ಗೆದ್ದು ಜಿತೇಂದ್ರಿಯನಂತಿದ್ದಾನೆ. ಒಂದು ಗಳಿಗೆಯನ್ನೂ ಪೋಲುಮಾಡದೆ ರಾಜಕಾರ್ಯದಲ್ಲೇ ನಿರತನಾಗಿದ್ದಾನೆ. ಅನುಚರರನ್ನು ಸ್ನೇಹಿತರಂತೆಯೂ, ಸ್ನೇಹಿತರನ್ನು ಬಂಧುಗಳಂತೆಯೂ ನೋಡುತ್ತಾ ಬಂಧುಗಳಿಗೆ ತನ್ನ ಸುಖಗಳನ್ನೆಲ್ಲ ಹಂಚಿಕೊಟ್ಟು ಎಲ್ಲರ ಪ್ರೀತಿಗೂ ಪಾತ್ರನಾಗಿದ್ದಾನೆ. ಧರ್ಮ, ಅರ್ಥ, ಕಾಮ ಈ ಮೂರು ಪುರುಷಾರ್ಥಗಳನ್ನೂ ಸಮವಾಗಿ ಸಾಧಿಸುತ್ತಿದ್ದಾನೆ. ಮಾತು, ಕೃತಿ, ಎರಡರಲ್ಲೂ ಔದಾರ್ಯವನ್ನು ಮೆರೆಯುತ್ತಾನೆ. ಯಾವ ಪಕ್ಷಪಾತವೂ ಇಲ್ಲದೆ ನ್ಯಾಯವನ್ನು ನಿರ್ಣಯಿಸುತ್ತಾನೆ. ಆತ್ಮರಕ್ಷಣೆಗೆ ಸರಿಯಾದ ವ್ಯವಸ್ಥೆ ಮಾಡಿ ದಾನಗಳಿಂದ ಸೇವಕರ ಭಕ್ತಿವಿಶ್ವಾಸಗಳನ್ನು ಗಳಿಸಿದ್ದಾನೆ. ಸಾಮ, ದಾನ, ಭೇದ, ದಂಡ–ಎಂಬ ನಾಲ್ಕು ಉಪಾಯಗಳೂ ಅವನಿಗೆ ಫಲವೀಯುತ್ತಾ ಸಂಪತ್ತನ್ನು ಹೆಚ್ಚಿಸುತ್ತಿವೆ. ಭೂಮಿಯ ರಾಜರೆಲ್ಲರೂ ಅವನಿಗೆ ಕಪ್ಪಕಾಣಿಕೆಯೀಯುತ್ತಿದ್ದಾರೆ. ರೈತರಿಗೆ ಅವನು ಕಟ್ಟಿಸಿರುವ ಜಲಾಶಯಗಳಿಂದ

ಕೃಷಿಯೊಂದು ವಿನೋದವಾಗಿದೆ. ಭೂಮಿಯೇ ಕಾಮಧೇನುವಾಗಿದ್ದಾಳೆ. ಅವನ ಭಟರು ಕೆಚ್ಚೆದೆಯವರೂ ನೆಚ್ಚಿನವರೂ ಆಗಿದ್ದಾರೆ. ಅವನಿಗೆ ಚಾರರಿಂದ ತಿಳಿಯದ ರಾಜವಾರ್ತೆಯಿಲ್ಲ. ಹೀಗೆ ತನ್ನ ಗುಣಗಳಿಂದ ಎಲ್ಲರ ವಿಶ್ವಾಸವನ್ನೂ ಗಳಿಸಿ, ರಾಜ್ಯಭಾರವನ್ನು ಯುವರಾಜನಾದ ದುಶ್ಶಾಸನನಿಗೆ ವಹಿಸಿ ದುರ್ಯೋಧನನು ಯಾಗಾದಿ ಧರ್ಮಕಾರ್ಯಗಳಲ್ಲಿ ನಿರತನಾಗಿದ್ದಾನೆ. ಇಷ್ಟಾದರೂ ಅವನಿಗೆ ಪಾರ್ಥನ ಹೆಸರು ಕೇಳಿದೊಡನೆ ಭಯ ಮೂಡುತ್ತದೆ. ಹೇಗಾದರೂ ಮಾಡಿ ನಿಮ್ಮನ್ನು ಮುಗಿಸಲು ಅವನು ಹವಣಿಸುತ್ತಿದ್ದಾನೆ.' ಇದನ್ನು ಧರ್ಮರಾಯನಿಂದ ಕೇಳಿದಳೋ, ಇಲ್ಲವೋ ದ್ರೌಪದಿಯ ಕೋಪಜ್ವಾಲೆ ಭುಗಿಲೆಂದು ಉರಿಯುತ್ತದೆ. ಅವಳು ತನ್ನ ಅಪಮಾನಗೈದವರ ಸಿದ್ಧಿಯನ್ನು ಸಹಿಸಲಾರದೆ ನಾಚಿಕೆಯನ್ನು ಬಿಟ್ಟು ದಿಟ್ಟೆಯಂತೆ ಧರ್ಮರಾಯನನ್ನು ಜರೆದು ಕೆರಳುವ ಮಾತುಗಳನ್ನಾಡುತ್ತಾಳೆ– 'ನಿನ್ನ ವಂಶದವರೆಲ್ಲರೂ ಇಂದ್ರನಂತೆ ರಾಜ್ಯಸುಖವನ್ನು ಭೋಗಿಸಿದರು. ನೀನು ಹೆಡ್ಡನಂತೆ ಬಾಗಿಲಿಗೆ ಬಂದ ಆ ಸಿರಿಯನ್ನು ಕೈಯಾರೆ ದೂಡಿರುವೆಯಲ್ಲವೆ? ಶತ್ರುಗಳು ಕಪಟಿಗಳಾದ ಮೇಲೆ ಅವರ ವಿಷಯದಲ್ಲಿ ಧರ್ಮಾಚರಣೆಗೆ ಹೊರಡುವವನು ಗಾಂಪನಲ್ಲವೆ? ನಿನಗೆ ನಿಜವಾಗಿಯೂ ರಾಜೋಚಿತ ಅಭಿಮಾನವಿದ್ದರೆ ಹೆಂಡತಿಯನ್ನೂ ರಾಜ್ಯವಧುವನ್ನೂ ಅಪಮಾನಿತರಾಗಲು ಬಿಡುತ್ತಿದ್ದೆಯೇನು? ನಿನಗೆ ರೋಷವೆಂಬುದೇ ಇಲ್ಲವೆ? ರೋಷವೇ ಇಲ್ಲದವನನ್ನು ಯಾರೂ ಗಮನಿಸುವುದಿಲ್ಲವಷ್ಟೆ. ರಾಜವೈಭವದಲ್ಲಿದ್ದ ಅಂತಹ ಭೀಮನಿಂದು ಕಾಲ್ನಡಗೆಯಿಂದ ಪೇರಡವಿಯಲ್ಲಿ ತೊಳಲುವುದನ್ನು ನೋಡಿಯಾದರೂ, ಅಸಮಸಾಹಸಿಯಾದ ಪಾರ್ಥನು ನಾರುಡೆಯಲ್ಲಿ ಮೃಗಗಳನ್ನು ಬೇಟೆಯಾಡುವುದನ್ನು ಕಂಡರೂ, ಕಾಂತಿಹೀನರಾದ ನಕುಲ ಸಹದೇವರನ್ನು ದಿಟ್ಟಿಸಿಯಾದರೂ, ನಿನ್ನ ಶಾಂತಿಸಂಯಮಗಳು ತೊಲಗಬೇಡವೆ? ಅದೂ ಬೇಡ; ನಿನ್ನ ಶೋಚನೀಯಾವಸ್ಥೆಯಾದರೂ ನಿನ್ನ ಕಣ್ತೆರೆಯಬೇಡವೆ? ನೀನು ರತ್ನಮಂಚದಲ್ಲಿ ಪವಡಿಸುತ್ತ ವಂದಿಗಳ ಮಂಗಳಗೀತಕ್ಕೆ ಏಳುತ್ತಿದ್ದೆಯಲ್ಲ! ಇಂದು ಹೇಗೆ ಹುಲ್ಲು ಹೊದರಿನ ಮೇಲೆ ಮಲಗಿ ನರಿಗಳ ಕೂಗನ್ನು ಸುಖವಾಗಿ ಕೇಳುವೆ? ಅಂದು ಯಾಗದಲ್ಲಿ ವಿಪ್ರರ ಭುಕ್ತಶೇಷವನ್ನು ಭೋಗಿಸುತ್ತಿದ್ದವನಿಗೆ ಕಾಡುಹಣ್ಣುಗಳನ್ನು ತಿನ್ನಲು ಬೇಸರವಿಲ್ಲವೆ?

ಅಂದು ರಾಜರೆಲ್ಲರೂ ಬಂದು ವಂದಿಸುತ್ತಿದ್ದ ಪಾದಗಳನ್ನು ದರ್ಭೆಹುಲ್ಲಿನ ಮೇಲೆ ಇಡಲು ಖೇದವಿಲ್ಲವೆ? ಹೀಗೆ ಮಾನವನ್ನು ಸೋಲುವುದಕ್ಕಿಂತ ಯುದ್ಧದಲ್ಲಿ ಸೋಲುವುದು ಎಷ್ಟೋ ಮೇಲು. ನಿನ್ನ ಶಾಂತಿಯನ್ನು ದೂರಕ್ಕೆ ಚೆಲ್ಲಿ ಅಭಿಮಾನವನ್ನು ಮೆರೆ; ಇಲ್ಲವಾದರೆ ಬಾಣಬಿಲ್ಲುಗಳನ್ನೆಸೆದು ಸಂನ್ಯಾಸವನ್ನೇ ತೆಗೆದುಕೊಂಡು ಬಿಡು. ಶಾಂತಿಯನ್ನು ಭಂಗಿಸಲು ಒಂದು ನೆವ ಸಿಕ್ಕುವುದೇನೂ ಕಷ್ಟವಿಲ್ಲ. ಅಸ್ತಂಗತನಾದರೂ ರವಿ ಮತ್ತೆ ಉದಿಸುವಂತೆ ನಿನ್ನ ರಾಜ್ಯಲಕ್ಷ್ಮಿಯೂ ಮರಳಿ ಬಳಿಸೇರಲಿ!' (ಸರ್ಗ–೧)

ಭೀಮನ ಮನಸ್ಸಿನಲ್ಲಿದ್ದುದೂ ಇದೇ. ದ್ರೌಪದಿಯ ಮಾತನ್ನು ಕೇಳಿದನೋ ಇಲ್ಲವೋ ಅವನು ಉಬ್ಬಿಬಿಟ್ಟನು. ಆದರೆ ಅವನು ರಾಜನೀತಿಯನ್ನೂ ಬಲ್ಲವನಾದ್ದರಿಂದ ಅದಕ್ಕೆ ಬೇಕಾದ ಶಾಸ್ತ್ರಸಮರ್ಥನೆಯನ್ನು ಕೊಡುತ್ತಾನೆ—'ದ್ರೌಪದಿಯ ಮಾತನ್ನು ಹೆಣ್ಣಿನ ಮಾತೆಂದು ಹೀಗಳೆಯಬೇಡ; ಅದು ಶಾಸ್ತ್ರಸಮ್ಮತವೂ ಆಗಿದೆ. ಶತ್ರುವಿನಿಂದ ದುರ್ಗತಿಯೊದಗಿದಾಗ ಪೌರುಷವೇ ಕ್ಷತ್ರಿಯನು ಮೆರೆಯಬೇಕಾದ ಗುಣ. ಶತ್ರುವಿನ ಅಭ್ಯುದಯದಿಂದ ಹೆದರಕೂಡದು; ಕ್ಷಯದಿಂದ ನಲಿಯಲೂ ಕೂಡದು. ಆಳವಾಗಿ ವಿಚಾರಿಸಿ ನೋಡಬೇಕು. ಅಭ್ಯುದಯದ ಹಿಂದೆ ಲೋಪಗಳಿದ್ದರೆ ಸುಮ್ಮನಾಗಬಹುದು; ಆದರೆ ಕ್ಷಯದ ಹಿಂದೆ ಫಲೋನ್ಮುಖವಾದ ಸುಗುಣಗಳಿದ್ದರೆ ಸುಮ್ಮನಿರಲಾಗದು; ಯಾವಾಗಲೂ ಶತ್ರುವಿನ ಸ್ಥಿತಿಯೊಡನೆ ತನ್ನ ಸ್ಥಿತಿಯನ್ನು ಹೋಲಿಸಿ ನೋಡಿಯೇ ನಿರ್ಣಯಿಸಬೇಕು, ತನ್ನದು ಕೀಳೆನಿಸಿದೊಡನೆ ಪ್ರತೀಕಾರದ ಉಪಾಯಗಳನ್ನು ಚಿಂತಿಸಬೇಕು. ಶತ್ರುವಿನಲ್ಲಿ ಪ್ರಭುಶಕ್ತಿ ಬೆಳೆಯಲು ಬಿಟ್ಟರೆ ಮುಂದೆ ಅದನ್ನು ಎದುರಿಸುವುದು ಅಶಕ್ಯವೇ ಆಗುತ್ತದೆ; ತನ್ನ ಅವಸ್ಥೆ ಕೀಳಾಗಿದ್ದರೂ ಅಭ್ಯುದಯದ ಪ್ರಯತ್ನವೆಂದೂ ಕುಂದದಿದ್ದರೆ ತಾನೇ ಫಲ ಸಿಕ್ಕುವುದು. ಕೋಶ, ದಂಡ, ಎಲ್ಲಕ್ಕೂ ಕಾರ್ಯನಿರ್ಣಯದ ಶಕ್ತಿ ಮತ್ತು ಅದರ ನಿರ್ವಾಹದಲ್ಲಿ ದಕ್ಷತೆಗಳೇ ಮೂಲ. ಕ್ಷತ್ರಿಯನಿಗೆ ದೊಡ್ಡ ಪದವಿಯ ಗುರಿಯಿರಬೇಕು; ಆತ್ಮಪೌರುಷದಲ್ಲಿ ನಂಬಿಕೆಯೂ ಇರಬೇಕು. ಹೇಡಿಗೆ ಎಂದೂ ಸಿದ್ಧಿ ದೊರೆಯುವುದಿಲ್ಲ. ನಿರುತ್ಸಾಹವೇ ಅಭ್ಯುದಯಕ್ಕೆ ವೈರಿ. ಅದನ್ನು ನೀನು ತ್ಯಜಿಸ

ಬೇಕು. ಕಾಲಪ್ರತೀಕ್ಷೆಯಿಂದ ಕಾರ್ಯಹಾನಿಯೇ ಹೊರತು ಕಾರ್ಯ ಸಾಧನೆಯಾಗುವುದಿಲ್ಲ. ರಾಜ್ಯದಲ್ಲಿ ಭದ್ರವಾಗಿ ತಳವೂರಿ ರುಚಿಕಂಡವನು ಎಂದಾದರೂ ಸುಮ್ಮನೆ ಅದನ್ನು ಬಿಟ್ಟು ಕೊಡುವುದುಂಟೆ? ಅದು ನಿಜವಾದರೆ ನಿನ್ನನುಜರ ಭುಜಬಲವೇ ಬೇಕಿಲ್ಲವಲ್ಲಾ! ಹಾಗೆ ದಾನಮಾಡಿದ್ದನ್ನು ಮಾನ ವಂತನು ಖಂಡಿತವಾಗಿಯೂ ಸ್ವೀಕರಿಸುವುದಿಲ್ಲ. ಸಿಂಹವೆಂದಾದರೂ ತಾನೇ ಕೊಲ್ಲದ ಮೃಗದ ಮಾಂಸವನ್ನು ಮುಟ್ಟುವುದೇ ? ಕ್ಷತ್ರಿಯನಿಗೆ ಸಂಪ ತ್ತಿಗಿಂತಲೂ ಮಾನವೇ ಹೆಚ್ಚಿನದು. ಸಂಪತ್ತು ಕ್ಷಣಿಕ ; ಆದರೆ ಮಾನ ಶಾಶ್ವತ. ಲೋಕದಲ್ಲಿ ಮಾನವಂತನು ಕೆಂಡದಂತೆ ; ಮಾನವಿಲ್ಲದವನು ಬೂದಿಯಂತೆ. ಕೆಂಡವನ್ನು ನಡೆಯುವವರು ತುಳಿಯುವುದಿಲ್ಲ ; ಬೂದಿ ಯನ್ನು ಮಾತ್ರ ತುಳಿಯುತ್ತಾರೆ. ಅದರಿಂದಲೇ ಮಾನವಂತನಿಗೆ ಪ್ರಾಣ ಹಾನಿಗಿಂತಲೂ ಮಾನಹಾನಿ ದುಸ್ಸಹವೆನಿಸುತ್ತದೆ. ಶತ್ರುವಿನ ಮೇಲ್ಮೆ ಯನ್ನು ಸಹಿಸದಿರುವುದೇ ಮಾನವಂತನ ಸಹಜಗುಣ ; ಮೋಡವು ಗರ್ಜಿಸಿ ದರೆ ಸಾಕು ; ಸಿಂಹವೂ ಗರ್ಜಿಸುತ್ತಾ ಮೇಲೆ ನೆಗೆಯುತ್ತದೆ. ನಿನ್ನ ಬುದ್ಧಿಗೆ ಶಾಂತಿಯೆಂಬ ಮಂಕು ಬಂದಿದೆ ; ಅದನ್ನು ಮೊದಲು ಬಿಸುಡು. ನಿನ್ನ ನಾಲ್ಕು ಜನ ತಮ್ಮಂದಿರೂ ನಾಲ್ಕು ದಿಗ್ಗಜಗಳಂತೆ ಪ್ರತಾಪಶಾಲಿಗಳೆಂಬು ದನ್ನು ನೆನೆ. ಅವರ ಮುಂದೆ ಶತ್ರುಗಳು ಯುದ್ಧದಲ್ಲಿ ನಿಂತು ಬದುಕುವು ದುಂಟೆ ? ವೈರಿನಾರಿಯರು ಸುರಿಸುವ ಕಣ್ಣೀರಿಂದ ಮಾತ್ರ ನಿನ್ನ ಶತ್ರು ನಾಶದ ಕಿಚ್ಚು ನಂದಬೇಕು.?

ಧರ್ಮರಾಯನ ಗಾಂಭೀರ್ಯವೆಂದರೆ ಪ್ರಶಾಂತಸಮುದ್ರದಂತೆ. ಅದು ಯಾರು ಏನೆಂದರೂ ಬೇಗ ಕ್ಷುಬ್ಧವಾಗುವುದಲ್ಲ. ಕೋಪದಿಂದ ಕೆರಳಿದವರನ್ನು ಸಮಾಧಾನ ಮಾಡುವ ಜಾಣ್ಮೆಯೂ ಅವನಿಗಿದ್ದಿತು. ಅವನು ಭೀಮನನ್ನು ಹೊಗಳುವವನ ಹಾಗೆ ಹೊರಟು ಕ್ರಮಕ್ರಮವಾಗಿ ತನ್ನ ದಾರಿಗೆಳೆಯುತ್ತಾನೆ :— ' ಅಪ್ಪಾ ಭೀಮ, ನಿರ್ಮಲವಾದ ಕನ್ನಡಿಯಲ್ಲಿ ವಸ್ತುಗಳ ಪ್ರತಿಬಿಂಬ ಮೂಡುವಂತೆ ನಿನ್ನ ಮಾತುಗಳಲ್ಲಿ ನಿನ್ನ ಋಜುವಾದ ಬುದ್ಧಿ ಪ್ರತಿಬಿಂಬಿಸಿದೆ. ಮಾತುಗಳನ್ನು ಮುತ್ತುಗಳಂತೆ ಪವಣಿಸಿ ಅರ್ಥವು ತೂಕವಾಗಿರುವಂತೆ ನುಡಿದಿರುವೆ ; ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿ ಬೇಸರವಾಗುವಂತೆ ಮಾಡಿಲ್ಲ. ನಿನ್ನ ಅಭಿಪ್ರಾಯಕ್ಕೆ ತಕ್ಕಷ್ಟು ಸಮರ್ಥನೆ

ಯನ್ನೂ ತೆರೆದು ತೋರಿಸಿರುವೆ. ಯುಕ್ತಿಯುಕ್ತವೂ ಶಾಸ್ತ್ರ ಸಮ್ಮತವೂ ಆದುದನ್ನೇ ಉತ್ತಮಾಶಯದಿಂದ ಆಡಿರುವೆ. ಆದರೆ ನನ್ನ ಮನಸ್ಸಿನಲ್ಲಿ ಮಾತ್ರ ಇದ್ದ ಸಂಶಯಗಳೆಲ್ಲವೂ ಇನ್ನೂ ಅಳಿದಿಲ್ಲ ; ಕಾರ್ಯಸೂಕ್ಷ್ಮವನ್ನು ಗಮನಿಸಿದರೆ ನಿರ್ಣಯವು ಸುಲಭವಾಗಿಲ್ಲ. ಯಾವಾಗಲೂ ಆತುರದಲ್ಲಿ ಕೆಲಸಮಾಡಬಾರದು. ಅವಿವೇಕವೇ ಕಷ್ಟಗಳ ನೆಲೆ. ಸಿರಿಗಳು ಬರುವುದು ವಿವೇಕಿಗೇ ಹೊರತು ಅವಿವೇಕಿಗಲ್ಲ. ವಿವೇಕಜಲದಿಂದ ಕಾಲಕಾಲಕ್ಕೆ ಕಾರ್ಯಬೀಜವನ್ನೆರೆಯುತ್ತಿದ್ದರೆ ಮಾತ್ರ ಶರತ್ಕಾಲದಲ್ಲಿ ಭತ್ತದ ಬೀಜವು ಹುಲುಸಾಗಿ ತೆನೆಗಳನ್ನು ಕೊಡುವಂತೆ ಫಲವು ಸಿದ್ಧಿಸುತ್ತದೆ. ದೇಹಕ್ಕೆ ವಿದ್ಯೆಯೇ ಒಡವೆ; ವಿದ್ಯೆಗೆ ಶಾಂತಿ ಅಲಂಕಾರ; ಶಾಂತಿಗೆ ಶೌರ್ಯ ಭೂಷಣ; ಕಾರ್ಯಕ್ಕೆ ಸಿದ್ಧಿಯೇ—ಆಭರಣ. ಕಾರ್ಯವು ಗಹನವಾಗಿ ಕತ್ತಲೆ ಕವಿದಂತಾದಾಗ ಶಾಸ್ತ್ರವು ಜಾಣನಿಗೆ ದೀಪದಂತೆ ಬೆಳಕು ತೋರುತ್ತದೆ. ಮಹಾಜನರು ನಡೆದು ಸವೆದ ದಾರಿ ಎಂದೂ ಕ್ಷೇಮಕರ. ದುರ್ದೈವದಿಂದ ಫಲವು ಬಾರದಿದ್ದರೂ ಅದು ಅಭ್ಯುದಯಕ್ಕೇ ಸಮಾನವೆಂದು ತಿಳಿಯಬೇಕು. ಪರ್ಯವಸಾನದಲ್ಲಿ ಯಾವುದು ಒಳ್ಳೆಯದೋ ಅದನ್ನರಿತು ಶಾಂತಿಯಿಂದ ಕಾರ್ಯಮಾಡಬೇಕು. ಶೌರ್ಯಪ್ರದರ್ಶನದಿಂದಲೇ ಯಾವ ಲಾಭವೂ ಇಲ್ಲ. ರೋಷವೆಂಬ ತಮಸ್ಸನ್ನು ಗೆಲ್ಲುವವರೆಗೂ ಶಾಂತಿ ಸಿದ್ಧಿಸುವುದಿಲ್ಲ. ಶಾಂತಿಯಿಲ್ಲದೆ ವೃದ್ಧಿಯಿಲ್ಲ; ಸಮಯೋಚಿತವಾಗಿ ಶಾಂತಿ, ಶೌರ್ಯಗಳನ್ನು ಬಳಸಿಕೊಂಡರೆ ಮಾತ್ರ ವಿಜಯವು ನಿಶ್ಚಿತ. ಇಂದ್ರಿಯ ಜಯವಿಲ್ಲದೆ ಚಂಚಲೆಯಾದ ಲಕ್ಷ್ಮಿಯನ್ನು ವಶದಲ್ಲಿಟ್ಟುಕೊಳ್ಳುವುದು ಅಶಕ್ಯ. ನೀನು ಅಂತಹ ಸಂಯಮಿಯಾಗಿದ್ದವನು ಈಗ ಇದ್ದಕ್ಕಿದ್ದಂತೆ ಇಂದ್ರಿಯಗಳ ಸೆಳೆತಕ್ಕೆ ಸಿಕ್ಕಿ ಬಿಡುವುದೆ? ಶಾಸ್ತ್ರವನ್ನೋದಿದರೇನು, ಇಂದ್ರಿಯ ಜಯವಿಲ್ಲದ ಮೇಲೆ ವ್ಯರ್ಥವೇ. ರಾಜನೀತಿಗೆ ಸಾಧಕವಾದುದು ಕ್ಷಮೆಯೇ ಹೊರತು ಕ್ರೋಧವಲ್ಲ. ನಮ್ಮಲ್ಲಿ ನಿಜವಾಗಿಯೂ ವಿಶ್ವಾಸವಿರುವ ವೃಷ್ಣಿಗಳು ಹಗೆಯನ್ನೇನೂ ಸೇರಲಾರರು. ರಾಜರಲ್ಲಿ ಅವರ ಆಪ್ತೇಷ್ಟರು ಎಷ್ಟೋ ಮಂದಿ ಇದ್ದಾರೆ. ಅವರೆಲ್ಲ ದುರ್ಯೋಧನನಿಗೆ ಹಿತೈಷಿಗಳಂತೆ ಮೇಲೆ ಕಂಡರೂ ಒಳಗೆ ನಮ್ಮ ಪಕ್ಷದ ಹಿತವನ್ನೇ ಕೋರುತ್ತಾರೆ. ಈ ಪ್ರತಿಜ್ಞೆಯ ಗಡುವು ತೀರಿದೊಡನೆ ನಾವು ಯುದ್ಧ ಸಾರಿದರೆ ಅವರೆಲ್ಲರೂ ನಮ್ಮ ಜತೆಗೆ

ಸೇರುತ್ತಾರೆ. ಭೇದನೀತಿಯಿಂದ ರಾಜರೆಲ್ಲರನ್ನೂ ಎಷ್ಟು ಕಾಲ ತಾನೆ ಮದೋನ್ಮತ್ತನಾದ ದುರ್ಯೋಧನನು ವಶದಲ್ಲಿಟ್ಟುಕೊಂಡಾನು? ಅವನ ಮದದ ಫಲವಾಗಿ ಮೌಢ್ಯವೂ, ಮೌಢ್ಯದಿಂದ ಅನೀತಿಯೂ ಬಂದೇ ತೀರುತ್ತವೆ. ಆಗ ಪ್ರಜೆಗಳು ವಿರುದ್ಧರಾಗುತ್ತಾರೆ. ಪ್ರಜೆಗಳ ವಿರೋಧ ಬಂದ ಮೇಲೆ ರಾಜನು ಮುಗಿದಂತೆಯೇ ಸರಿ, ಬೇರು ಮೇಲೆದ್ದು ಬಿದ್ದ ಮರದ ಹಾಗೆ. ಅಂತರಂಗದವರಲ್ಲಿ ಹುಟ್ಟಿದ ವಿರಸದ ಒಂದೇ ಕಿಡಿ ರಾಜನನ್ನು ಕೆಡಿಸಲು ಸಾಕಾಗುತ್ತದೆ. ದುರ್ವಿನೀತನಾದ ರಾಜನ ಅಭ್ಯುದಯದಿಂದ ಯಾವ ಅಂಜಿಕೆಯೂ ಇಲ್ಲ. ಅದು ದುರಂತವಾಗಿಯೇ ಪರಿಣಮಿಸುತ್ತದೆ. ಆದ್ದರಿಂದ ನಾವೀಗ ತಾಳ್ಮೆಯಿಂದಿರಬೇಕು.'

ಧರ್ಮರಾಯನು ನೀತಿಬೋಧೆ ಮಾಡುತ್ತಿರುವಾಗಲೇ 'ಇಷ್ಟಾರ್ಥವೇ ಕೈಗೆ ಬಂದಂತೆ' 'ಮೂರ್ತಿಗೊಂಡ ಪುಣ್ಯದಂತೆ' ವ್ಯಾಸಮುನಿ ಅಲ್ಲಿಗೆ ಬಂದನು. ಅವನ ನೋಟವು ಮೂಕ ಜಂತುಗಳ ಸಹಜವೈರವನ್ನೂ ತೊಲಗಿಸುತ್ತಿತ್ತು. ಕೂಡಲೆ ಪ್ರತ್ಯುತ್ಥಾನಾದಿಗಳಿಂದ ಮುನಿಯ ಸತ್ಕಾರಕ್ಕೆ ಧರ್ಮರಾಯನು ಅನುವಾದನು. (ಸರ್ಗ ೨)

ಮಹಾತಪಸ್ವಿಯಾದ ವ್ಯಾಸನು ಸತ್ಕಾರವನ್ನು ಸ್ವೀಕರಿಸಿ, ಕುಶಲ ಪ್ರಶ್ನೆಗಳಾದ ಮೇಲೆ ಕಾಲೋಚಿತವಾದ ಸಲಹೆಗಳನ್ನು ಧರ್ಮರಾಯನಿಗೀಯುತ್ತಾನೆ—'ನಿನ್ನ ಸೌಜನ್ಯದಿಂದ ನನಗೆ ನಿನ್ನಲ್ಲಿ ಪಕ್ಷಪಾತವುಂಟಾಗಿದೆ. ವೃದ್ಧನಾದ ಧೃತರಾಷ್ಟ್ರನಿಗೆ ಕೌರವರಂತೆ ನೀವೂ ಮಕ್ಕಳೆಂಬ ಭಾವನೆ ಬೇಡವೇ? ರಾಜ್ಯಲೋಭವೇಕೆ? ಕರ್ಣಾದಿ ಕುಜನರನ್ನು ನಂಬಿ ದುರ್ಯೋಧನನು ಮಾಡಬಾರದ್ದನ್ನೆಲ್ಲ ಮಾಡುತ್ತಿದ್ದಾನೆ. ನೀನು ಮಾತ್ರ ನೀತಿಯನ್ನು ಬಿಡದಿರುವುದರಿಂದ ಜಯಸಿರಿ ನಿನಗೇ ಎಂದಾದರೂ ಕಟ್ಟಿಟ್ಟದ್ದು. ಆದರೆ ನಿನ್ನ–ಅವರ ಬಲಾಬಲವನ್ನು ವಿಚಾರಿಸಿ ನೋಡು. ಅವರಿಗೆ ಅಸ್ತ್ರಗಳ ಶಕ್ತಿ ಹೆಚ್ಚು. ನೀನು ಅವರಿಗಿಂತ ಹೆಚ್ಚಿನ ಅಸ್ತ್ರಗಳನ್ನು ಸಂಪಾದಿಸದೆ ಜಯವು ಕನಸಾಗುತ್ತದೆ. ಗುರುವಾದ ಪರಶುರಾಮನನ್ನೇ ಸೋಲಿಸಿದ ಭೀಷ್ಮನೆಂದರೆ ಸಾಮಾನ್ಯನೇ? ಯಮನೂ ಅವನಿಗೆ ಸೋಲುವನು. ದ್ರೋಣನ ಬಾಣಾಗ್ನಿಯೆಂದರೆ ಲಯಕಾಲದ ಬೆಂಕಿಯೇ ಅಲ್ಲವೆ? ಕರ್ಣನು ಕೂಡ ಯಮನನ್ನಾದರೂ ಅಂಜಿಸುವುದಿಲ್ಲವೆ? ಆದ್ದರಿಂದ ಈ

ವೀರಾಧಿವೀರರನ್ನು ಗೆಲ್ಲಬೇಕಾದರೆ ಈ ಅರ್ಜುನನು ದಿವ್ಯವಾದ ಅಸ್ತ್ರಗಳನ್ನು ಸಂಪಾದಿಸಬೇಕು. ಅವನಿಗೆ ಆ ಮಂತ್ರಗಳನ್ನು ಉಪದೇಶಿಸುವುದಕ್ಕಾಗಿಯೇ ಬಂದಿದ್ದೇನೆ' ಎನ್ನುತ್ತಾನೆ. ಒಡನೆಯೇ ಪಾರ್ಥನು ಮಂತ್ರೋಪದೇಶವನ್ನು ಪಡೆಯುತ್ತಾನೆ. ಅವುಗಳ ಸಿದ್ಧಿಗಾಗಿ, ಇಂದ್ರನನ್ನೊಲಿಸಲು, ಇಂದ್ರಕೂಟ ಪರ್ವತಕ್ಕೆ ಹೊರಡಬೇಕೆಂದು ಹೇಳಿ ದಾರಿಯನ್ನು ತೋರಿಸಲು ಯಕ್ಷನೊಬ್ಬನನ್ನು ಕೊಟ್ಟು ಮುನಿ ತೆರಳುತ್ತಾನೆ.

ಪಾರ್ಥನ ಅಗಲಿಕೆಯ ಯೋಚನೆಯಿಂದ ಪಾಂಡವರೆಲ್ಲರಿಗೂ ನೋವುಂಟಾಯಿತು. ಮುಂದಿನ ಸಿದ್ಧಿಯನ್ನು ನೆನೆಯುತ್ತ ಎಲ್ಲರೂ ಹೇಗೋ ಸಮಾಧಾನ ತಂದುಕೊಂಡರು. ಎಲ್ಲರ ದುಃಖವೂ ಹೆಂಗಸಾದ ದ್ರೌಪದಿಯನ್ನೇ ಸೇರಿದಂತಾಗಿ ಅವಳನ್ನು ನುಡಿಯಿಸಿತು. ಉರುಳುತ್ತಿದ್ದ ಕಣ್ಣೀರನ್ನು ಅಮಂಗಳವಾಗಕೂಡದೆಂದು ಅವಳು ಕಷ್ಟದಿಂದ ತಡೆದಳು. ಅವಳ ಕುಡಿನೋಟವೇ ಅರ್ಜುನನ ಪಯಣಕ್ಕೆ ಬುತ್ತಿಯಾಯಿತು—'ನಿನ್ನ ತಪಸ್ಸಿದ್ಧಿಯಾಗುವವರೆಗೂ ನಮ್ಮನ್ನು ನೆನೆದು ಹಂಬಲಿಸಬೇಡ. ಹಗೆಗಳ ಅಪಕಾರವನ್ನು ಮಾತ್ರ ಮತ್ತೆ ಮತ್ತೆ ನೆನೆ. ಅದರಿಂದ ನಮ್ಮ ಮಾನಕ್ಕೆ, ನಮ್ಮ ಕೀರ್ತಿಗೆ, ನಮ್ಮ ತೇಜಕ್ಕೆ ಬಂದಿರುವ ಕಳಂಕವನ್ನು ಬಿಡದೆ ಧ್ಯಾನಿಸು. ಅದನ್ನು—ನೆನೆದರೇ ಅಷ್ಟು ನೋವಾಗುವುದು; ನೀನೂ ಅಗಲಿದ ಮೇಲೆ ನರಳುವ ನನಗೆ ಇನ್ನೆಷ್ಟಾಗುವುದೋ ಏನೋ! ಇಂದು ನಿನ್ನ ಆಕೃತಿಯನ್ನು ನೋಡಿದರೆ ಅರ್ಜುನನೆನ್ನುವಂತಿದೆಯೆ? ಅಯ್ಯೋ! ಹೇಗಾಗಿ ಬಿಟ್ಟಿರುವೆ! ಕಡಲು ನಿರ್ಜಲವಾದಂತೆ; ನಿನ್ನ ಕಲಿತನವೂ ಶೌರ್ಯವೂ ಬರಿದಾದುವೆ? ನಿನ್ನ ಕಾಂತಿ ಹೀಗೆ ಕುಂದುವುದೆಂದರೇನು? ಈಗ ನಿನಗೆ ಸಮಯವು ಬಂದಿದೆ ಮತ್ತೆ ಪ್ರತಾಪವನ್ನು ಮೆರೆಯುವುದಕ್ಕೆ. ವಿಜಯಕ್ಕಾಗಿ ನೀನು ಮೊದಲು ಹೊರಡಬೇಕು. ಪ್ರಿಯರಾದ ನಮ್ಮ ಚಿಂತೆ ಪ್ರಯಾಣಕ್ಕೆ ಅಡ್ಡಬರಬಾರದು. ಏಕಾಂತದಲ್ಲಿ ನೀನು ತಪಗೈಯುವಾಗ ಮೈಮರೆಯಬೇಡ, ರಾಗದ್ವೇಷಗಳಿಗೆ ಸೋಲಬೇಡ. ಕಾರ್ಯಸಿದ್ಧಿಯನ್ನು ಪಡೆದು ಬಂದೊಡನೆ ನಿನ್ನನ್ನಾಲಂಗಿಸಲು ಕಾಯುತ್ತಿರುತ್ತೇನೆ' ಎಂದು ಆಕೆ ನುಡಿಯಲು ಅರ್ಜುನನ ಉತ್ಸಾಹ ನೂರ್ಮಡಿಯಾಯಿತು. ಅವನು ಆಗಲೇ ಶತ್ರುಮಾರಣಕ್ಕೆ ನಿಂತಂತೆ ಭೀಷಣಾಕಾರನಾದನು. ಗಾಂಡಿವ

ಧನುಸ್ಸು, ಬತ್ತಳಿಕೆ, ಕವಚಗಳನ್ನು ಧರಿಸಿ ಯಕ್ಷನು ತೋರಿಸಿದ ಮಾರ್ಗದಿಂದ ಅವನು ಪ್ರಯಾಣ ಹೊರಟರು. (ಸರ್ಗ–೩)

ಆಗ ಶರತ್ಕಾಲ. ಅದರ ಸೊಬಗಿನ ವರ್ಣನೆಯೇ ನಾಲ್ಕನೆಯ ಸರ್ಗ. ಮೊದಲು ಕವಿ ವರ್ಣಿಸುತ್ತಾನೆ ; ಅದರಿಂದ ತೃಪ್ತನಾಗದೆ ಮತ್ತೆ ಯಕ್ಷನ ಬಾಯಿಂದಲೂ ವರ್ಣಿಸುತ್ತಾನೆ. ದಾರಿ ಸುಗಮವಾಗಿ ಸಾಗುತ್ತದೆ. ಹಿಮಾದ್ರಿ ಕಣ್ಣಿಗೆ ಕಾಣಿಸುತ್ತದೆ (ಸರ್ಗ–೪)

ಹಿಮಾದ್ರಿಯ ಚೆಲುವನ್ನು ಕವಿ ಬಗೆಬಗೆಯಿಂದ ಬಣ್ಣಿಸುತ್ತಾನೆ ಐದನೆಯ "ಸರ್ಗದ ಉದ್ದಕ್ಕೂ. ಅರ್ಜುನನು ಸಂತೋಷದಿಂದ ಅದರ ಬುಡಕ್ಕೆ ಬರುತ್ತಾನೆ. ಯಕ್ಷನು ಹಿಂದಿರುಗುತ್ತಾನೆ. (ಸರ್ಗ ೫)

ಇಂದ್ರಕೀಲ ಪರ್ವತವನ್ನು ಅರ್ಜುನನು ಹತ್ತುವ ವರ್ಣನೆ. ಅವನ ತಪಶ್ಚರ್ಯೆಯ ವರ್ಣನೆ; ಅದರ ಪ್ರಭಾವವನ್ನು ಅಲ್ಲಿಯ ವನರಕ್ಷಕರು ತಮ್ಮೊಡೆಯನಾದ ದೇವೇಂದ್ರನಿಗೆ ಹೋಗಿ ಹೇಳಿಕೊಳ್ಳುತ್ತಾರೆ. ತಪಸ್ಸನ್ನು ಮುರಿಯಲು ಇಂದ್ರನು ಅಪ್ಸರಸ್ತ್ರೀಯರಿಗೆ ಆಜ್ಞೆ ಮಾಡುತ್ತಾನೆ. (ಸರ್ಗ–೬)

ಗಂಧರ್ವರೊಡನೆ ಅಪ್ಸರಸ್ತ್ರೀಯರು ಬಂದು ಇಂದ್ರಕೀಲದಲ್ಲಿ ಬೀಡು ಬಿಡುತ್ತಾರೆ. ಅದರ ವರ್ಣನೆ. (ಸರ್ಗ–೭)

ಗಂಧರ್ವರ ಮತ್ತು ಅಪ್ಸರೆಯರ ಪುಷ್ಪಾಪಚಯ ಮತ್ತು ಜಲಕ್ರೀಡೆಗಳ ವರ್ಣನೆ. (ಸರ್ಗ–೮)

ಸಾಯಂಕಾಲ, ಚಂದ್ರೋದಯ ; ಸುರತಲೀಲೆ, ಪಾನಗೋಷ್ಠಿ, ಪ್ರಭಾತಗಳ ವರ್ಣನೆ. (ಸರ್ಗ–೯)

ಅರ್ಜುನನ ಮೇಲೆ ಅಪ್ಸರೆಯರು ಬೀರುವ ಪ್ರಲೋಭನಗಳು, ಅರ್ಜುನನ ಸ್ಥೈರ್ಯ, ವರ್ಷಋತು, ಅಪ್ಸರೆಯರ ವಿಲಾಸ, ಪರಾಭವಗಳ ವರ್ಣನೆ. (ಸರ್ಗ–೧೦)

ಮುನಿಯ ವೇಷದಲ್ಲಿ ಇಂದ್ರನೇ ಬಂದು ಅರ್ಜುನನ ಸತ್ವವನ್ನು ಪರೀಕ್ಷಿಸಿ ಅವನಿಗೆ ಒಲಿದು, ಶಿವನನ್ನಾರಾಧಿಸಿ ಪಾಶುಪತಾಸ್ತ್ರವನ್ನು ಪಡೆಯುವಂತೆ ಬೋಧಿಸುತ್ತಾನೆ. (ಸರ್ಗ–೧೧)

ಶಿವನನ್ನು ಕುರಿತು ಅರ್ಜುನನ ತಪಸ್ಸು ; ಸಿದ್ಧತಾಪಸರಿಗೆ ಅವರಿಂದ ಒದಗಿದ ಬೇಗೆ ; ಅವರು ಶಿವನಲ್ಲಿ ಮೊರೆಯಿಡುವುದು ; ಶಿವನು ಅವರನ್ನು

ಕಳುಹಿಸಿ ಹಂದಿಯ ರೂಪದಿಂದ ಅರ್ಜುನನನ್ನು ಕೊಲ್ಲಬರುತ್ತಿದ್ದ ಮೂಕನೆಂಬ ರಾಕ್ಷಸನನ್ನು ಕೊಂದು ಭಕ್ತಾನುಗ್ರಹಮಾಡುವ ಉದ್ದೇಶದಿಂದ ಕಿರಾತರೂಪಿನಲ್ಲಿ ಬೇಡವಡೆಯೊಡನೆ ಅರ್ಜುನನ ಆಶ್ರಮಕ್ಕೆ ಬರುತ್ತಾನೆ. (ಸರ್ಗ–೧೨)

ಹಂದಿಯನ್ನು ಅರ್ಜುನನು ನೋಡುತ್ತಾನೆ. ನಾನಾ ಸಂದೇಹಗಳು ಮೂಡುತ್ತವೆ. ಕಡೆಗೆ ಬಾಣವನ್ನು ಬಿಡುತ್ತಾನೆ; ಶಿವನೂ ಬಾಣಬಿಡುತ್ತಾನೆ. ಹಂದಿ ಸಾಯುತ್ತದೆ. ಹಂದಿಯ ಮೈಯಿಂದ ತನ್ನ ಬಾಣವನ್ನೆಳೆಯುತ್ತಿರುವ ಅರ್ಜುನನನ್ನು ಶಿವನ ದೂತನು ಹಿಯ್ಯಾಳಿಸುತ್ತಾನೆ. (ಸರ್ಗ–೧೩)

ಅರ್ಜುನನು ತನ್ನ ಶೌರ್ಯವನ್ನೇ ಮೆರೆದು, ತನ್ನನ್ನು ಮೀರಿದವನಿದ್ದರೆ ಯುದ್ಧಕ್ಕೆ ಬರಲೆಂದು ಆಹ್ವಾನಿಸುತ್ತಾನೆ. ಆ ಮಾತನ್ನು ಕೇಳಿ ಶಿವನು ಪಾರ್ಥನನ್ನು ಗೆಲ್ಲಲು ಬರುತ್ತಾನೆ. ಶಿವನ ಸೈನ್ಯದೊಡನೆ ಪಾರ್ಥನು ಯುದ್ಧಮಾಡುತ್ತಾನೆ. (ಸರ್ಗ–೧೪)

ಯುದ್ಧ ವರ್ಣನೆ (ಸರ್ಗ–೧೫)

ಕಿರಾತನ ಯುದ್ಧಕೌಶಲದಿಂದ ಅರ್ಜುನನಿಗೆ ಇವನಾರೋ ಮಹಾತ್ಮನಿರಬಹುದೆಂಬ ಸಂಶಯಗಳು ಮೂಡುತ್ತವೆ. ಆದರೂ ಛಲವನ್ನು ಬಿಡದೆ ಯುದ್ಧಮಾಡುತ್ತಾನೆ (ಸರ್ಗ–೧೬)

ಮತ್ತೆ ಕಿರಾತಾರ್ಜುನರ ಯುದ್ಧವರ್ಣನೆ (ಸರ್ಗ–೧೭)

ಕಿರಾತಾರ್ಜುನರ ಬಾಹುಯುದ್ಧ; ಅರ್ಜುನನ ಸಾಹಸಕ್ಕೆ ಮೆಚ್ಚಿ ಶಿವನು ಪ್ರತ್ಯಕ್ಷನಾಗುತ್ತಾನೆ. ಇಂದ್ರಾದಿಗಳೂ ಬರುತ್ತಾರೆ. ಅರ್ಜುನನು ಭಗವಂತನ ಸ್ತೋತ್ರಮಾಡಿ ವರಗಳನ್ನು ಬೇಡುತ್ತಾನೆ. ಪಾಶುಪತಾಸ್ತ್ರವನ್ನು ಶಿವನು ಅರ್ಜುನನಿಗೆ ಉಪದೇಶಿಸುತ್ತಾನೆ. ಇಂದ್ರಾದಿಗಳೂ ದಿವ್ಯಾಸ್ತ್ರಗಳನ್ನು ಕೊಡುತ್ತಾರೆ. ಕೃತಕೃತ್ಯನಾದ ಅರ್ಜುನನು ಯುಧಿಷ್ಠಿರನಲ್ಲಿಗೆ ಬರುತ್ತಾನೆ (ಸರ್ಗ–೧೮).

## ಕಥೆಯ ಔಚಿತ್ಯ

ಕಿರಾತಾರ್ಜುನೀಯದ ಕಥಾಸೂತ್ರವು ಸಣ್ಣದಾದರೂ ಬಹಳ ಸಾರವತ್ತಾಗಿದೆ. ತಪಃಪ್ರಭಾವದಿಂದ ಪುರುಷನು ಪರಮೇಶ್ವರನನ್ನೇ ಪ್ರತ್ಯಕ್ಷ

ಮಾಡಿಕೊಳ್ಳುವ ಗಂಭೀರ ಸನ್ನಿವೇಶವು ಭಾರತಸಂಸ್ಕೃತಿಯ ಜೀವರಸವಾದ ಯೋಗಸಿದ್ಧಿಯ ಹಿರಿಮೆಯನ್ನು ಹಿಡಿದೆತ್ತಲು ಉತ್ತಮ ಸಾಧನ. ಮಹಾಭಾರತದ ಮೂಲಕಥೆಯಲ್ಲಿ ಅನೇಕ ವಿಕ್ಷಿಪ್ತ ಘಟನೆಗಳು ನಡೆಯುವುದರಿಂದ, ರಾಗದ್ವೇಷಗಳ ಚಾಕಚಕ್ಯದ ನಡುವೆ ಮಹತ್ತಮ ಮೌಲ್ಯಗಳಿಂದ ಧರ್ಮಶಾಂತಿಗಳ, ಸತ್ವತಪಸ್ಸುಗಳ, ಅಮೇಯ ಮಹಿಮೆ ನೇರವಾಗಿ ಕಣ್ಣಿಗೆ ಬೀಳದೆ ಹೋಗಬಹುದು. ಭಾರವಿ ಅದೊಂದನ್ನೇ ಸರ್ವಾಂಗ ಸುಂದರವಾಗಿ ಬಣ್ಣಿಸಿ ಮಹಾಭಾರತದ ಸಾರವನ್ನು ಸರ್ವರಿಗೂ ಪ್ರತೀತಿ ಯೋಗ್ಯವಾಗುವಂತೆ ಮಾಡಿದ್ದಾನೆ. ತಪಸ್ಸಿದ್ಧಿ ಇಹಕ್ಕೆ ಅನಗತ್ಯವೆಂಬ ಕಲ್ಪನೆ ದೂರವಾಗುವಂತೆ ಐಹಿಕ ಫಲಾರ್ಥಿಯಾದ ಅರ್ಜುನನನ್ನು ಕಾವ್ಯಕ್ಕೆ ನಾಯಕನನ್ನಾಗಿ ಮಾಡಿದ್ದಾನೆ. ಹಾಗೆಯೇ ಸೌಂದರ್ಯದೃಷ್ಟಿ ತತ್ವ ದರ್ಶನದೊಡನೆ ಸಮನ್ವಿತವಾಗಬಹುದೆಂಬುದನ್ನೂ ಪರ್ವತ, ಚಂದ್ರ-ಸೂರ್ಯ, ಋತುಗಳು, ಜಲಕ್ರೀಡೆ, ಮಧುಪಾನ, ಸುರತ ಮುಂತಾದ ವಿಸ್ತೃತವರ್ಣನೆಗಳ ಮೂಲಕ ತೋರಿಸಿದ್ದಾನೆ. ಇಂದ್ರಿಯ ವಶನಾದವನ ಲೋಲುಪ್ತಿಗೂ, ಜಿತೇಂದ್ರಿಯನ ಸೌಂದರ್ಯದೃಷ್ಟಿಗೂ ಅಂತರವನ್ನು ಕವಿ ಕಾಣಬಲ್ಲನು. ದೇವಲೋಕನಿವಾಸಿಗಳಿಗೂ ಮರ್ತ್ಯಲೋಕ ನಿವಾಸಿಗಳಿಗೂ ಸುಖಭೋಗದಲ್ಲಿ ತಾರತಮ್ಯವುಂಟೆಂದೇ ಭಾರವಿ ಶೃಂಗಾರಾದಿಗಳನ್ನು ಗಂಧರ್ವರಲ್ಲಿಯೂ ಅಪ್ಸರೆಯರಲ್ಲಿಯೂ ಚಿತ್ರಿಸಿದ್ದಾನೆ. ಭೀಮ, ಅರ್ಜುನ, ದ್ರೌಪದಿ ಮುಂತಾದವರಲ್ಲಿ ಚಿತ್ರಿಸಿಲ್ಲ. ಕವಿಯ ಕಲ್ಪನಾಲೋಕದ ಈ ಪ್ರಜೆಗಳನ್ನು ವಾಸ್ತವ ಪ್ರಪಂಚದ ಪ್ರಜೆಗಳೆಂದು ಭಾವಿಸಿದರೆ ರಸವನ್ನು ಸವಿಯಲು ಅಡ್ಡಿಯೊದಗುತ್ತದೆ. ಕಿರಾತಾರ್ಜುನೀಯದ ಮಹಾಕಥೆಯಲ್ಲಿ ಮರ್ತ್ಯ ಮತ್ತು ಅಮರ್ತ್ಯ ಲೋಕಗಳ ಸುಂದರ ಸೇತುವೆಯನ್ನು ಸಹೃದಯರು ಸಂದರ್ಶಿಸಬಹುದು.

## ಪಾತ್ರ ಚಿತ್ರಣ

ಭಾರವಿ ಕಲ್ಪಿಸಿರುವ ಪಾತ್ರಗಳೆಲ್ಲ ಜೀವಕಳೆಯಿಂದ ಮೈತುಂಬಿ ಕಣ್ಣಿಗೆ ಕಟ್ಟುವಂತಿವೆ. ನಾಟಕದಲ್ಲಿ ಈ ಚಿತ್ರಕಕಲೆ ದೃಷ್ಟವೇ ಹೊರತು ಪದ್ಯಕಾವ್ಯದಲ್ಲಿ ಕಾಣಬರುವುದು ದುರ್ಲಭ. ಕನ್ನಡ ಮಹಾಕವಿ ರನ್ನನಲ್ಲಿ ಯಾವ ನಾಟಕೀಯತೆಯನ್ನು ನೋಡುತ್ತೇವೆಯೋ ಅದೇ ನಾಟಕೀಯತೆ

ಯನ್ನು ಭಾರವಿಯ ಮೊದಲ ಮೂರು ಸರ್ಗಗಳಲ್ಲಿಯೂ, ಹನ್ನೊಂದನೆಯ ಸರ್ಗದಲ್ಲಿಯೂ ನೋಡಬಹುದಾಗಿದೆ. ಒಂದೊಂದು ಪಾತ್ರವೂ ಒಂದೇ ಸಲ ಮಾತನಾಡಿ ಮುಗಿಯುವುದರೊಳಗೆ ವಕ್ತೃತ್ವಕಲೆಯ ಸ್ವರೂಪದರ್ಶನ ಮಾಡಿಕೊಡುವಂತೆ ಸ್ವಸ್ವಭಾವದರ್ಶನವನ್ನೂ ಸಂಪೂರ್ಣವಾಗಿ ಮಾಡಿಕೊಡುತ್ತದೆ. ಇದು ತಿಳಿಯಲೆಂದೇ ಮೊದಲ ಮೂರು ಸರ್ಗಗಳ ಕಥಾಸಾರಾಂಶವನ್ನು ಸ್ವಲ್ಪ ದೀರ್ಘವಾಗಿ ಬರೆದಿದ್ದೇವೆ. ವಾಚಕರು ಮತ್ತೊಮ್ಮೆ ಅದನ್ನೋದಬೇಕು. ವಿನಯಾದಿ ಸೌಜನ್ಯಗಳಿದ್ದರೂ ಶಬ್ದವಾಹಕ ಯಂತ್ರದಂತೆ ಕಂಡದ್ದನ್ನು ಮಾತ್ರ ಪ್ರಿಯವಾಗಲಿ ಅಪ್ರಿಯವಾಗಲಿ–ಹೇಳುವ ಚಾರ; ಶಾಂತಿ ವಿವೇಕಗಳನ್ನು ಎಂದೂ ಕಳೆದುಕೊಳ್ಳದ ಆದರ್ಶ ರಾಜನಾದ ಯುಧಿಷ್ಠಿರ, ರಾಜನ ಆದರ್ಶವನ್ನು ಅನುಕರಣ ಮಾಡುವ ದುರ್ಯೋಧನ; ಹಗೆಯ ಹೆಸರೆತ್ತಿದೊಡನೆ ಮೈಯೆಲ್ಲಾ ಉರಿಯುತ್ತಾ ಬೆಂಕಿಯನ್ನು ಕಾರುತ್ತಾ, ಚುಚ್ಚುನುಡಿಗಳನ್ನುಗುಳುವ ದ್ರೌಪದಿ, ಅವಳ ಮಾತನ್ನು ಬೃಹಸ್ಪತಿಯ ವಾಕ್ಯವೆನ್ನುತ್ತ ಅದಕ್ಕೆ ಶಾಸ್ತ್ರಾಧಾರವನ್ನು ತೆಗೆದು ತೋರುವ ಭೀಮ, ಶಾಂತಮೂರ್ತಿಯೂ ತಪೋನಿಧಿಯೂ ಆದ ವ್ಯಾಸ, ಉತ್ಸಾಹಶರಧಿಯೂ ಪ್ರತಾಪಮಾರ್ತಂಡನೂ ಆದ ಪಾರ್ಥ, ಇವರ ಸುಂದರ, ದೃಷ್ಟ ಹಾಗೂ ಸಮಗ್ರ ಚಿತ್ರಗಳನ್ನು ಕಾವ್ಯವನ್ನೋದಿದವರಾರೂ ಎಂದೂ ಮರೆಯುವಂತಿಲ್ಲ.

## ಭಾರವಿಯ ಪಾಂಡಿತ್ಯ

ಭಾರವಿ 'ಪಂಡಿತ ಕವಿ' ಎಂದು ಮೇಲಿಂದ ಮೇಲೆ ಹೇಳುತ್ತ ಬಂದಿದ್ದೇವೆ. ಅವನ ಶಬ್ದಕೋಶದ ಪಾಂಡಿತ್ಯವಾಗಲಿ, ವ್ಯಾಕರಣ ನಿಯಮಗಳ ಪ್ರಭುತ್ವವಾಗಲಿ, ಛಂದಸ್ಸಿನ ವೈದಗ್ಧ್ಯವಾಗಲಿ ಕನ್ನಡದ ಮುಖೇನ ತಿಳಿಯುವುದು ಸಾಧ್ಯವಿಲ್ಲ. ಅವನ್ನು ತಿಳಿಯಲು ಸಂಸ್ಕೃತದ ಮೂಲವನ್ನೇ ಓದಬೇಕು. 'ನವಸರ್ಗಗತೇ ಮಾಘೇ ನವಶಬ್ದೋ ನ ವಿದ್ಯತೇ' ಒಂಭತ್ತು ಸರ್ಗ ಮಾಘಕಾವ್ಯವನ್ನೋದಿದಮೇಲೆ ಹೊಸಶಬ್ದವೆಂಬುದೇ ಇರುವುದಿಲ್ಲವೆಂದು ಪಂಡಿತರು ಹೇಳುವುದುಂಟು. ಅದನ್ನೇ ಭಾರವಿಗೂ ಅನ್ವಯಿಸಬಹುದು. ಅವನ ಶಬ್ದಶುದ್ಧಿಯೂ ಅರ್ಥಸಂಪತ್ತೂ ಅನ್ಯಾದೃಶ್ಯವಾದುವು.

ಆದರೆ ಕನ್ನಡದ ಉಡುಪಿನಲ್ಲಿಯೂ ಮರೆಯಾಗದ ಭಾರವಿಯ ಪಾಂಡಿತ್ಯ ವೆಂದರೆ ರಾಜನೀತಿಗೆ ಸಂಬಂಧಿಸಿದುದು. ವ್ಯಾಸರ ಮೂಲಕೃತಿಯಲ್ಲಿ ಗುಪ್ತಚಾರನೇ ಇಲ್ಲ: ಆದರ್ಶ ರಾಜನ ಪ್ರಸ್ತಾಪವೂ ಇಲ್ಲ; ವ್ಯಾಸ, ಭೀಮ, ಧರ್ಮರಾಜ, ದ್ರೌಪದಿ ಯಾರೂ ರಾಜಕಾರಣಪಟುಗಳಂತೆ ಮಾತನಾಡು ವುದಿಲ್ಲ. ಆದರೆ ಕಿರಾತಾರ್ಜುನೀಯದಲ್ಲಿ ಎಲ್ಲರೂ ರಾಜನೀತಿ ವಿಶಾರದರೇ. ಮನು, ಯಾಜ್ಞವಲ್ಕ್ಯ, ಕೌಟಿಲ್ಯ, ಮುಂತಾದ ಶಾಸ್ತ್ರಕಾರರು ಹೇಳುವ ಸೂಕ್ಷ್ಮಪ್ರಕ್ರಿಯೆಗಳನ್ನು ಎಲ್ಲರೂ ಬಲ್ಲವರೇ. ರಾಜಪುತ್ರಾದಿಗಳಿಗೆ ಶಾಸ್ತ್ರಾರ್ಥ ವನ್ನು ಹೃದ್ಯವಾಗಿ ಕಾವ್ಯವು ಬೋಧಿಸುವಂತಿರಬೇಕೆಂಬ ಧ್ಯೇಯವು ಕಿರಾ ತಾರ್ಜುನೀಯದಲ್ಲಿ ಸಾಧಿತವಾಗಿರುವಂತೆ ಮತ್ತಾವ ಕಾವ್ಯದಲ್ಲೂ ಆಗಿಲ್ಲ ವೆಂದು ಧಾರಾಳವಾಗಿ ಹೇಳಬಹುದು. ಇದರ ಔಚಿತ್ಯವನ್ನು ಗ್ರಹಿಸ ಬೇಕಾದರೂ ಮೇಲೆ ಬರೆದಿರುವ ಮೊದಲ ಮೂರು ಸರ್ಗಗಳ ಕಥಾಸಾರಾಂಶ ವನ್ನು ಮತ್ತೊಮ್ಮೆ ಓದಬೇಕು. ಇದನ್ನು ಲಕ್ಷಿಸಿಯೇ ಲಕ್ಷಣಕಾರರು 'ಮಂತ್ರ' (=ರಾಜನೀತಿ), ದೂತ, ಪ್ರಯಾಣ, ಮುಂತಾದುವು ಕಾವ್ಯದ ಹದಿನೆಂಟು ಅಂಗಗಳಲ್ಲಿ ಮುಖ್ಯವಾದುವೆಂದು ಪರಿಗಣಿಸಿರುವರು.

## ಭಾರವಿಯ ವರ್ಣನಾಕೌಶಲ

ಭಾರವಿ ಮಹಾಕವಿಯೆಂದು ಸರ್ವರೂ ಗೌರವಿಸುವುದಕ್ಕೆ ಅವನ ಪ್ರತಿಭೆಯ ಉಜ್ಜ್ವಲತೆಯೇ ಎಲ್ಲಕ್ಕೂ ಹೆಚ್ಚಿನ ಕಾರಣ. ಅವನು ಸರಸ್ವತಿಯ ಭಂಡಾರವನ್ನೇ ಸೂರೆಮಾಡಬಲ್ಲ, ವರ್ಣನೆಗಳನ್ನು ತರಂಗತರಂಗವಾಗಿ, ಮಾಲೆಮಾಲೆಯಾಗಿ ಸೃಷ್ಟಿಸಬಲ್ಲ ಕವಿಪುಂಗವ. ಋತುಋತುಗಳಲ್ಲೂ ಬೇರೆ ಬೇರೆಯಾಗಿ ಕಂಗೊಳಿಸುವ ಪ್ರಕೃತಿಮಾತೆಯ ಸೊಬಗಾಗಲಿ, ಮುಚ್ಚಂಜೆ ಯಲ್ಲಿ ಮನೆಗೆ ಮರಳುವ ಬಿಣ್ಗೆಚ್ಚಲಿನ ತುರುವಿಂಡುಗಳ ದೃಶ್ಯವಾಗಲಿ, ಅವುಗಳ ಬಳಿಯಲ್ಲಿ ದಾರಿಕಾರರನ್ನು ಮುಗ್ಧರಾಗಿಸುತ್ತ ನಡೆವ, ನೆಲೆಮೊ ಲೆಯ, ನಳಿತೋಳ, ಚಲ್ಲೆಗಂಗಳ ಗೊಲ್ಲವೆಣ್ಗಳ ನೋಟವಾಗಲಿ, ಕವಿಯ ಕಲ್ಪನೆಗೆ ಸಮಾನವಾಗಿ ರೆಕ್ಕೆಯನ್ನೀಯುತ್ತವೆ. ಪರ್ವತರಾಜಿಯ ಸೌಂದ ರ್ಯವು ಅವನ ಪ್ರತಿಭೆಗೆ ಪ್ರೇರಕವಾಗುವಂತೆ ವನರಾಜಿಯ ವೈಭವವೂ ಪ್ರಚೋದಕವಾಗುತ್ತದೆ. ಕಾವ್ಯಾಲಂಕಾರಗಳನ್ನೆಲ್ಲ 'ಸ್ವಭಾವೋಕ್ತಿ'

ಮತ್ತು 'ಅತಿಶಯೋಕ್ತಿ'ಗಳೆಂಬ ಪ್ರಕಾರಗಳಲ್ಲಿ ಐಕ್ಯಮಾಡಬಹುದೆಂಬ ಲಾಕ್ಷಣಿಕರ ಸಿದ್ಧಾಂತವನ್ನಿಲ್ಲಿ ಅನ್ವಯಿಸಿದರೆ ಒಟ್ಟಿನಮೇಲೆ ನಾಲ್ಕನೆಯ ಸರ್ಗದಲ್ಲಿ ಸ್ವಭಾವೋಕ್ತಿಯ ಚೆಲುವನ್ನೂ ಐದು ಆರನೆಯ ಸರ್ಗಗಳಲ್ಲಿ ಅತಿಶಯೋಕ್ತಿಯ ಚಮತ್ಕಾರವನ್ನೂ ಗುರುತಿಸಬಹುದು. ಭಾರವಿಯ ಉಪಮೆ, ರೂಪಕ, ಉತ್ಪ್ರೇಕ್ಷೆಗಳೂ ಕೂಡ ಅನ್ಯಾದೃಶವಾದ ಕಾಂತಿಯಿಂದ ಮಿರುಗುತ್ತವೆ; ನೈಜಾನುಭೂತಿಗೆ ಸಾಕ್ಷಿಗಳಾಗುತ್ತವೆ. ಕವಿಸಮಯಗಳ ಕೃತ್ರಿಮತೆ ಭಾರವಿಯಲ್ಲಿನ್ನೂ ಇಲ್ಲ. ಅದೇ ಅವನ ವರ್ಣನಾವೈಶಿಷ್ಟ್ಯ. 'ನಲ್ಮೆಯ್ಗು ಸೂಸುವ ವ್ಯಾಸನ ಕಣ್ಗಳೆ ನುಡಿಸುವ ತೆರದಲಿ ಕಂಗೊಳಿಸೆ' (III. ೩) 'ಸತಿಯಳ ಚೆಲ್ವಿನ ನೋಟವನು, ಮನದುಲ್ಲಾಸದ ಬೋಗಸೆಯಿನಾಂತನು, ಪಾರ್ಥನು ಪಯಣದ ಬುತ್ತಿಯೊಲು'(III.೩೭) ಅರ್ಜುನನು ಪ್ರಯಾಣ ಹೊರಟರೆ—

'ಪ್ರಿಯವನುಸುರುವ ತೆರದೆ ಚೆನ್ನೆಯುನಿಳೆಯನಪ್ಪಿದನಂಬುಧಿ
ತನ್ನ ಚಂಚಲ ವೀಚಿಮಾಲೆಗಳೆಂಬ ತೋಳ್ಗಳ ಬಂಧದಿ' (iii. ೬೦)

'ದನಗಳೊಡಹುಟ್ಟಿದರೊ ಎನಿಸುವ ನಂಟನುಕ್ಕಿಸೆ ಗೊಲ್ಲರು' (iv. ೧೩)

ಇತ್ಯಾದಿ ನೂರಾರು ಸುಂದರ ಅಲಂಕಾರಪ್ರಯೋಗಗಳನ್ನು ವಾಚಕರು ಗ್ರಂಥದುದ್ದಕ್ಕೂ ಗಮನಿಸಬಹುದು. ಇವುಗಳ ವಿವರಣೆಯನ್ನು ಟಿಪ್ಪಣಿಗಳಲ್ಲಿ ಕೊಟ್ಟಿರುವುದರಿಂದ ಇಲ್ಲಿ ವಿಸ್ತರಿಸುವುದಿಲ್ಲ. ಉಕ್ತಿಚಮತ್ಕಾರಕ್ಕೆ ಕಾರಣಗಳಾದ ಸಾರ, ಏಕಾವಲಿ, ಕಾರಣಮಾಲೆ, ಯಥಾಸಂಖ್ಯ – ಈ ಅಲಂಕಾರಗಳೂ ಅಲ್ಲಲ್ಲಿ ಕಾವ್ಯದ ಸೊಬಗೇರಿಸುತ್ತವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಭಾರವಿ ಲೋಕೋಕ್ತಿಗಳನ್ನೂ ಅರ್ಥಾಂತರಗಳನ್ನೂ ಬಳಸಿ ಇವು ಸಂಸ್ಕೃತದಲ್ಲಿ ಗಾದೆಮಾತುಗಳಾಗುವಂತೆ ಮಾಡಿದ್ದಾನೆ. 'ದುರ್ಲಭವು ಹಿತನುಡಿಯೆ ಪ್ರಿಯವಪ್ಪುದು' 'ಪ್ರಬಲರಾ ಪಗೆತನವು ಕಷ್ಟಗಳ ನೆಲೆಯು' 'ರೋಷವಿಲ್ಲದನೊಡನೆ ಕೆಳೆತನಕೆ ಬೆಲೆಯಿಲ್ಲ' 'ಚಿತ್ತವೃತ್ತಿಗಳಿಹುದೆ ಅತಿ ವಿಚಿತ್ರ', 'ತುಳಿಯರುರಿವ ಬೆಂಕಿಯನ್ನು ಬೂದಿಯನ್ನು ತುಳಿವರು', 'ಅವಿವೇಕವು ಕಷ್ಟಮೂಲ ಪರಮವು' 'ಕ್ಷಮೆವೊಲಿಲ್ಲ ಸಾಧಕ,' 'ರಣದಲಿ ಜಯಸಿರಿಯಗ್ಗಳಗೆ' 'ಸುಜನರ ಸಂಗಮು ಪ್ರೀತಿಪರ'—ಇವು ಅಲ್ಲೊಂದು ಇಲ್ಲೊಂದು ತೆಗೆದ ಸೂಕ್ತಿರತ್ನಗಳು. ಭಾರವಿಯ ಲೋಕಾನುಭವವನ್ನು ಇವು

ಸಾರವತ್ತಾಗಿಯೂ ಸುಂದರವಾಗಿಯೂ ಸಂಗ್ರಹಿಸುತ್ತವೆ. ಭಾರವಿಯ ಹಿಮವತ್ ಪರ್ವತವರ್ಣನೆಯನ್ನು ಕಾಳಿದಾಸನ ಹಿಮವತ್ಪರ್ವತವರ್ಣನೆಯೊಂದಿಗೆ ಹೋಲಿಸಿ ರಸಿಕರು ಓದಬೇಕು. ಆಗ ಇಬ್ಬರ ಪ್ರತಿಭಾತಾರತಮ್ಯವು ವೇದ್ಯವಾಗುತ್ತದೆ. ಕಾಳಿದಾಸನು ಉಪಕ್ರಮದಲ್ಲಿಯೇ 'ದೇವತಾತ್ಮ'ನೆಂದು ಪರ್ವತಕ್ಕೆ ವಿಶೇಷಣ ಹೇಳಿ ಅದಕ್ಕನುಗುಣವಾಗಿ ವರ್ಣಿಸಿರುವುದು ಆ ಕಾವ್ಯಾಂಶವಾದ ಪಾರ್ವತೀಜನಕತ್ವದ ದೃಷ್ಟಿಯಿಂದ ಸಮುಚಿತವಾಗಿಯೇ ಇದೆ. ಆದರೆ ಆ ಮಹಾಶೈಲದ ಯಥಾರ್ಥ ಭವ್ಯತೆ ಒಡಮೂಡುವುದು ಭಾರವಿಯ ದಿವ್ಯ ಪ್ರತಿಭೆಯ ಫಲಗಳಾದ ಉತ್ಪ್ರೇಕ್ಷೆ ಅತಿಶಯೋಕ್ತಿಗಳಲ್ಲಿ. ಭಾರವಿಯೂ ಪೌರಾಣಿಕಲೋಕದಿಂದ ಅಲಂಕಾರಗಳನ್ನು ತರಬಲ್ಲನಾದರೂ ತಾನು ಸ್ವಂತವಾಗಿ ಅನುಭವಿಸಿದ ಪ್ರಪಂಚದಿಂದಲೇ ಕಲ್ಪನಾಚಿತ್ರಗಳನ್ನು ರೇಖಿಸುವುದು ಅವನ ವೈಶಿಷ್ಟ್ಯ. ಕಾಳಿದಾಸನ ಮನೋಧರ್ಮವು ಸಹಜವಾಗಿಯೇ ಸುಕುಮಾರವಾದುದು; ಅವನ ಶೈಲಿ ಮೃಧುರ. ಅದು ಶೃಂಗಾರ ಚಿತ್ರಗಳಲ್ಲಿ ಪಡೆಯುವ ಸಿದ್ಧಿ ಅದ್ವಿತೀಯ. ಆದರೆ ಕ್ಷಾತ್ರದ ಕಿಡಿಯಂತೆ ಕ್ರೋಧದ ಉರಿಯನ್ನೂ, ಅಳಲಿನ ಬೆಂಕಿಯಂತೆ, ಯುದ್ಧದ ಬೊಬ್ಬೆಯನ್ನೂ, ಹೈಮಾಚಲ ಸ್ವರೂಪದಂತೆ ದೇವಲೋಕದವರ ಸುರತಗೋಷ್ಠಿಯನ್ನು ವರ್ಣಿಸಲು ಭಾರವಿಯ ಶೈಲಿಗಿರುವ ಸಾಮರ್ಥ್ಯವು ಕಾಳಿದಾಸನಿಗಿಂತ ಮಿಗಿಲಾದುದು. ಭಾರವಿಯ ಶೈಲಿಯಲ್ಲಿರುವ ಜೋರು ಅಥವಾ ಏರು ಸಂಸ್ಕೃತದ ಮತ್ತಾವ ಕವಿಯಲ್ಲಿಯೂ ಇಲ್ಲ. ಅವನ ಮಾತಿನಲ್ಲಿ ಬಳಕೆವಾತಿನ ಶಕ್ತಿ ತುಂಬಿತುಳುಕುತ್ತದೆ; ಶಬ್ದಗಳ ಜೋಡಣೆಯಲ್ಲಿ ಒಂದು ವಿಶಿಷ್ಟವಾದ ಮಾರ್ಮಿಕತೆಯಿದೆ. ಅಲಂಕಾರಗಳಲ್ಲಿ ಸಹಜಾನುಭವದ ಮುದ್ರೆಯಿದೆ. ವರ್ಣನಾ ವಿಷಯದಲ್ಲಿ ಪ್ರತಿಭೆಗೆ ಹೆಚ್ಚಿನ ಅವಕಾಶವಿಲ್ಲವೆಂದು ಕಂಡೊಡನೆ ಶಬ್ದಚಮತ್ಕಾರದಿಂದ ಕೊರತೆಯನ್ನು ತುಂಬಿಕೊಳ್ಳುವ ಕೌಶಲವೂ ಇದೆ. ಭಾರವಿಯ ವರ್ಣನೆಗಳು ಹೃದಯಂಗಮವೆನಿಸಲು ಇವೆಲ್ಲವುಗಳ ಸುಂದರ ಸಮಾವೇಶವೇ ಕಾರಣ. ವರ್ಣನೆಯ ಭರದಲ್ಲಿ ಕಥೆ ಕೈಬಿಟ್ಟು ಹೋಗುವ ಪ್ರಸಂಗಬಾರದಂತೆ ಅವನು ಚಿರಪರಿಚಿತವಾದ, ಸಣ್ಣಕತೆಗಿಂತಲೂ ಸಣ್ಣನಾದ ಕಥಾಸೂತ್ರವನ್ನಾರಿಸಿಕೊಂಡಿದ್ದಾನೆ. ಇಂದಿನ ಅಭಿರುಚಿಗೆ ಕೂಡ ಅವನ ಅಲಂಕಾರಗಳು ನಾವೀನ್ಯತೆ

ಯಿಂದ ತುಂಬಿದಂತಿರಬೇಕಾದರೆ, ಇದಕ್ಕಿಂತ ಹೆಚ್ಚಿನ ಕಾಣಿಕೆ ಅವನ ವರ್ಣನಾ ಕೌಶಲಕ್ಕೆ ಬೇರೆ ಬೇಡ. 'ಬಯಲ್ದಾವರೆಯ ಬಳಗದಿಂದ ಗಾಳಿಯೆತ್ತಿದ ದೂಳಿಯು ಮಂಡಲಾಕಾರವಾಗಿ ಪಸರಿಸಿ ತೆರೆದ ಬಂಗಾರದ ಗಗನದಲ್ಲೆಲ್ಲ ಛತ್ರಿಯ ಸೊಬಗನ್ನು ತಳೆದಿದೆ.' (V.೩೯) ಎಂಬ ಒಂದು ನಿದರ್ಶನಾಲಂಕಾರವನ್ನು ಮೆಚ್ಚಿ ನಲಿದ ಹಿಂದಿನ ಸಂಸ್ಕೃತಸಹೃದಯರು ಭಾರವಿಗೆ 'ಛತ್ರಭಾರವಿ' ಯೆಂಬ ಪ್ರೇಮನಾಮವನ್ನಿತ್ತಿದ್ದರಂತೆ. ಇಂದಿನ ಸಹೃದಯರು ಅಂತಹ ನೂರಾರು ನಾಮಧೇಯಗಳನ್ನು ಕೊಡಬಹುದು—ಆ ಮಹಾಕವಿಯ ಅಲಂಕಾರಗಳಿಗೆ ಎದೆತೆರೆದರೆ. ಹೀಗೆ ಭಾರವಿಯ ಸಂವೇದನ ಸೂಕ್ಷ್ಮವಾದುದರಿಂದ, ಭಾಷೆ ನಿರ್ಮಲವಾದುದರಿಂದ, ಭಾವ ಭವ್ಯವಾದು ದರಿಂದ ಅವನ ವರ್ಣನೆ ದಿವ್ಯವಾಗಿದೆಯೆಂದು ಹೇಳಿ ವಿಮರ್ಶೆಯನ್ನು ಮುಗಿಸಬಹುದು. ಭಾರವಿಯ ರಾಜನೀತಿ ಇಂದಿನ ಸ್ವಾತಂತ್ರ್ಯ ಯುಗದಲ್ಲಿ ಭಾರತೀಯರಿಗೆ ಹೆಚ್ಚಿನ ಸ್ಫೂರ್ತಿಯನ್ನು ಈಯಬಹುದು. ಭಾರವಿಯ ಕಾವ್ಯವನ್ನು ಕನ್ನಡದ ಕವಿಕುಲಕ್ಕೆ ಗುರುವಾದ ಪಂಪನೇ ಮನ ವಾರೆ ಮೆಚ್ಚಿ ಹತ್ತಾರು ಶ್ಲೋಕಗಳನ್ನು ತನ್ನ ವಿಕ್ರಮಾರ್ಜುನ ವಿಜಯ ದಲ್ಲಿ ಅನುವಾದಿಸಿದ್ದಾನೆ. ಷಡಕ್ಷರಿ 'ಶಬರಶಂಕರವಿಲಾಸಂ' ಎಂಬ ಗ್ರಂಥವನ್ನೇ ಬರೆದಿದ್ದಾನೆ. ರಸಪ್ರತಿಪಾದನೆಯ ದೃಷ್ಟಿಯಿಂದ ನೋಡಿದರೆ ಇಲ್ಲಿ ಟೀಕಾಕಾರನಾದ ಮಲ್ಲಿನಾಥನು ಹೇಳುವಂತೆ ಶೃಂಗಾರ, ಅದ್ಭುತ, ರೌದ್ರಾದಿ ರಸಗಳು ಗೌಣವಾಗಿ ಬಂದರೂ ವೀರವೇ ಪ್ರಧಾನರಸ. ಪಂಪನು ಅರ್ಜುನನನ್ನು ಕಥಾನಾಯಕನನ್ನಾಗಿ ಮಾಡಲು ಭಾರವಿಯಿಂದಲೇ ಸ್ಫೂರ್ತಿ ಯನ್ನು ಪಡೆದಿದ್ದರೂ ಇರಬಹುದು. ಕವಿರಾಜ ಮಾರ್ಗಕಾರನಂತೂ ಭಾರವಿಯನ್ನು ಸ್ಮರಿಸಿಯೇ ಗ್ರಂಥರಚನೆಗೆ ತೊಡಗಿದ್ದಾನೆ. ಹೀಗೆ ಕವಿ ಗಳಿಗೆ ಕಾವ್ಯಧರ್ಮದ ಸ್ಫೂರ್ತಿ ಭಾರವಿಯಿಂದುಂಟಾದಂತೆ ಜನಗಳಿಗೆ ಜೀವನದಲ್ಲಿ ಧರ್ಮಕಾಮಾರ್ಥಗಳೆಂಬ ಮೂರೂ ಪುರುಷಾರ್ಥಗಳ ಬಗೆಗೆ ಭಾರತ ಸಂಸ್ಕೃತಿಯ ಸಂದೇಶಸಾರವು 'ಹಿತಮಿತಮಧುರ' ವಾಗಿ ಲಭಿಸುತ್ತ ಬಂದಿದೆ. ಈ ಧಾರೆಗೆ ಚ್ಯುತಿಬಾರದಿರಲೆಂದು ಹಾರೈಸಿ ಪೀಠಿಕೆಯನ್ನು ಮುಗಿಸುತ್ತೇವೆ.

## ಸಮಾಪ್ತಿವಾಕ್ಯಂಗಳ್

ಕನ್ನಡ ಕವಿತಾವನಿತೆಗೆ
ಚಿನ್ನದ ಮಣಿಹಾರಮಪ್ಪಿನಂ ದೃಢಮತಿಯಿಂ ।
ಸನ್ನುತ ಭಾರವಿಕೃತಿಯಂ
ಕನ್ನಡಿಸಿದನಲ್ತೆ ಕೃಷ್ಣಮೂರುತಿವಿಬುಧಂ ॥

ರಸವೊಂದನೆ ಸವಿವೊಡೆ ಬೇ-
ವೆಸಮಂ ಕಳೆಯುತ್ತುಮಂತೆ ಭಾರವಿಕೃತಿಯೊಳ್ ।
ಪಸರಿಪ ಸೊಬಗಂ ತಿಳಿವೊಡೆ
ರಸಿಕರ್ಗಿದು ಕಾಮಧೇನು ಕನ್ನಡನುಡಿಯೊಳ್ ॥

ಸರ್ಗಾದಿಯೊಳೆಂತಂತೆನೆ
ಸರ್ಗಾಂತ್ಯದೊಳಂ ನೆಗಳ್ದ ಲಕ್ಷ್ಮೀಶಬ್ದಂ ।
ಸ್ವರ್ಗದ ಸೊಬಗಿಳೆಯೊಳ್ ನೈ
ಸರ್ಗಿಕಮೆನೆ ಬಂದುದೆಂದು ಸೂಚಿಪುದಲ್ತೇ ॥

# ಕನ್ನಡ ಕಿರಾತಾರ್ಜುನೀಯ

(ಮಹಾಕವಿ ಭಾರವಿಯ ಸಂಸ್ಕೃತ ಮೂಲದ ಸಮಗ್ರ ಪದ್ಯಾನುವಾದ)

*Classics are always new*

ನಿಚ್ಚಂ ಪೊಸತು ಮಹಾಕಾವ್ಯಂ

ಸ್ಫುಟತೆಯಿರದ ನುಡಿಗಳಿಲ್ಲ ಬಂದಿತರ್ಥಗೌರವ
ಕೊಳ್ಳುತೆಲ್ಲ ಸಾರ್ಥವ ।
ಮಾತಿಗೆಲ್ಲ ನೂತನಾರ್ಥವಿರ್ಪುದೆಲ್ಲು ಕುಂದದು
ಸಮರ್ಥಕತ್ವವೆಂಬದು ॥ ೨. ೨೭.

# ಕನ್ನಡ ಕಿರಾತಾರ್ಜುನೀಯ

## ಮೊದಲನೆಯ ಸರ್ಗ

೧

ಕುರುರಾಜನ ಸಿರಿಯೊದವಿಗೆ ನೆಲೆಯೆನಿಸಿದ ನಯಮಂ
ಜನದೆಡೆಯೊಳ್ ತಿಳಿಯೆನ್ನುತೆ ಮುನ್ನಟ್ಟಿದ ಚಾರಂ ।
ಆ ಧರ್ಮಜನೆಡೆಯರಸುತೆ ವಟುವೇಷಕಿರಾತಂ
ದ್ವೈತಾಟವಿಗೈತಂದನು ತಿಳಿದೆಲ್ಲ ವಿಚಾರಂ ॥

೨

ಕೈಮುಗಿಯುತೆ 'ಪಗೆ ಗೆದ್ದನು ನೆಲವೆಲ್ಲವ' ನೆಂದು
ಭೂರಮಣಗೆ ನುಡಿವಲ್ಲಿಯುಮಿರಲಿಲ್ಲವು ಕುಂದು ।
ಆ ದೂತನ ಬಗೆಯಲ್ಲೆನೆ ಹಿತವಂತರು ಹುಸಿಯಂ
ಬರಿಯಾಡಲು ಬಗೆದೋರರು ಪ್ರಿಯವೆನ್ನುವ ದೆಸೆಯಿಂ ॥

೩

ರಿಪುನಾಶದ ಮಾಕಜ್ಜಕೆ ಮನದಂದ ನೃಪಾಲಂ
ಏಕಾಂತದೆ ಬೆಸನೀಯಲು ಪೇಳೆಲ್ಲವನೆಂದು ।
ಸೌಶಬ್ದ್ಯದ ಗುರ್ವರ್ಥದ ಸಿರಿಯುಕ್ಕುವ ತೆರದಿಂ
ಶಾಸ್ತ್ರಾರ್ಥವನವನಾಡಿದನೀ ಮುಂದಿನ ತೆರದಿಂ ॥

೪

" ಕ್ರಿಯೆಯುಳ್ಳ ಸೇವಕರು ಚಾರಚಕ್ಷುಗಳಪ್ಪ
ಪ್ರಭುಗಳಿಗೆ ಮೋಸವನು ಗೈವುದಲ್ತು ।
ಪ್ರಿಯವೊ ಮೇಣಪ್ರಿಯವೊ ಏನಿರೆಯು ಮನ್ನಿಪುದು;
ದುರ್ಲಭವು ಹಿತನುಡಿಯೆ ಪ್ರಿಯವಪ್ಪುದು

೫

ಒಡೆಯಂಗೆ ಲೇಸಹುದ ಪೇಳದವ ದುರ್ಮಂತ್ರಿ
ಹಿತಜನರನಾಲಿಸದ ರಾಜ ಹೀನ ।
ರಾಜಮಂತ್ರಿಗಳೆಲ್ಲಿ ಕೂಡಿ ನಡೆವರೊ ಬಿಡದೆ
ಸರ್ವಸಂಪದವಲ್ಲೆ ನಿತ್ಯಲೀನ ॥

೬

ಪರಮದುರ್ಗಮವಪ್ಪ ರಾಜವರ್ತನೆಯೆಲ್ಲಿ
ನನ್ನಂತೆ ಜಡಮತಿಯ ಜಂತುಗಳು ಎಲ್ಲಿ ।
ಆದರೂ ವೈರಿಗಳ ಗೂಢನೀತಿಯನಾನು
ತಿಳಿದುದಕೆ ನಿಮ್ಮಡಿಯ ಮಹಿಮೆಯೇ ಹದನು ॥

೭

ಸಿಂಹಾಸನಾಸೀನನಾದ ದುರ್ಯೋಧನನು
ಕಾಡೊಳಿಹ ನಿಮ್ಮತ್ತಣಿಂ ಸೋಲ ಬಗೆದು ।
ಮೋಸದಿಂ ಜೂದಿನೊಳು ಗೆಲಿದಿರ್ಪ ಧರಣಿಯನು
ರಾಜನೀತಿಯೊಳಿಂದು ಗೆಲುವೆನೆಂದಿಹನು ॥

೮

ನಿಮ್ಮ ಗೆಲುವಾಸೆಯೊಳಗಾ ಕುಟಿಲನಾರ್ಜಿಪನು
ವಿಮಲಯಶವನೆ ತನ್ನ ಗುಣದೇಳ್ಗೆಯಿಂದೆ ।
ಕೆಟ್ಟವರ ಕೆಳೆಗಿಂತ ಸಜ್ಜನರ ಪಗೆತನವೆ
ಲೇಸಹುದು ಸಂಪದವ ನೀಡುವುದರಿಂದೆ ॥

೯

ಪ್ರಜೆಗಳನು ಪಾಲಿಸುವ ದುಷ್ಕರ ವಿಧಾನದಲಿ
ಕೃತಮತಿಯು ಗೆಲಿದಿಹನು ಷಡ್ರಿಪುಗಳನ್ನು ।
ಪಗಲಿರುಳ ವಿಂಗಡಿಸಿ ನೂಂಕುತಾಲಸ್ಯವನು
ನೃಪನೀತಿಯೆಂತೆಂತೆ ಸತತ ವರ್ತಿಪನು ॥

೧೦

ಅನುಚರರ ನೋಡುವೊಡೆ ನೇಹದಾ ಸಖರೆನಲು
ಸಖರ ಮಾನವು ಬಂಧುಜನ ಸಮಾನ ।
ಜಿತಗರ್ವನಾವಗಂ ಬಂಧುಗಳ ತೋರಿಪನು
ಆಧಿಪತ್ಯವೆ ಅವರದೆನಿಪಂತೆ ದೀನ ॥

೧೧

ಅತಿಸಂಗಮಂ ತೊರೆದು ಸಮರೀತಿಯಿಂದವನು
ನಲ್ಮೆಯಿಂದೊಂದೊಂದನೂ ಭಜಿಸಲೆಲ್ಲ ।
ಮನವೊಚ್ಚಿ ಗುಣಗಳಿಗೆ ಕೆಳೆಗೊಂಡ ಮಾಳ್ಕೆಯಲಿ
ತ್ರಿಗಣಂಗಳೊಳಗೊಳಗೆ ವೈರಮಿನಿತಿಲ್ಲ ॥

೧೨

ಬಗೆಗೊಂಡ ನಲ್ಮಾತು ದಾನವರ್ಜಿತವಲ್ಲ
ಭೂರಿದಾನಕೆ ಇಲ್ಲ ಸತ್ಕಾರಲೋಪ ।
ಸತ್ಕಾರವೆಂದೊಡದು ಬಹುವಿಪುಲವೆನಿಸುವುದು
ಗುಣವ ನೋಡದೆ ಬರಿದೆ ತಾನು ಪೊರಮಡದು ॥

೧೩

ಸಂಯಮಿಯು ತೊರೆದಿಹನು ಸಂಪದದೊಳಾಸೆಯನು
ಮುಳಿಸಿಲ್ಲ ನೆವಮಿಲ್ಲ ನೃಪಧರ್ಮವೆಂದೆ ।
ಧರ್ಮವಿಪ್ಲವವಾಗೆ ಗುರುವೆಂದ ವಂಡವಲಿ
ದಂಡಿಪನು ಪಗೆಯಿರಲಿ ಮಗನೆ ತಾನಿರಲಿ ॥

೧೪

ನೆಚ್ಚಿನಾ ಬಂಟರನು ಕಾವಲಿಟ್ಟಿಲ್ಲೆಡೆಗೆ
ಭೀತನೇ ಪೋದಪನು ನಿರ್ಭೀತನಂತೆ ।
ಕಾರ್ಯಸಿದ್ಧಿಯ ಕಂಡು ಸೇವಕರಿಗವನಿತ್ತ
ಸಿರಿಗಳೇ ಸಾರುವುವು ಕೃತವೇದಿಯೆನುತೆ ॥

೧೫

ಆವಗಂ ಪರಿಕಿಸುತೆ ಕಾರ್ಯವನು ಯೋಜಿಸುವ
ಸತ್ಕಾರವನು ಪಡೆದವನ ನಾಲ್ಕು ನಯವು ।
ಸ್ಪರ್ಧೆಗೊಂಡಿಷ್ಟಾರ್ಥಸಂಪದವ ಫಲಿಸುವವು
ಅನವರತ ದೊರೆಕೊಳಲು ಪಿರಿದಪ್ಪ ಗುಣವು ॥

೧೬

ನೃಪರನೇಕರ ತೇರ ಕುದುರೆಗಳು ಕಿಕ್ಕಿರಿದ
ಆತನೋಲಗಸಾಲೆಯಂಗಳವ ಸತತ ।
ನೃಪರು ಕಾಣಿಕೆಯಿತ್ತ ಗಜಗಳಾ ಮದಜಲವು
ಸಪ್ತಪರ್ಣಸುಗಂಧಿ ತೊಯ್ವುದನವರತ ॥

೧೭

ಆತನಾಳುತಿರಲ್ಕೆ ಉಳವೆಯೋ ರೈತರಿಗೆ
ಕೆಯ್ವೊಲಗಳಿಂ ಬೆಳೆಯು ಸುಖವಾಗಿ ಬಹುದು ।
ಮಳೆನೀರ ದಂದುಗವು ಕೆರೆಕಾಲ್ಗಳಿಂದಳಿಯೆ
ಕಡೆಗೊಮ್ಮೆ ಕುರುನಾಡು ಕಂಗೊಳಿಸುತಿಹುದು ॥

೧೮

ವಸುಗಳಂ ಕರೆಯುವಳು ತಾನಾಗಿಯೇ ಧರೆಯು
ಅರಸನಾತನ ಗುಣಕೆ ಕರಗೆ ಬಗೆಯು ।
ವಸುಸದೃಶನಾ ನೃಪನು ಜಸದೇಳ್ಗೆ ದಯೆಗಳಲಿ
ಎಡರಿಲ್ಲದೇಳ್ಗೆಗೆಂದಾಳ್ವುದರಲಿ ॥

೧೯

ಬಲವುಳ್ಳ ಮಾನಿಗಳು ಬಹುಧನವ ಪಡೆದವರು
ಬಿಲ್ಲಾಳ್ಗಳಾಜಿಯಲಿ ಜಸವನಾಂತವರು ।
ಕೂಟವಿಲ್ಲದೆ ಬಗೆಯೊಳೊಡಕು ಮೇಣಿಲ್ಲದೆಯೆ
ಹರಣವನೆ ತೆರುತವನ ಹಿತಗೈಯಲಿಹರು

೨೦

ಸಚ್ಚರಿತವುಳ್ಳ ಚರರಿಂದಲಾ ಕೃತಕೃತ್ಯ-
ನರಿಯುವನು ಸೆಕ್ರ್ಯೇಷ ನೃಪರ ಕೃತಿಯ ।
ಅಮಿತವೆನ್ನೆ ಹಿತಪೂರ್ಣ ಫಲಸೂಚ್ಯವಿಂಗಿತವು
ಪೋಲುತಲಿ ವಿಶ್ವಸೃಜ ವಿಧಿಯ ಮತಿಯ ॥

೨೧

ಹೆದೆಯನೇರಿಸಿ ಬಿಲ್ಲನವನೆತ್ತಿ ಕಂಡಿಲ್ಲ
ಕೋಪದಲಿ ಮೊಗವನವ ಗಂಟಿಕ್ಕನಂತೆ ।
ಗುಣರಾಗದಿಂದವನ ಶಾಸನವ ಶಿರದಲ್ಲಿ
ಧರಿಸುವರು ನೃಪತಿಗಳು ಪೂಮಾಲೆಯಂತೆ ॥

೨೨

ಸಿದ್ಧಶಾಸನನವನು ಯೌವನೋದ್ಧತನನ್ನು
ಯೌವರಾಜ್ಯದಲಿಟ್ಟು ದುಶ್ಶಾಸನನನು ।
ಯಾಗಕ್ಕೆ ಬಗೆದಂದು ಗುರುವಿನಾಣತಿಯಂತೆ
ಹವ್ಯದಿಂದಗ್ನಿಯನು ತಾನೊಲಿಸುತಿಹನು ॥

೨೩

ರಿಪುನೃಪರನಿಲ್ಲೆನಿಸಿ ನೆಲೆಗೊಳಿಸುತೊಡೆತನವ
ಆಸಿಂಧುಭೂವಲಯಕಧಿರಾಜನೆನೆಯೂ ।
ನಿನ್ನತ್ತಣಿಂದವನು ನೆನೆಯುವನು ಭಯಗಳನೆ
ಪ್ರಬಲರಾ ಪಗೆತನವು ಕಷ್ಟಗಳ ನೆಲೆಯು ॥

೨೪

ಮಾತುಕತೆಗಳ ಮಧ್ಯೆ ನಿನ್ನ ಹೆಸರನು ಜನರು
ನುಡಿದೊಡನೆ ಪಾರ್ಥನದಟನ್ನು ನೆನೆದು ।
ಮೊಗ ತಗ್ಗಿ ಬಸವಳಿವನವನು ದುಸ್ಸಹವಾದ
ಮಂತ್ರಪದದಿಂದುರಗನೆಂತಂತೆ ಸುಗಿದು ॥

೨೫

ಒಡನೆ ನಿಮ್ಮಡಿಗವನು ಬಗೆದಿಹನು ಕಪಟವನು
ಮಾಳ್ಪುದುಚಿತವನಿನ್ನು ನೀವೆ ಪ್ರತಿಯನ್ನು ।
ಪರರೆಂದ ಮಾತುಗಳನಂತೆ ಪೇಳ್ವವರಾವು
ಸುದ್ದಿ ಕೊಡುವುದೆ ನಮ್ಮ ನುಡಿಗೆ ಬೆಲೆಯು ॥

೨೬

ಇಂತೊರೆದು ಸುದ್ದಿಯನು ಕೊಂಡು ಬಹುಮಾನವನು
ವನಹಾಸಿನಾಯಕನು ಪೋಗಲತ್ತ ।
ದ್ರೌಪದಿಯ ಮನೆಗೈದಿ ತಮ್ಮಂದಿರೆಲ್ಲಂಗೆ
ಅರುಹಿದನು ವಾರ್ತೆಯನು ಅರಸನಿತ್ತ ॥

೨೭

ಶತ್ರುಗಳ ಸಿದ್ಧಿಯನು ಕೇಳಿ ದ್ರುಪದಾತ್ಮಜೆಯು
ಅವರೆಸಗಿದಪಕಾರಗಳ ತಡೆಯದಿಂತು ।
ನೃಪನ ಕೋಪವನಂತೆ ಕಾರ್ಯದಾರಂಭವನು
ಕೆರಳಿಸುವ ಮಾತುಗಳನಾಡಿದಳು ನಿಂತು ॥

೨೮

ನಿನ್ನನ್ನರಂ ಕುರಿತು ಪೇಳಲ್ಕೆ ನಾರಿಯರು
ಸೂಚನೆಗಳೆನಿಸುವುವು ದೂಷಣೆಗಳೆಂದು ।
ಆದರೂ ಮನದಳಲು ಬಿಡದೆನ್ನ ನುಡಿಸುತಿದೆ
ನಾರಿಯರ ನಾಣನೂ ಕಿಳ್ತೊಗೆದು ಇಂದು ॥

೨೯

ನಿಜವಂಶದರಸುಗಳು ಸುತ್ರಾಮಸಮಬಲರು
ಚಿರಮಾಳ್ದಖಂಡ ಭೂಮಂಡಲವನೆ ।
ನಿನ್ನ ಕರದಿಂ ನೀನೆ ಬಿಸುಟಿರುವೆ ಮದಿಸಿರುವ
ಕಾಡಾನೆ ಬಿಸುಡುವೊಲು ಪೂಮಾಲೆಯನ್ನೆ ॥

೩೦

ಕಪಟಿಗಳ ವಿಷಯದಲಿ ಕಪಟವನು ತೋರದಿಹ
ಗಾಂಪರಿಗೆ ಸೋಲೊಂದೆ ಸಮನಿಸುವುದು ।
ಶಠರವರ ಬ್ಬಳಪೊಕ್ಕು ಕೊಲ್ಲುವರು ಕೂರಂಬು
ಕೊಲುವಂತೆ ಕವಚವೇ ಇಲ್ಲದರನು ॥

೩೧

ನೀನಲ್ಲದಿನ್ನಾವ ದೊರೆಯು ಸಾಧನವಿರೆಯು
ನಿಜವಂಶವಭಿಮಾನಿಯೆನಿಸಿಯೂ ತನ್ನ ।
ಗುಣರಕ್ತೆ ಸತ್ಕುಲಜೆ ಮನವನ್ನೆ ಸಿರಿಯನ್ನು
ಪಗೆಯುಯ್ಯಗುಡುವನೋ ನಿಜಪತ್ನಿಯನ್ನು ॥

೩೨

ಮಾನಿಗಳು ನಿಂದಿಸುವ ದಾರಿಯಲಿ ನೀನಿನಿತು
ನರದೇವ! ತೊಳಲುತಿರೆಯುಂ ನಿನ್ನನೆಂತು ।
ಭುಗಿಲೆಂದು ರೋಷದಾ ಜ್ವಾಲೆಯಾವರಿಸದಿದೆ
ಒಣಬನ್ನಿ ಮರವನ್ನು ದಳ್ಳುರಿಯ ತೆರದೆ ॥

೩೩

ಬಂಜೆಯಲ್ಲದ ಕೋಪದಿಂದೆಡರುಗಳ ಕುಟ್ಟಿ
ಕೆಡಹುವಾತಗೆ ಜನರು ತಾವೆ ವಶರಹರು ।
ರೋಷವಿಲ್ಲದನೊಡನೆ ಕೆಳೆತನಕೆ ಬೆಲೆಯಿಲ್ಲ
ಪಗೆತನಕೆ ಭಾವಿಸಲು ಭಯವು ತಾನಿಲ್ಲ ॥

೩೪

ರಕ್ತಚಂದನಲಿಪ್ತ ರಥಚಾರಿಯೆನೆ ಮೆರೆದ
ಬಲಭೀಮನಲೆಯುತಿರೆ ದೂಳಡಸಿ ತಾನು ।
ಬೆಟ್ಟಗುಡ್ಡಗಳಲ್ಲಿ ಕಾಲ್ನಡಗೆಯಿಂದೀಗ
ಸತ್ಯಧನ! ನಿನ್ನ ಮನ ನೋಯಿಸುವುದೇನು ॥

೩೫

ಉತ್ತರದ ಕುರುದೇಶಮಂ ಮುನ್ನ ತಾಂ ಜಯಿಸಿ
ವಾಸವೋಪಮನತುಲ ವಸು ಕನಕ ಚಯವ ।
ನಿನಗಿತ್ತ ಫಲ್ಗುನನೆ ನಾರುಡೆಯನೀವಾಗ
ಕೆರಳದಿರ್ಪುದದೆಂತು ಮುಳಿಸು ನಿನಗೀಗ ॥

೩೬

ವನಭೂಮಿಯೇ ಸೆಜ್ಜೆಯೆನೆ ಕಠಿಣದೇಹಿಗಳು
ಬೆಟ್ಟದಾನೆಗಳಂತೆ ಕೇಶವಲ್ಲಾಡೆ ।
ಅವಳಿಗಳನೀಪರಿಯ ತನ್ಮದಿರ ನೋಡುತ್ತೆ
ಶಾಂತಿಸಂಯಮಗಳನು ನೀನೆಂತು ಬಿಸುಡೆ ॥

೩೭

ಈ ನಿನ್ನ ಬುದ್ಧಿಯನು ತಿಳಿಯಲಾರೆನು ನಾನು
ಚಿತ್ತವೃತ್ತಿಗಳಿಹುದೆ ಅತಿವಿಚಿತ್ರ ।
ನಿನಗೊದಗಿದಾಪತ್ತ ಕುರಿತು ಚಿಂತಿಸಲೊಡನೆ
ಹಿರಿಯಳಲು ನೋಯಿಪುದು ಮನ್ಮನವನೆ ॥

೩೮

ಮುನ್ನ ನೀಂ ಪಟ್ಟಿರುತೆ ಬಹುರತ್ನಮಂಚದಲಿ
ವಂದಿಮಂಗಳಗೀತಕೆಳ್ಚರುತಲಿರ್ದೆ ।
ಈಗಳಿಂತೀ ನೆಲದ ದರ್ಭೆಹುಲ್ಲೊಳಗೊರಗಿ
ಪೆಣ್ಣರಿಗಳಶುಭರುತ ಕೇಳುತಿರ್ಪೆ ॥

೩೯

ಮುನ್ನ ವಿಪ್ರರ ಭುಕ್ತಶೇಷದಿಂ ಬೆಳೆಯುತ್ತ
ರಮಣೀಯತೆಯನಾಂತ ನಿನ್ನೊಡಲು ಇಂದು ।
ಕಾಡಹಣ್ಣುಗಳನ್ನೆ ನೀನುಂಬ ಕಾರಣದೆ
ಸೊರಗಿ ಬಡವಾಗಿಹುದು ಜಸದೊಡನೆ ಸಂದು ॥

೪೦

ಅನವರತ ಮಣಿಪೀಠದಲಿ ಕುಳಿತು ರಾಜಿಸುತ
ನೃಪರಮುಡಿಪೂರಜದೆ ರಂಜಿಸಿದ ಪಾದ।
ತಾನಿಂತು ಕಾಡೊಳಗೆ ಮಿಗವಕ್ಕಿ ನೆಕ್ಕಿರುವ
ದರ್ಭೆಹುಲ್ಲಿನ ಮೇಲೆ ನೆಲೆಸಿಹುದು, ಖೇದ॥

೪೧

ವೈರಿಕಾರಣವಪ್ಪ ನಿನ್ನ ಈ ದುರ್ದೆಸೆಯು
ಕೀಳುತಿದೆ ಮನ್ಮನವ ಮೂಲಸಹಿತ।
ವೀರ್ಯಸಂಪದವನ್ನು ಪಗೆಗೆ ಸೋಲದ ಮಾನ-
ಧನರಿಂಗೆ ಸೋಲು ಸಹ ಹರ್ಷಭರಿತ॥

೪೨

ಆದರಿಂದೆ ಶಾಂತಿಯನು ಬಿಸುಟು ನೀಂ ತೇಜವನು
ಸ್ವೀಕರಿಸು ಶತ್ರುಗಳ ನಾಶವನು ಬಗೆದು।
ರಿಪುಗಳನು ಕಡೆಗಣಿಸಿ ನಿಸ್ಪೃಹತೆ ಶಮಗಳಿಂ
ಮುನಿಗಳಿಗೆ ಸಿದ್ಧಿಯೆನೆ ಭೂಪರಿಗೆ ಸಿಗದು॥

೪೩

ನಿಮ್ಮಂತೆ ತೇಜಸ್ವಿಮುಖ್ಯರು ಯಶೋಧನರು
ಈ ಬಗೆಯ ದುಸ್ಸಹ ಪರಾಭವವನು।
ಪಡೆದರುಂ ಹರಿಸದಿಂದಿರ್ಪುದಾದ ಬಳಿಕ್ಕ
ಅಭಿಮಾನಕಾಶ್ರಯವೆ ಮುರಿದುದಿನ್ನು॥

೪೪

ಕ್ಷಮೆಯೆ ಸುಖಸಾಧನವು ಎಂದೆಂದಿಗೂ ಎಂದು
ವಿಕ್ರಮವನೇ ನೀಗಿ ನಂಬುವೊಡೆ ಈಗ।
ಬಿಸುಡು ಕಾರ್ಮುಕವನ್ನು ರಾಜಚಿಹ್ನವನಿನ್ನು
ಜಟೆ ಬೆಳೆಸಿ ಬೆಂಕಿಯೊಳು ಹೋಮಗೈ ಬೇಗ॥

೪೫

ಶಾಠ್ಯಪರರಾಗಿರಲು ಶತ್ರುಗಳು, ನಿನಗೀಗ
ಅದಟಿರಲು, ಸಮಯವನು ಕಾಯುವುದು ತರವಲ್ಲ ।
ಶತ್ರುವಿಜಯವನಷ್ಟೆ ಕಾಮಿಸುವ ಧರಣಿಪರು
ದೂಷಿಸಲು ಸಂಧಿಯನು ನೆವವೊಂದ ಕಲ್ಪಿಪರು ॥

೪೬

ವಿಧಿಯ ಸಮಯದ ನಿಯಮದಿಂದಲಿ ಕಾಂತಿ ನಂದಿಧ ಕಂದಿದ
ವಸುವು ಕುಂದಿದ ತಲವೆ ಕಾಣದ ದುಃಖವಾರ್ಧಿಯೊಳದ್ದಿದ ।
ಶತ್ರುತಿಮಿರವ ಸದೆದು ದಿವಸದ ಮೊದಲೊಳುದಿಸುವ ರವಿಯನು
ಕೂಡುವಂದದಿ ಲಕ್ಷ್ಮಿ ನಿನ್ನಯ ಮರಳಿ ಸಾರಲಿ ಬಳಿಯನು ॥

ಮೊದಲನೆಯ ಸರ್ಗ ಮುಗಿದುದು.

# ಕನ್ನಡ ಕಿರಾತಾರ್ಜುನೀಯ

## ಎರಡನೆಯ ಸರ್ಗ

೧

ಇನಿಯೊಳೊರೆದ ಮಧುರವಾಣಿ ಮನಕೆ ಮುದವ ಮಾಡಲು
ತಕ್ಕುದೆಂದು ತೋರಲು ।
ಯುಕ್ತಿಯುಕ್ತ ಊರ್ಜಿತಾರ್ಥಸಿಕ್ತವೆನುವ ನುಡಿಯನು
ಭೀಮನರಸಗೊರೆದನು ॥

೨

ಒಲವ ಸೂಸಿ ಕಣ್ಗಳಿಂದ ನಮ್ಮನೆಲ್ಲ ನೋಡುತ
ಮಾನವತಿಯು ಖಂಡಿತ ।
ನುಡಿದ ಮಾತು ಪೇಳಲರಿದು ವಾಕ್ಪತಿಗೂ ನಿರುತ
ವಿಸ್ಮಯಕರ ಸತತ ॥

೩

ಇಳಿಯಲಕ್ಕು ಮೆಟ್ಟಲಿರಲು ವಿಷಮವಾದ ನೀರೊಳು
ಅಂತೆ ರಾಜನಯದೊಳು ।
ಮೆಟ್ಟಲನ್ನು ರಚಿಸಲಿಂತು ಬರ್ಪುದೆಂದು ಪರಿಯನು
ದೊರೆಯನೊರೆವ ಮನುಜನು ॥

೪

ಪರಿಣಾಮದೆ ಸುಖಕಾರಕ ಯೋಗ್ಯ ವೀರ್ಯವರ್ಧಕ
ಸತ್ತ್ವಹೀನ ಹಿಂಸಕ ।
ಇಂತು ಬಹಳ ಗುಣವು ಕಾಂಬುದಿವಳ ಕಿರಿಯ ನುಡಿಯೊಳು
ಸತ್ವಶಾಲಿ ಮದ್ದೊಲು ॥

೫

ಸುಗುಣಲೋಲ ನಿನಗಮುಕ್ಕೆ ರುಚಿತಮಿಾ ವಿಚಾರವು
ರುಚಿರವಸ್ತುಸಾರವು ।
ವಕ್ತೃಗುಣಕೆ ಬಗೆಯ ಕುಡರು ವಚನವನ್ನೆ ನೋಳ್ಪರು
ಎಲ್ಲ ಬಲ್ಲ ವಿಬುಧರು ॥

೬

ನೃಪನೆ! ನಾಲ್ಕುವಿದ್ಯೆಗಳಲು ಅತಿವಿವೇಕವುಳ್ಳುದು
ನಿನ್ನ ಮತಿಯು ನೆಗಳ್ದುದು ।
ವೈಪರೀತ್ಯದಲ್ಲಿ ಸಿಲುಕಿ ತಾನೆ ನರಳ್ವುದೆಂತಿದೆ
ಕೆಸರೊಳಾನೆಯಂದದೆ ॥

೭

ಇದಕು ಮಿಗಿಲು ಶೋಚ್ಯವುಂಟೆ ಶತ್ರುವಿಂದೆ ದುರ್ದಸೆ
ಯೊದಗಲಿಂತು ಎಣ್ದೆಸೆ ।
ಸುರರು ನುತಿಪ ನಿನ್ನ ಪೌರುಷಕ್ಕೆ ಸರ್ವನಾಶವು
ಬಂದಿತ್ತೈ ವಿಷಾದವು ॥

೮

ದುರಂತತೆಯ ಕಡೆಗೆ ಪರಿವ ಪಗೆಯ ಮಹಾಭ್ಯುದಯವು
ಸುಮತಿಯಿಂದೆ ಸಹ್ಯವು ।
ಫಲದ ಸಿರಿಯನೀವ ಪಗೆಯ ಪಿರಿಯ ಪರಿಕ್ಷೆಯವನು
ಉದಯಕಾಮಿ ಸಹಿಸನು ॥

೯

ಅಚಿರವಂತೆನಿಸಲರಿಕ್ಷಯದ ಪಿರಿಯದೆ ಯೋಗವು
ತನ್ನದು ವಿಪರೀತವು ।
ಜಾಣನದನುಪೇಕ್ಷೆಗೈವನಲ್ಲದಿರ್ದೊಡಾವಗಂ
ಅದಕೆ ಪ್ರತಿಯ ಗೈಯುವಂ ॥

೧೦

ಶತ್ರುಗಳಲಿ ವೃದ್ಧಿವಡೆವ ಪ್ರಭುಶಕ್ತಿಯನಲಸರು
ಬೆಳೆಯಗುಡಲು ಅರಸರು ।
ಜನರು ಬಯ್ವ ಭೀತಿಯಿಂದಲೆಂಬ ತೆರದೆ ಸಿರಿಗಳೆ
ಬಿಡುವುವರಸಾಗಳೆ ॥

೧೧

ಕ್ಷಯಿತ್ವನಿರಲಿ ಜನ್ಮಸಿದ್ಧ ತೇಜದೇಳ್ಗೆಯಿರುತಿರೆ
ವೃದ್ಧಿಯತ್ನ ಬೆಳೆದಿರೆ ।
ಆ ಅಪಾಯರಹಿತ ನೃಪಗೆ ಬಿದಿಗೆ ಚಂದ್ರನಂತೆಯೆ
ಜನರು ನಮಿಪರೊಡನೆಯೆ ॥

೧೨

ಕೋಶದಂಡಗಳಿಗೆ ಮೂಲವೆನಲು ಪಂಚರೀತಿಯ
ನಿರ್ಣಯಾತ್ಮ ನೀತಿಯ ।
ಅದುವೆ ತಾನಧೀನ ದಕ್ಷಗುಣಕೆ ಕಾರ್ಯರಚನೆಯ
ಲೋಕದಂತೆ ನಿಯತಿಯ ॥

೧೩

ಪ್ರಿಯದ ಉಚ್ಚಪದವನೇರ್ವೆನೆಂದು ಬಯಸುವಾತಗೆ
ಮಾನಧನಗೆ ಧೀರಗೆ ।
ಅಧಃಪತನ ತಪ್ಪಲಿರುವುದೊಂದೆ ಮಹಾಲಂಬನ
ಸ್ವಪೌರುಷದ ಬೋಧನ ॥

೧೪

ಹೇಡಿಯನ್ನು ತೀವುದೆಡರು ಎಡರು ತೀವಲಾಯತಿ
ಬಿಡುವುದವನ ಸಂಗತಿ ।
ನಿರಾಯತಿಗೆ ನಿಯತ ಕೀಳ್ಮೆ ಮೇಲ್ಮೆಯಿಲ್ಲದಾತನು
ಸಿರಿಗೆ ಪಾತ್ರನಾಗನು ॥

೧೫

ಅಭ್ಯುದಯಕೆ ವೈರಿಯಪ್ಪ ನಿರುತ್ಸಾಹ ನೀತಿಯ
ಬಿಡುಬಿಡಿನ್ನು ಪ್ರೀತಿಯ ।
ಪೌರುಷಕ್ಕೆ ಮಾತ್ರ ಸಾಧ್ಯವಪ್ಪುದಾ ಸಮೃದ್ಧಿಯು
ಮಾಂದ್ಯದೊಡನೆ ನಿಲ್ಲದು ॥

೧೬

ಪ್ರತೀಕ್ಷಿಸುತ್ತೆ ಕಾಲವನ್ನೆ ಇರ್ಪೊಡೀಗ ನೀನು
ಕಪಟದಿಂದಲಾತನು ।
ರಾಜ್ಯಲಕ್ಷ್ಮಿಯನ್ನು ಸುಚಿರ ಸವಿದದೆಂತು ಭೂಪನು
ಬೇಗ ತ್ಯಾಗ ಮಾಳ್ಪನು ॥

೧೭

ಸ್ವಂತ ಪದವ ಪಗೆಯೆ ಕುಡಲು ಮರಳಿ ನೀನು ಪಡೆವೊಡೆ
ಪೊಡವಿಪತಿಯೆ ಸುಲಭದೆ ।
ಪೌರುಷಪ್ರದರ್ಶನಕ್ಕೆ ಕೀರ್ತಿವೆತ್ತ ಅನುಜರ
ಭುಜಗಳೇಕನಂತರ ॥

೧೮

ತಾನೆ ಕೊಂದ ಮದದೆ ನಾಂದ ಮೊಗದ ಕರಿಯನೇ ಸರಿ
ಮೆಲ್ಲುವದಲ್ತೆ ಕೇಸರಿ ।
ತೇಜದಿಂದ ಜಗವನಿಳಿಪ ಮಹಾತ್ಮ ತಾನನ್ಯರ
ಸಿರಿಗೆ ಬಯಸ ನಿರ್ಧರ ॥

೧೯

ಅಚಿರರೂಪದಸುವ ಕೊಟ್ಟು ಚಿರಸುಕೀರ್ತಿಯೆಳಸುವ
ಮಾನಧನನ ವರಿಸುವ ।
ಮಿಂಚು ಗೊಂಚಲಂತೆ ಚಂಚಲಸ್ವರೂಪೆ ಲಕ್ಷ್ಮಿಯು
ಗೌಣಫಲವು ನನ್ನಿಯು ॥

೨೦

ತುಳಿಯುರುರಿವ ಬೆಂಕಿಯನ್ನು ಬೂದಿಯನ್ನು ತುಳಿವರು
ಬುವಿಯೊಳೆಲ್ಲ ಸಡೆವರು ।
ಮಾನವಂತರಂತೆ ಸುಖದೆ ಪ್ರಾಣವನ್ನು ಬಿಡುವರು
ಮಾನಹತಿಗೆ ಬೆದರ್ವರು ॥

೨೧

ಮೋಡ ಗುಡುಗೆ ಮೇಲೆ ನೆಗೆವ ಸಿಂಹಕಾವ ಫಲವಿದೆ
ಸ್ವಭಾವವೇ ಅಲ್ಲದೆ ।
ದೊಡ್ಡ ಜನರದೇ ಸ್ವಭಾವದಿಂದೆ ಪರರ ಮೇಲ್ಮೆಯ
ಸಹಿಸರೆಂದು ನಿಶ್ಚಯ ॥

೨೨

ಈ ಪ್ರಮಾದಜನ್ಯ ತಮವ ನೀಗು ದೊರೆಯೆ ! ವಿಕ್ರಮ-
ಪ್ರದರ್ಶನವೆ ಸುಕ್ರಮ ।
ವೈರಿಯೆಡರ ನಾಶಕೆಲ್ಲ ನಿನ್ನ ತಮ ನಿಮಿತ್ತವು
ನೀನಿದನರಿ ಸತ್ಯವು ॥

೨೩

ದಿಕ್ಪ್ರಧಾನ ಗಜಗಳೆನಿಸಿ ನಾಲ್ಗಡಲ್ಗಳುಕ್ಕುವ
ಮೇಲ್ವಾಯ್ವುವೆನಿಸುವ ।
ಬರ್ದಿಲಾಣ್ಮತೇಜವುಳ್ಳ ಅನುಜರನ್ನು ರಣದಲಿ
ಸಹಿಪನಾರು ಪಗೆಯಲಿ ॥

೨೪

ನಿನ್ನ ಮನದಿ ಸತತವುರಿವ ವೈರಿಜನಿತ ಕಿಚ್ಚನು
ಮುಳ್ಗಿಸಲ್ಕೆ ಪೆರ್ಚನು ।
ಶಕ್ತವಕ್ಕೆ ವೈರಿವಧೂನಯನವಾರಿ ಸಂತತಿ
ತೋರುತಶುಭದವಗತಿ ॥

೨೫

ಆ ವಿಕಾರ ತೋರುತಿರಲು ಕೋಪಭರಿತಚಿತ್ತನ
ವಾಯುದೇವ ಪುತ್ರನ ।
ದುಷ್ಟಗಜದ ತೆರದೊಳವನ ಶಾಂತಗೊಳಿಸಲೊಯ್ಯನೆ
ಹೊರಟನಾಗ ರಾಯನೆ ॥

೨೬

" ಕೊಳೆಯಿಲ್ಲದೆ ಪೊಳೆಯುತ್ತಿಹ ಹೃದಯರುಚಿರ ಮಂಗಳ-
ದರ್ಪಣದೊಳು ನಿರ್ಮಲ ।
ಮಾರ್ಪೊಳೆಯುವ ಬಿಂಬದಂತೆ ನಿನ್ನ ನುಡಿಯು ಗಡಣದೆ
ವಿಮಲಮತಿಯು ಕಂಡಿದೆ ॥

೨೭

ಸ್ಫುಟತೆಯಿರದ ನುಡಿಗಳಿಲ್ಲ ಬಂದಿತರ್ಥಗೌರವ
ಕೊಳ್ಳುತೆಲ್ಲ ಸಾರ್ಥವ ।
ಮಾತಿಗೆಲ್ಲ ಪೊಸತೆ ಅರ್ಥವಿಪ್ರುದೆಲ್ಲು ಕುಂದದು
ಸಮರ್ಥಕತ್ವವೆಂಬುದು ॥

೨೮

ಬಲಕೆ ಪುಷ್ಟಿಯೀಯೆ ಯುಕ್ತಿ ಆಗಮುಕ್ಕಪಾಯವು
ಬಂದುದಿಲ್ಲ ಹೇಯವು ।
ಆಶಯವಿಂತಿಲ್ಲದಿರಲು ಒಡನೆಯಿಂತು ಮಾತನು
ಆರು ನುಡಿಯುವಾತನು ॥

೨೯

ಆದೊಡಿನ್ನು ಮೆನ್ನ ಬಗೆಗೆ ಬಂದುದಿಲ್ಲ ನಿರ್ಣಯ
ಪೋದುದಿಲ್ಲ ಸಂಶಯ ।
ಕಾರ್ಯಸೂಕ್ಷ್ಮಭೇದವೆಲ್ಲ ಬಗೆಗೆ ವಿದಿತವಪ್ಪೊಡೆ
ಸುಲಭವಲ್ಲ ನೋಳ್ಪೊಡೆ ॥

೩೦

ಆತುರಕ್ಕೆ ಕಾರ್ಯವೆಸಗಲಾಗದು ಅವಿವೇಕವು
ಕಷ್ಟಮೂಲ ಪರಮವು ।
ಆ ವಿವೇಕಿಯನ್ನು ತಾವೆ ವರಿಪರಲ್ತೆ ಸಿರಿಗಳು
ಆಸೆಯಿಂದ ಗುಣದೊಳು ॥

೩೧

ತಾಂ ವಿವೇಕ ವಾರಿಯಿಂದಲೆರೆಯೆ ಕಾರ್ಯಬೀಜವ
ಕಾಯುತಿರ್ದು ಕಾಲವ ।
ಸುಫಲಶಾಲಿ ಜನಕೆ ತಾನೆ ಬರುವ ತೆರದಿ ಶರದದೆ
ಸಿದ್ಧಿ ಬಹುದು ತಪ್ಪದೆ ॥

೩೨

ವಿಮಲವಿದ್ಯೆ ದೇಹಕೊಡವೆ ಶಾಂತಿಯದಕೆ ಭೂಷಣ
ಕೋಪಶಮನ ಕಾರಣ ।
ಶಾಂತಿಗೊಡವೆ ಶೌರ್ಯವೆನಲು ನೀತಿಲಬ್ಧಸಿದ್ಧಿಯು
ಶೌರ್ಯಕಪ್ಪುದೊಡವೆಯು ॥

೩೩

ಭಿನ್ನಮತದ ತಮವು ಮುಸುಕಿ ಕಾರ್ಯ ಗಹನವೆನಿಸಲು
ಜಾಣಗದನು ಬಿಡಿಸಲು ।
ಸುಕೃತವಧಿಕಶುದ್ಧವಪ್ಪ ದೀಪದಂತೆ ಆಗನು
ತೋರ್ಪುದೆಲ್ಲ ಸರಿಸಮ ॥

೩೪

ಶ್ಲಾಘ್ಯ ಸುಗುಣಪೂರ್ಣ ಪೂಜ್ಯಜನರು ಪೋದ ದಾರಿಯ
ನಡೆಯುವಂಗೆ ನಿರ್ಭಯ ।
ವಿಧಿವಿಲಾಸ ಘಟಿತ ಪತನದೋಷ ದೋಷವೆನಿಸದು
ಸಮುನ್ನತಿಗೆ ಸಮವದು ॥

೩೫

ಅಂತದಲ್ಲಿ ಬಾಧೆಯಿರದ ವಿಪುಲಫಲವನೆಣಿಸುತ
ಮುಳಿಸಿನೇರನಿಳಿಸುತ ।
ವಿಜಯದಾಸೆಯುಳ್ಳ ನೃಪರು ಶೌರ್ಯವನ್ನು ಪಾಯದ
ಜತೆಯೊಳುಯ್ವರಾಯದ ॥

೩೬

ರೋಷರೂಪಿ ತಿಮಿರವನ್ನು ಬಗ್ಗುಬಡಿವ ಬುದ್ಧಿಯು
ಬೇಹುದು ಬರೆ ಸಿದ್ಧಿಯು ।
ತನ್ನ ಬೆಳಕಿನಿಂದ ಮುರಿವ ಮುನ್ನ ನಿಶಿಯ ತಮವನು
ಉದಿಪನಲ್ಲ ಸೂರ್ಯನು ॥

೩೭

ಶೂರನಿರಲಿ ಕೋಪಜನಿತವಪ್ಪ ತಿಮಿರದೇರನು
ತಡೆಯಲಾರದಾತನು ।
ಕ್ಷೀಣಪಕ್ಷ ಕಳೆಯ ನೀಗುವಂತೆ ಸುಧಾಸೂತಿಯ
ಕಳೆವನಖಿಲ ಶಕ್ತಿಯ ॥

೩೮

ಸಮಯಕುಚಿತವೆನಲು ಮೆಲ್ಪನಂತೆ ಬಲ್ಪನವಿರತ
ಸಮುಚಿತ್ತನು ತಳೆಯುತ ।
ತನ್ನ ತೇಜದಿಂದ ಸೂರ್ಯದೇವನಂತೆ ಜಗವನು
ಗೆಲ್ದು ಮೆರೆವನಧಿಪನು ॥

೩೯

ರುಚಿರ ಸಿರಿಯ ಪಡೆವುದೆಲ್ಲಿ ದುಷ್ಟಕರಣಚಯಗಳ
ವಶವದೆಲ್ಲಿ ಹಯಗಳ ।
ಚಪಲ ಕರಣದಿಂದಸಾಧ್ಯ ಕಾಯೆ ಕುಟಿಲ ಸಿರಿಯನು
ಶರನ್ಮೇಘಚಲೆಯನು ॥

೪೦

ತ್ವರೆಯೊಳೋಡೆ ಚಿತ್ತವದನೆ ಕಲಕುತಿಂತಕಾಲದೆ
ನೀನೆ ಮೇಲೆ ಮಾಳ್ಪುದೆ ।
ಧೈರ್ಯಗುಣದೊಳಿಲ್ಲಿವರೆಗೆ ನಿನಗೆ ಕಡಿಮೆಯೆನಿಸಿದ
ಕಡಲನಿಂತು ಸೆಣಸಿದ ॥

೪೧

ಶಾಸ್ತ್ರವೋದಿದಾತನೆನೆಯು ಜಯಿಸಲಾರದಿರ್ದೊಡೆ
ಒಡಲೊಳಿರ್ಪ ಪಗೆವಡೆ ।
ಮಾಳ್ಪನವನು ಬೇಗ ಸಿರಿಯು ನೆಲೆಯನೇ ನಿರಾಶ್ರಯ
ಅಪಯಶಸ್ಸಿನಾಶ್ರಯ ॥

೪೨

ಕಾಲಕರಣದೆಲ್ಲೆ ಮುರಿದು ಇಂದ್ರಿಯಾದಿ ವರ್ಗವ
ತಾಪಕೀಡುಮಾಡುವ ।
ಕ್ರೋಧವಿಂತು ಲೋಗರಂತೆ ತಗದು ನಿನ್ನ ನೆಳೆಯಲು
ನೀತಿಸಿದ್ಧಿಯಳಿಸಲು ॥

೪೩

ಉಪಕಾರಕ ಪರಿಣಾಮಕೆ ಬಹಳ ಕಾರ್ಯಫಲಗಳ
ತರಿಸುತಂತಸದಳ ।
ತಾನಪಾಯಶೂನ್ಯವೆನಲು ವೈರಿನಿಕರಬಾಧಕ
ಕ್ಷಮೆವೊಲಿಲ್ಲ ಸಾಧಕ ॥

೪೪

ನಮಿಸುತಿರ್ಪ ನಮ್ಮನುಳಿದು ಸಹಜ ಪ್ರೇಮದಿಂದ
ಬದ್ಧಚಿತ್ತರಾದ ।
ಮಾನಧನರೊಳಗ್ರಗಣ್ಯರೆನಿಪ ವೃಷ್ಣಿವೀರರು
ಪಗೆಗೆ ನಮಿಸಲಾರರು ॥

೪೫

ಅವರ ಮಿತ್ರ ಸಹಜರಂತೆ ಮಾತನೆಂದು ಮೀರದ
ದೊರೆಗಳವರ ಪಕ್ಷದ ।
ಸ್ವಾರ್ಥಸಿದ್ಧಿಗೆಂದೆ ಸುಯೋಧನನ ಪೊಳ್ತು ಕಳೆವರು
ವಿನಯವನ್ನು ಮೆರೆವರು ॥

೪೬

ತೀರಲವಧಿ ನೀನು ಪಗೆಯ ಮೇಲೆ ಮಾಡೆ ದಾಳಿಯ
ಒಡನೆಯೀ ನೃಪಾಳಿಯ ।
ಬಗೆಗಳೊಡೆವುವುದಿಸೆ ರವಿಯು ವಿಮಲ ಕಮಲವನದೊಳು
ಬಿರಿಯುವಂತೆ ಪೂಗಳು ।

೪೭

ರಾಜರಲ್ಲಿ ಭೇದ ಬಿತ್ತಿ ಮೀರಿ ನಡೆವ ಸಂತತ
ಮೆರೆವನಾ ಮದೋದ್ಧತ ।
ಅನಾದರವ ಸಹಿಸರೆನಲು ಲೋಗರಧಿಕತೇಜರು
ಸಹಿಪರೆಂತು ರಾಜರು ॥

೪೮

ಕಾರ್ಯಸಿರಿಯಪೂರ್ಣವಿರಲು ತನ್ನ ವಿನಯವಿನಿತನು
ಸಡಿಲಿಸಿರೆಯು ಮದವನು ।
ಸಿರಿಯು ಮಾನಶಾಲಿಗಳಿಗೆ ಮದವನುಕ್ಕಿಸುತ್ತೆ
ತೋರ್ಪುದಲ್ತೆ ಮತ್ತೆ ॥

೪೯

ಆ ಮದಾಂಧ ನೃಪತಿಯನ್ನು ಬಿಡದು ಸದಾ ಮೂಢತೆ
ಮೌಢ್ಯಕೊದಗೆ ಗಾಢತೆ ।
ಚ್ಯುತಿಯು ಬಹುದು ನೀತಿಪಥಕೆ ನೀತಿಹೀನನನ್ನು
ಜನರು ಬಿಡುವರೆನ್ನು ॥

೫೦

ಜನಾಪರಾಗವಾಯುವಿಂದುಡಿದು ಕೆಡೆಯೆ ಬೇರ್ಗಳ
ಗಡಣವೆ ಪರ್ಯಾಕುಲ ।
ದೊಡ್ಡ ಮರವ ಸುಖದೆ ಕೀಳುವಂತೆ ಪಗೆಯು ಶಾಂತನು
ಗೆಲ್ವನಿಳಾಕಾಂತನು ॥

೫೧

ವಿರಸಮಂತರಂಗಜಗದೊಳಲ್ಪವಕ್ಕೆ ಪುಟ್ಟಲು
ಆರ್ಪುದರಸ ಮುಟ್ಟಲು ।
ಮಸೆವ ಮರದ ಕೊಂಬೆಯೊಳಗೆ ಪುಟ್ಟಿದಗ್ನಿಕಣವದು
ಬೆಟ್ಟವನ್ನೆ ದಹಿಪುದು ॥

೫೨

ಉದಯುವನ್ನಪೇಕ್ಷೆಮಾಡಬೇಕು ದುರ್ವಿನೀತನ
ಜಾಣ ವೈರಿಯಾದನ ।
ಗೆಲುವುದವನ ಸುಲಭವಹುದು ದುರ್ವಿನೀತವಸುಚಯ
ಆಪದಂತ ನಿಶ್ಚಯ ॥

೫೩

ಒಳಗೆ ಹೊರಗೆ ರಾಷ್ಟ್ರವೊಡೆಯೆ ನೃಪನ ಸಣ್ಣತನದಲಿ
ಪಗೆಗಳೊಡನೆ ಭರದಲಿ ।
ಶಿಥಿಲವಾದ ದಡವನತುಲ ನದೀವೇಗದಂತೆ
ಕೊರೆದು ಕೊಂಬರಲ್ತೆ ॥

೫೪

ಇಂತಶಾಂತ ಭೀಮನನ್ನು ಕುರಿತು ಶಾಂತನೀತಿಯು
ಪೇಳುತಿರಲು ರೀತಿಯು ।
ಕಾಮಿತಾರ್ಥ ಕೈಗೆ ಬಂದ ತೆರದೊಳಾ ಪರಾಶರ-
ಸುತನು ಬಂದ ಮುನಿವರ ॥

೫೫

ಮಧುರ ನೋಟದಿಂದ ಮೂಕಜಂತುಗಳಿಗು ಶಾಂತಿಯ
ತರಿಸುತಳಿಸಿ ಭ್ರಾಂತಿಯ ।
ಸುಡೆಯು ಪಾಪವನ್ನು ದೇಹಕಾಂತಿ ತೀವೆ ತಂಪನು
ನೋಳ್ಪರಕ್ಷಿಗಿಂಪನು ॥

೫೬

ಭೊಂಕನ್ನೈದೆ ಮುನಿಯು ಸಕಲ ತಪಗಳಿಂಗೆ ನಿಲಯನು
ಕೇಡಿಗೆಲ್ಲ ವಿಲಯನು ।
ಮೂರ್ತಿಗೊಂಡ ಪುಣ್ಯದಂತೆ ಚಕಿತನಾಗಿ ನೃಪವರ
ಕಂಡನವನ ಸಾದರ.

೫೭

ಶ್ರೇಷ್ಠಸಿಂಹಪೀಠವುಳಿದು ರಕ್ತವಲ್ಕಲಾಗ್ರ
ಅಲುಗುತಿರಲು ಶೀಘ್ರ ।
ಮೆರೆದನರುಣಕಿರಣ ಸೂಸಿ ಮೇರುಶೃಂಗದಿಂಬ
ಬರ್ಪ ಸೂರ್ಯನಂದ ॥

೫೮

ಮುನಿಪೋತ್ತಮನಿಗೆ ಮುನಿಯೋಗ್ಯಮೆನಲ್ ಭಕ್ತಿಯಿನರ್ಪಿಸಿ ಪೂಜೆಯನು
ಪಾಲಿಸಿ ಪಿರಿಯರ ಪಾಲಿಯನು ।
ಮುನಿವರನಪ್ಪಣೆಯಾನುತ್ತಾ ನೃಪ ಸೊಬಗೇರಿಸಿದನು ಪೀಠಕ್ಕೆ
ಶಮವೇರಿಪವೋಲ್ ವಿದ್ಯಕ್ಕೆ ॥

೫೯

ಮೊಳೆಮೊಳೆವ ನಗೆಗದಿರು ತುಟಿಗಳನು ಬೆಳಗುತಿರೆ
ತೇಜವುಕ್ಕುವ ಮುನಿಯ ಮುಂಗಡೆಯೊಳವನು ।

ತಳತಳಿಸಿ ಪೊಳೆಯುತಿಹ ಗುರುವಿಗೆದುರಲಿ ಬಂದ
ಪೂರ್ಣಚಂದ್ರನ ಲಕ್ಷ್ಮಿಯಂ ತವೆ ತಳೆದನು ||

ಎರಡನೆಯ ಸರ್ಗ ಮುಗಿದುದು.

---

# ಕನ್ನಡ ಕಿರಾತಾರ್ಜುನೀಯ

## ಮೂರನೆಯ ಸರ್ಗ

೧

ಶಾರದ ಚಂದ್ರನ ಕಿರಣ ಮನೋಹರ
    ಕಾಂತಿಯಿನೆತ್ತರ ಕಾಣುತಿರೆ ।
ನೀಲಶರೀರನ ಕೆಂಜಡೆ ಹೊಳೆಯಲು
    ಮಿಂಚನು ತಳೆದಾ ಮೋಡದೊಲು ॥

೨

ಅತಿಶಯ ಸೌಮ್ಯಾಕಾರವು ಸೊಗಯಿಸೆ
    ಲೋಕೋತ್ತರ ವ್ಯೆಸಿರಿಯಿಂದೆ ।
ಹೊಸ ಜನಗಳಿಗೂ ಮನದೊಳಗೊಡನೆಯೆ
    ಪುಟ್ಟಿರೆ ಪ್ರೀತಿಯು ರಸವೊಂದೆ ॥

೩

ಶಾಂತಾಕೃತಿಯಿಂದಂತಃಕರಣದ
    ಶಾಂತಿಯೆ ಬಿಂಬಿಸಿ ಬಗೆಗೊಳಿಸೆ ।
ಸವಿನಲ್ಮೆಗಳಂ ಸೂಸುವ ಕಣ್ಗಳೆ
    ನುಡಿಸುವ ತೆರದಲಿ ಕಂಗೊಳಿಸೆ ॥

೪

ಪಾಪವನಟ್ಟುವ ಧರ್ಮವ ನಿಯಮಿಪ
    ಶ್ರುತಿಗಳ ಜನಕನು ಮುನಿವರನು ।
ಸುಖದಿಂ ಕುಳ್ಳಿರಲವನಾಗಮನದ
    ಹದನನು ಕೇಳ್ದನು ಧರ್ಮಜನು ॥

೫

ಪುಣ್ಯದ ಸಂಗ್ರಹವಿಲ್ಲದ ಜನರಿಗೆ
ದುರ್ಲಭ ನೀರಜ ಫಲಜನಕ ।
ತಮ್ಮಯ ದರ್ಶನಸಂಪದವಿದು ಸಮ
ವೋಡವೆಯಿಲ್ಲದ ಮಳೆಗಧಿಕ ॥

೬

ಫಲಗಳನಿತ್ತುವು ಯಾಗಗಳಿಂದು
ವಿಪ್ರರ ವರ ಫಲಿಸಿದುವಿಂದು ।
ಶಾಶ್ವತ ತ್ರಿಜಗದ್ವಂದ್ಯತೆಯೆನಗಂ
ಬಂದುದು ನಿಮ್ಮಡಿ ಬರಲಿಂದು ॥

೭

ಸಿರಿಗಳನೆಳೆವುದು ಮುರಿವುದು ದುರಿತವ
ಶುಭವೀವುದು ಜಸವೇರಿವುದು ।
ಗುರುವರ! ಬ್ರಹ್ಮನ ಪೋಲುವ ನಿಮ್ಮಯ
ಅಮೋಘದರ್ಶನವೇಂಗುಡದು ॥

೮

ಜೊನ್ನವ ಸುರಿಸುವ ಚಂದಿರನಿಂದಲು
ತಣಿಯದ ಕಣ್ಣನು ತಣಿಸಿಹುದು ।
ಬಂಧುವಿಯೋಗದ ಬೇಸರನೋಡಿಸಿ
ನಿಮ್ಮಡಿ ಹರಿಸವ ತರಿಸಿಹುದು ॥

೯

ಸಲ್ಲದು ಬರಲೇಕೆನ್ನುವ ಪ್ರಶ್ನೆಯೆ
ನಿಸ್ಪೃಹಗೇನನು ಕೊಡುವುದಿದೆ ।
ಆದರೆ ನಿಮ್ಮಯ ಮಂಗಳವಾಣಿಯ
ಕೇಳುವ ಬಯಕೆಯು ನುಡಿಸುತಿದೆ ॥

೧೦

ಈ ಪರಿ ನುಡಿದನು ನಲ್ನುಡಿಗಳನು
ಜಯಕಂದರಸನು ಮನದಂದು ।
ಬಗೆಯುನ್ನತಿಯನು ಮೆರೆಯುತ್ತವನಿಗೆ
ಮಾರ್ನುಡಿದನು ಮುನಿಯಿಂತೆಂದು ॥

೧೧

"ಇಹಪರವೆರಡರ ಕೀರ್ತಿಯ ಸಿರಿಯನೆ
ಪಡೆಯಲು ಬಯಸುವ ಮುನಿಗಳಿಗೆ ।
ನಂಟರೆ ವಿಷಯದೊಳೊಂದೇ ವರ್ತನೆ
ಯಿರುವುದು ಸಹಜವು ಮನದೊಳಗೆ ॥

೧೨

ಆದರೆ ನಿನ್ನಯ ಗುಣಗಳ ಮಾಲೆಗೆ
ಸೋಲ್ತೆನ್ನಯ ಬಗೆ ವಶ ನಿನಗೆ ।
ನಿಸ್ಪೃಹಮೋಕ್ಷಾಪೇಕ್ಷಿಗಳೂ ಅನು-
ವಿಸುವರು ಸುಜನರ ಪಕ್ಷವನು ॥

೧೩

ಮಕ್ಕಳೆಯಲ್ಲವೆ ನೀವಾ ನೃಪತಿಗೆ
ಗುಣದೊಳಗಧಿಕರು ಕೌರವಗೆ ।
ನಿಮ್ಮನು ತೊರೆಯಲು? ವಿಷಯದ ತೃಷ್ಣೆಯು
ಬಲದಿಂ ಮಾಳ್ಪುದು ಮೋಹವನು ॥

೧೪

ಕರ್ಣಾದಿಗಳನು ನಂಬಿರಲಾತನು
ಸಿದ್ಧಿಯು ತೊಲಗದೆ ಮಾಣುವುದೆ ?
ಕುಜನರ ಯೋಗವೆ ವಿಜಯ ವಿಬಾಧಕ
ಕೇಡಿನ ಗಡಣದ ಸುಸಾಧಕ ॥

೧೫

ರಿಪುಸಭೆ ಮಾರ್ಗವ ಬಿಟ್ಟರು ಧರ್ಮವ
ಬಿಡದೆಯೆ ಚಿರವೂ ನೀನಿರುವೆ ।
ದುರ್ಗತಿಯಲ್ಲಿಯು ದುರ್ಗತಿಗಿಳಿಯದ
ಗುಣರಾಗವನೇ ತೋರಿರುವೆ ॥

೧೬

ಮೋಸದೆ ನಿನ್ನನು ನೋಯಿಸಿ ಶಾಂತನ-
ನೆಸಗಿದರೈ ತಮ್ಮಹಿತವನು ।
ಪಗೆಗಳು ನಿನ್ನಯ ಮತಿಶೀಲಂಗಳ
ಪ್ರಕಟಿಸಿ ಗೈದರು ಹಿತವನ್ನು ॥

೧೭

ನಿನ್ನಯ ವಿಕ್ರಮುಲಭ್ಯವು ಧರಣಿಯು
ಅಸ್ತ್ರಗಳಧಿಕವು ಪಗೆಗಳಿಗೆ ।
ಅವರಿಂದಗ್ಗಳನಾಗಲು ಯತ್ನಿಸು
ರಣದಲಿ ಜಯಸಿರಿಯಗ್ಗಳಗೆ ॥

೧೮

ಇಪ್ಪತ್ತೊಂದೆಡೆ ಜಗದರಸುಗಳನು
ಕುಟ್ಟಿದ ಗುರು ಜಮದಗ್ನಿಸುತ ।
ಶಿಷ್ಯನ ಬೀರಕೆ ಸೋಲಲ್ಕರಿತನು
ಗುಣಗಳ ಪೆರ್ಚಾಧಾರಗತ ॥

೧೯

ಆವನೊಳಾನುವ ಯೋಗ್ಯತೆಯಿಲ್ಲದೆ
ಜವನೂ ಸೋತವನಂತಿಹನು ।
ಬವರದೆ ಬಿಲ್ಗೊಳಲವನೇ ಭೀಷ್ಮನು
ಭರದಿಂದಾವನನಂಜಿಸನು ॥

೨೦

ಧುರದೊಳಗಂಬಿನ ರಾಶಿಯನೆರಚುವ
ಕೋಪೋಜ್ಜ್ವಲನನು ದ್ರೋಣನನು ।
ತಡೆಯುವನಾವನೊ ಪೇರುರಿನಾಲಗೆ
ಬೆಳಗಿತ್ತಿನೆ ವಿಲಯಾಗ್ನಿಯನು ॥

೨೧

ಭಾರ್ಗವಶಿಷ್ಯನ ಕರ್ಣನ ಕಡುಪಿಂ
ದೆಲ್ಲರ ಧೈರ್ಯವು ಸಗ್ಗುವುದು ।
ನೋಡಲ್ಕೊಡನೆಯೆ ಮೃತ್ಯುವಿಗೂ ಸಹ
ಮುನ್ನರಿಯದ ಭಯವುಕ್ಕುವುದು ॥

೨೨

ದುಷ್ಕರತಪದಿಂದಾರ್ಜಿಸಿ ದಿವ್ಯಾ-
ಸ್ತ್ರಂಗಳ ದುರ್ಲಭ ವೀರ್ಯವನು ।
ಕಪಿಕೇತನನೀ ವೀರರ ಗೆಲ್ಲಲು
ಬರ್ಪುದದೆಂತಾ ವಿದ್ಯೆಯನು ॥

೨೩

ಬಲ್ಮೆಯ ಪಡೆಯಲು ಮಾದೇವತೆಗಳ-
ನೊಲಿಸುವ ಮೈಮೆಯ ಮಂತ್ರವನು ।
ಸಿದ್ಧಿಯನೆಂತಂತೀಯಲು ನಿನಗಿದೊ
ದಾನಕೆ ಪಾತ್ರನೆ! ಬಂದಿಹೆನು ॥

೨೪

ಇಂತೆನೆ ‘ ನಡೆ ಕೊಳ್ ’ ಎಂದಾ ಧರ್ಮಜ-
ನಾಣತಿಯನು ಕೊಂಡರ್ಜುನನು ।
ಪ್ರಸನ್ನ ಮುನಿಗಳ ಬಳಿಗೈತಂದನು
ಪೋಲುತೆ ವಿನಯದ ಶಿಷ್ಯನನು ॥

೨೫

ಪ್ರಭಾತಸೂರ್ಯನ ಬಿಂಬದಿನೆನಿಸಲು
ಮುನಿಗಳ ಮೊಗದಿಂ ಪೊರಮಟ್ಟು ।
ಕಿಡಿಯೆನಲುಜ್ಜ್ವಲ ಕಾಂತಿಯು ಪಾರ್ಥನ
ಮೊಗವನು ಸೇರಿತು ಪದುಮದೊಲು ॥

೨೬

ಯೋಗವನಿತ್ತನು ಯೋಗ್ಯನಿಗಾಗಳೆ
ತನ್ನಯ ತಪದಾಧಿಕ್ಯದೊಳು ।
ಹೊಳೆಯಲು ತತ್ತ್ವಗಳೆನಿಸಿತು ಪಾರ್ಥಗೆ
ಕಣ್ಣನು ತಟ್ಟನೆ ತೆರೆದವೊಲು ॥

೨೭

ಆಕೃತಿಯುರುಹಲು ಮನದುತ್ಸಾಹವ-
ನಂತೆಯೆ ಮುಂದಿನ ಲಾಭವನು ।
ವಿಜಯವನೀಯುವ ತಪದ ಸಮಾಧಿಯೊ-
ಳನುವಿಸೆ ಮುನಿಯವಗರುಹಿದನು ॥

೨೮

ಬೀರವ ಬೆಳೆಯಿಸಿ ಯೋಗದ ಬಲದೊಳು
ಪರರಿಂಗೀಯದೆ ಮಾರ್ಗವನು ।
ಶಸ್ತ್ರವ ಪಿಡಿ ಗೈ ಮುನಿಗಳ ಜಪತಪ
ನಿರಶನ ಮಜ್ಜನ ವ್ರತಗಳನು ॥

೨೯

ಇಂದ್ರನನೊಲಿಸುವ ದುಷ್ಕರ ತಪಗಳ
ಗೈಯಲು ಸುಂದರ ಪರ್ವತಕೆ ।
ನಿನ್ನನ್ನುಯ್ವನು ನೋಡೀ ಯಕ್ಷನು
ಒಂದೇ ಚಣದೊಳಗಾಗಸದೆ ॥

೩೦

ಈ ಪರಿ ನುಡಿಯುತೆ ಪಾರ್ಥನಿಗಾ ಮುನಿ
ಕಣ್ಮರೆಯಾದನು ಬೇಗದೊಳು ।
ಆ ಎಡೆಗೈದಿದನಾಗಳೆ ಯಕ್ಷನು
ಮುನಿಯಾಣತಿ ವ್ಯೆವೆತ್ತವೊಲು ॥

೩೧

ನಮಿಸುತೆ ನಲ್ನುಡಿಯಾಡುವ ಪಾರ್ಥನಿ-
ನಾಟುದು ಯಕ್ಷಗೆ ಹರ್ಷಭರ ।
ಕೆಳೆಯನ ಪರಿಯಲಿ ನೇಹವ ತಳೆದನು
ಸುಜನರ ಸಂಗಮು ಪ್ರೀತಿಪರ ॥

೩೨

ಉದಯಕೆ ರವಿ ಬಿಡೆ, ಪೊಳೆಯುವ ಮೇರುವ
ಕುಂಜವನೆಂತಂತನುಜರನು ।
ಎಂತೋ ಮೆಲ್ಲನೆ ತಮು ಬಳಿಸಾರ್ದುದು
ದುಃಖದೆ ತಾಣವ ತಾಂ ಪಡೆದು ॥

೩೩

ನಿಶ್ಚಿತಕಾರ್ಯವಿವೇಚನೆಯುಟ್ಟಲು
ಪ್ರೇಮವು ಹಂಚಲು ಸಮವಾಗಿ ।
ದುಃಖದ ಭಾರವು ಪಿರಿದಪ್ಪೊಡಮದು
ಲಘುವೆಂದೆನಿಸಿತು ನಿಜವಾಗಿ ॥

೩೪

ಇರುತಿರೆ ಧೈರ್ಯವು ನಂಬಿಕೆ ಋಷಿಯೊಳು
ಕಡುಕೋಪವು ಪಗೆವಿಷಯದೊಳು ।
ತಿಳಿದಿರೆ ಪಾರ್ಥಪರಾಕ್ರಮವವರೊಳು
ಶೋಕಕೆ ತಾಣವು ಸಿಗದಾಯ್ತು ॥

೩೫

ತೊಳತೊಳ ತೊಳಗುವ ನಾಲ್ವರನವರನು
ಹಗಲಿನ ನಾಲ್ಕು ಜಾವದೊಲು ।
ತೊರೆಯುತೆ ದುಕ್ಕದ ವೊತ್ತವು ಮುಸುಕಿತು
ಕೃಷ್ಣೆಯ ನಿಶಿಯನು ಕತ್ತಲೊಲು ॥

೩೬

ನೋಟವೆ ಪೇಳೆಯು ಮನದಿಂಗಿತವನು
ಹಿಮಹತ ಕನ್ನೈದಿಲೆಯುವೊಲು ।
ಕಣ್ಣೀರೊಸರುವ ಕಣ್ಗಳನಾಕೆಯು
ಮುಚ್ಚಳಮಂಗಳಭೀತಿಯೊಳು ॥

೩೭

ಸಹಜಪ್ರೇಮದ ರಸದಿಂ ತುಂಬಿದ
ಸತಿಯಳ ಚೆಲ್ವಿನ ನೋಟವನು ।
ಮನದುಲ್ಲಾಸದ ಬೊಗಸೆಯಿನಾಂತನು
ಪಾರ್ಥನು ಪಯಣದ ಬುತ್ತಿಯೊಲು ॥

೩೮

ಬೇಸಗೆತೊರೆಯನು ಕಾಡಾನೆಯುವೋಲ್
ಕದಡಲು ಚಿತ್ತವನುದ್ವೇಗ ।
ಕಂಬನಿ ನುಂಗುತೆ ಗದ್ಗದ ಕಂಠದಿ–
ನಿಂತೆಂದಳು ದ್ರೌಪದಿಯಾಗ ॥

೩೯

ಪಗೆಗಳ ಕಪಟದ ಪಂಕದೊಳದ್ದಿಹ
ಗೌರವಸಿರಿಗಳನೆತ್ತುತಲಿ ।
ಚಿಂತೆಯ ಸಹಿಸದ ತಪ ತೀರ್ವನ್ನಂ
ಕೊರಗದಿರೆಮ್ಮನು ನೆನೆಯುತಲಿ ॥

೪೦

ಕೀರ್ತಿಯ ಸುಖಲಾಭವನತಿಮಾನುಷ–
ಪದವಿಯನೆಳಸುತೆ, ಕಾತರವ ।
ಬಿಸುಡುತೆ ಸಾಧಿಪರನು ಬಳಿಸಾರ್ವಳು
ಸಿದ್ಧಿಯೆ ತೋರುತೆ ಆತುರವ ॥

೪೧

ಕದಿಯುತೆ ಭೂರಕ್ಷೆಗೆ ವಿಧಿ ವಿಧಿಸಿದ
ಕ್ಷಾತ್ರಸುತೇಜದ ಧನಗಳನು ।
ಹರಿಯುತೆ ಜಯವೃತ್ತಿಯ ಪೌರುಷದಾ
ಪ್ರಾಣದವೋಲಭಿಮಾನವನು ॥

೪೨

ನಂಟರಿನೊದಗಿರೆ ಕಷ್ಟದೊಳಿಂತೋ
ನೃಪರನು ನಂಬಿಸಿ ನಾಚಿಸುತೆ ।
ಪ್ರೌಢವಿಗೆ ಚಪ್ಪರವೆನೆ ದೆಸೆದೆಸೆಯಲಿ
ಪರ್ವಿದ ಜಸವನು ಮುಚ್ಚಿಸುತೆ ॥

೪೩

ಮುನ್ನಿನ ಗೆಯ್ಮೆಯ ಬೀರವನಳಿಸುತೆ
ಖ್ಯಾತಿಯನೇ ಮೇಣಿಲ್ಲೆನಿಸಿ ।
ಸಂಜೆಯವೊಲ್ ರವಿಕಿರಣೋನ್ನತಿಯನು
ಮುಂದಿನ ಫಲತತಿಯನ್ನೊರೆಸಿ ॥

೪೪

ಬಂದೀ ಪಗೆಯುಪಕಾರವು ನೆನೆವೊಡೆ
ದುಸ್ಸಹವಿನ್ನೇಂ ನರಳುವೊಡೆ ।
ಎನ್ನೆದೆಯೊಳು ಪೊಸತಪ್ಪುದು ಒಣಗಿದ
ಪಳೆಗಾಯವೆನಲ್ ನೀನಗಲೆ ॥

೪೫

ಮಾನವೆ ಮುರಿದಿರೆ ವಿಕೃತಿಯ ತಳೆದಿಹೆ
ಪಲ್ಗಳ ಮುರಿದಿರುವಾನೆಯೊಲು ।
ಕಾಂತಿಯು ಮಸುಳಿರೆ ಪಗೆಯ ಪ್ರತಾಪದೆ
ಮೋಡವು ಮುಚ್ಚಿದ ಬೆಳಗಿನೊಲು ॥

೪೬

ಅಸ್ತ್ರಗಳೆಲ್ಲವು ತೆಪ್ಪನೆಯಿರುತಿರೆ
ನಾಚಿಕೆಯಿಂದಲೊ ಎನುವಂತೆ ।
ನಿಷ್ಪ್ರಭನೆನಿಸುವೆ ಬೇರೊರ್ವನೆನಲ್
ನಿರ್ಜಲವಾಗಿಹ ಕಡಲಂತೆ ॥

೪೭

ಖಳ ದುಶ್ಶಾಸನನೆಳೆಯಲು ಕೆದರಿದ,
ಕಾವವರಿಲ್ಲದೆ ವಿಧಿ ಕಾಯ್ದ ।
ಕೇಶವೆ ಜರೆದಾ ಕಲಿತನದಾರ್ಪಿನ
ಅಂದಿನ ಪಾರ್ಥನೆ ನೀನಿಂದು ?

೪೮

ಕ್ಷತ್ರಿಯನೆನುವೊಡೆ ಬೇಹುದು ತ್ರಾಣವು
ಕರ್ಮವು ಮೇಣ್ ಕಾರ್ಮುಕವೆನಲ
ಬರಿದೆಯೆ ನುಡಿಗಳ ಪೊತ್ತರೆ ಗೈವನು
ಅಪಶಬ್ದದ ಮಾದೋಷವನು ॥

೪೯

ಸುಖ ನಿನ್ನಿಂದಲೆ ಬಹುದೆಂದಾಶಿಸಿ
ಕಾಂತಿಯು ಕುಂದೆಯು ಸಾಯದಿಹ ।
ಎಮ್ಮಂತೆಯೆ ನಿನ್ನಯ ಗುಣಗಣವೂ
ದುಃಖದೊಳಿರ್ಪುದು ತಾನಹಹ ॥

೫೦

ಸಿಂಹದ ಕೂದಲನೆಳೆವಾನೆಗಳೆನೆ
ಮುದದಿಂ ಪಗೆ ಕೆಣಕಿರಲಿಂತು ।
ಕಾರ್ಯದ ಭಾರವು ನಿನಗೊದಗಿರ್ಪುದು
ದಿನಸಿರಿ ಸೂರ್ಯನಿಗೆಂತಂತು ॥

೫೧

ಆವನು ಲೋಕೋತ್ತರ ಯೋಗ್ಯತೆಯನು
ಸಾರ್ಥಕಗೊಳಿಪನೊ ಕ್ರಿಯೆಯಿಂದೆ ।
ಪುರುಷರನೆಣಿಸುವ ಸಭೆಯೊಳಗಾತಗೆ
ಸಿಕ್ಕುವ ಲೆಕ್ಕವು ಮೊದಲಿನದೆ ॥

೫೨

ಪ್ರಿಯರನು ಸುಮ್ಮನೆ ನೆನೆನೆನೆಯಿಸುತುಂ
ಬಗೆಯೊಳು ಬೇಗೆಯನೊಡರಿಸುವ ।
ಬೆತೆಗಳನಿಂದ್ರನೆ ನಾಶಂಗೈಯಲಿ
ನಿನಗಂ ವಿಜಯಕೆ ತೆರಳಿರುವ ॥

೫೩

ವಿಜನದ ಶುಭದೆಡೆಯೊಳೆ ನೀನಿರುತುಂ
ಒಬ್ಬಂಟಿಗ ಮೈಮರೆಯದಿರು ।
ರಾಗದ್ವೇಷಗಳಡಸಿರೆ ಮನಗಳು
ಸಜ್ಜನರಲ್ಲಿಯು ಕೆಡದಿರವು ॥

೫೪

ಭರದಿಂ ಮುನಿವಚನವ ನೀನೆಸಗುತೆ
ಸಫಲಂಗೊಳಿಸೆಮ್ಮಾಸೆಯನು ।
ಕಾರ್ಯವ ಸಾಧಿಸಿ ಮರಳಿದ ನಿನ್ನನು
ಅಪ್ಪುತೆ ನಾಂ ಮೊಲೆಯೊತ್ತುವೆನು ॥

೫೫

ಪರಿಭವತಾಪವು ಪೊಸಯಿಸ ನುಡಿಯಿದ–
ನೊರೆಯಲು ಕೃಷ್ಣೆಯು ಲಾಲಿಸುತೆ ।
ಅರ್ಜುನನುರಿದನು ಭರದಿಂ ಸೂರ್ಯನು
ಪೂರ್ವದ ದಿಕ್ಕಿನೊಳಿಂತಂತೆ ॥

೫೬

ಮುಂಗೆಯೆ ಪಗೆಗಳ ಕಾಂಬವನಂದದೆ
ಗುರುವಿತ್ತಾಯುಧಗಣದೊಡನೆ ।
ನಿಂದಾ ಸುಂದರನಾದನು ಭೀಷಣ
ಮಾರಣ ಮಂತ್ರ ಸಮಾನನೆನೆ ॥

೫೭

ಎಳೆದೊಡೆ ತಪ್ಪದೆ ಪಗೆಗಳನಳಿಸುವ
ನೆಗಳ್ದಾರಾವದ ಗಾಂಡಿವವ ।
ಪಗೆ ಕಾಣದ ಬತ್ತಳಿಕೆಯನೆರಡನು
ತುಂಬಿಸಿ ಕೂರಸಿಮೋಹರವ ॥

೫೮

ಇಂದ್ರನ ವಜ್ರದ ಹೊಡೆತದ ಗುರುತನು
ಜಸದಿಂದೆನೆ ದೀಪ್ತಿಯಿನಳಿಸಿ ।
ಮಿರುಗುವ ರತ್ನದ ಕವಚವ ತಳೆದನು
ನಭದೊಳು ಬೆಳಗುವ ತಾರೆಯೆನೆ ॥

೫೯

ಯಕ್ಷನು ತೋರಿದ ಬೆಟ್ಟದ ದಾರಿಯೊ–
ಳಾತನು ಸುಖದಲಿ ಸಾಗುತಿರೆ ।
ತಪಗೈಯುವ ಮುನಿಹೃದಯಂಗಳನವ–
ನೆಳೆದನು ಕಣ್ಣೊಳು ನೀರೊಸರೆ ॥

೬೦

ದೇವ ದುಂದುಭಿಯಿಂದ ದಿಕ್ಕುಗಳಾಗ ಮೊಳಗಿದುವೆತ್ತಲು
ಸುರರು ಸುರಿಸಿದ ಪೂವ ಮಳೆಯಿಂ ಲಕ್ಷ್ಮಿಯೊಪ್ಪಲು ನಭದೊಳು
ಪ್ರಿಯವನುಸುರುವ ತೆರದೆ ಚೆನ್ನೆಯನಿಳೆಯನಪ್ಪಿದನಂಬುಧಿ
ತನ್ನ ಚಂಚಲ ವೀಚಿಮಾಲೆಗಳೆಂಬ ತೋಳ್ಗಳ ಬಂಧದಿ ||

ಮೂರನೆಯ ಸರ್ಗ ಮುಗಿದುದು

---

# ಕನ್ನಡ ಕಿರಾತಾರ್ಜುನೀಯ

## ನಾಲ್ಕನೆಯ ಸರ್ಗ

೧

ಹಂಸೆಯಿಂಚರವೆನಿಸೆ ಮೇಖಲೆ ಬಲಿತು ಮಾಗಿದ ಬೆಳೆಗಳು
ಬಿಳುಪು ಬಣ್ಣವ ಬೀರಲು ।
ಯೌವನಾನ್ವಿತೆ ಕಾಂತೆಯಂದದೆ ಮಹಿಯ ಸೇರಿದನಾತನು
ಜನಸಮೀಪದೆ ಪಾರ್ಥನು ॥

೨

ಬಾಗಿ ಬತ್ತದ ತೆನೆಗಳೆಸೆಯಲು ಕೆಸರು ತೊಲಗಿರೆ ನೀರೊಳು
ಅರಳೆ ಕೆಂದಾವರೆಗಳು ।
ಊರ ಕೆಲದೊಳು ಶರದ ಸಿರಿಗಳ ಕಾಣ್ಕೆಯೆನಿಸುವ ಕಡೆಗಳ
ಕಂಡು ನಲಿದನು ಎಡೆಗಳ ॥

೩

ಕಡುಕುತೂಹಲದಿಂದೆ ತಾವರೆಕಣ್ಣನರಳಿಸಿ ಕೊಳಗಳೆ
ನೋಡುವಂತಿರಲಾಗಳೆ ।
ಸುಳಿವ ಮೀನ್ಗಳ ಚೆಲುವೆ ಸೋಲಿಸೆ ಕಾಂತೆಯಕ್ಷಿಯ ಸೊಗಸನು
ಮನವನಾತನು ಸೋತನು ॥

೪

ಕಮಲವರಳಿದ ನೀರೊಳಾತನು ಕಳವೆಚೆಲುವನು ಕಾಣುತೆ
ಹಿರಿದು ಸಂತಸವಾಂತನು ।
ಬಹಳ ದುರ್ಲಭವಪ್ಪ ಸಂಗಮವೊಪ್ಪೆ ಯೋಗ್ಯರೆನಿಪ್ಪರೊಳ್
ಆರು ನಂದಿಸದಾತನು ॥

೫

ನೆಲದ ಕಮಲವೆಯೆಂಬ ಸಂಶಯ ಮೂಡೆ ಹರಿಸಿತು ಜಲವದು
ಉಕ್ಕೆ ನೊರೆಗಳ ಸಾಲ್ಗಳು ।
ಮುರಿಯುತೊಯ್ಯನೆ ಪದುಮದೆಸಳನು ಭರದೆ ಜಲಚರ ಹೊರಳಲು
ನೀರನಪ್ಪಳಿಸುತ್ತಲು ॥

೬

ಮೆಲ್ಲಮೆಲ್ಲನೆ ವೇಗವಿಳಿಯಲು ಇಳಿದ ನೀರಿನ ಗುರುತನ್ನು
ಪಡೆದ ತೊರೆಗಳ ಪುಳಿಲನು ।
ಬಿಳಿಯ ರೇಷ್ಮೆಯ ಸೀರೆ ಮಡಿಕೆಗಳಿಂದೆ ಕಂಗೊಳಿಸಿತ್ತೆನೆ
ನೋಡಿ ರಮಿಸಿದನೊಯ್ಯನೆ ॥

೭

ಹುಬ್ಬ ನಡುವಿನೊಳಿಟ್ಟ ಬಂದುಗೆಯೆಸೆಯೆ ಸೂಸುತ ಚೆಲುವನು
ಅಂತೆ ಕೇಸರ ರಜವನು ।
ಅರಗಿನಂತೆಯೆ ಕೆಂಪನಾಂತಿಹ ತನ್ನ ಚೆಂದುಟಿಗಳಿರವನು
ಪೋಲ್ವುದೆನ್ನಿಸಿ ಪೂವನು ॥

೮

ತನ್ನ ಪೀವರ ಕುಚಗಳೆಡೆಯಲಿ ತಿರುಗಿ ತಳಿಯುವ ಕಂಪಿನ
ಎಳೆಯ ಬಿಸಿಲಿನ ಕೆಂಪಿನ ।
ಕಮಲರಜವನು ತನ್ನ ಮೈಯಿಂದುಗುವ ಬೆಮರ್ವನಿ ನೆನೆಯಿಸೆ
ಅದರ ಚೆಲುವನೆ ಬಳೆಯಿಸೆ ॥

೯

ಕೆನ್ನೆಯಪ್ಪುವ ಕನ್ನವುರದಾ ಚಿನ್ನನೈದಿಲೆಚೆಲುವನು
ಕಣ್ಣ ಕಾಂತಿಯು ಪೆರ್ಚಿಸೆ ।
ತೆನೆಯ ಕಾಯುವ ಕನ್ನೆ ಕಾಣಲು ಪಾಂಡುಸುತನಿಗೆ ಶರದವು
ಆಯಿತೆನಿಸಿತು ಸಫಲವು ॥

೧೦

ಆಗಳಿರುಳಿನ ಕಡೆಯ ಜಾವದೆ ಮೇಪ ನಿಲ್ಲಿಸಿ ಮಾಳದೆ
ಮರಳಲೊಡರಿಸಿ ಬೇಗದೆ ।
ನಡೆಯಲಾರದೆ ದೊಡ್ಡ ಮೊಲೆಗಳಿನಿಳಿವ ಹಾಲಿನ ಗೋಗಣ
ಮನವನೆಳೆದುವು ಆತನ ॥

೧೧

ಗೂಳಿಗಾಳಗದೊಳಗೆ ಜಯಸಿರಿಯಾಂತು ಮಾದನಿಗೈಯುವ
ತೊರೆಯ ದಡವನು ಮುರಿಯುವ ।
ತಳಿಮ ಶಾರದ ಸಿರಿಯ ಮೆರೆಯುವ ಗೂಳಿಯನು ತಾ ನೋಡಿದ
ಮೂರ್ತಿಯೋ ಎನೆ ದರ್ಪದ ॥

೧೨

ಒಯ್ಯನೊಯ್ಯನೆ ಹಿಮದ ಬಿಳುಪಿನ ಗೋಕದಂಬಕ ಬಿಚ್ಚಲು
ಕಳಚಿ ಸೀರೆಯು ಬಿದ್ದೊಲು ।
ಶರದ ನದಿಗಳ ಮಳಲು ಸೊಗಯಿಸೆ ಜಘನವೆನ್ನುವ ಪರಿಯಲಿ
ಆಸೆಯುಕ್ಕಿತು ಬಗೆಯಲಿ ॥

೧೩

ದನಗಳೊಡಹುಟ್ಟಿದರೊ ಎನಿಸುವ ನಂಟನುಕ್ಕಿಸೆ ಗೊಲ್ಲರು
ವನವೆ ಮನೆಯೆನಿಪಾತರು ।
ಸಾಧುತನದಲಿ ಗೋವುಗಳನೇ ಪೋಲುತಿಹರೆನಲವರನು
ದನಗಳೆಡೆಯಲಿ ಕಂಡನು ॥

೧೪

ಸುಳಿವ ಕುರುಳ್ಗಳೆ ಅಳಿಗಳೆನಿಸಲು ಸೂಸೆ ನಸುನಗೆ ಪೊಳೆಯುವ
ಪಲ್ಲು ಕೇಸರವೆನಿಸಲು ।
ಮಿಳಿರ್ವ ಕುಂಡಲರಶ್ಮಿ ರಾಗವ ಬೀರಲೆಳೆವಿಸಿಲಪ್ಪುವ
ಪದುಮವೆನಿಸಲು ಮೊಗಗಳು ॥

೧೫

ತುಟಿಯು ಕಂಪಿಸೆ ಕಟ್ಟಿದುಸಿರಲಿ ಬಳ್ಳಿಯೊಂದೇ ತಳಿರದು
ನಡುಗುತಿಹುದೆಂದೆನಿಸಲು ।
ಕಡೆವ ಕೈಗಳ ಲಲನೆ ಸೊಗಯಿಸೆ ಪಕ್ಕವೆರಡೂ ಬಳುಕಲು
ನಡುಗಲೊಯ್ಯನೆ ನಡುಗಳು ॥

೧೬

ಕಡೆವ ಕೋಲನು ಭರದೆ ಕಡೆಯಲು ಗಡಿಗೆ ಮದ್ದಲೆಯಂದದೆ
ಮಾಡೆ ಮೆಲ್ಲನೆ ದನಿಯನು ।
ಗೊಲ್ಲಬೀಡಿನೊಳದನು ನಾರಿಯರೆಣಿಸೆ ಮೋಡದ ಮೊಳಗನು,
ಕುಣಿಸೆ ನವಿಲ್ಗಳ ಗುಂಪನು ॥

೧೭

ಪೀನ ಕುಚಗಳು ಚಲಿಸಲೊಯ್ಯನೆ ಶ್ರಮಕೆ ಬಾಡಿರಲಾಗಳೆ
ಅವರ ಕಣ್ಣಿನ ನೈದಿಲೆ ।
ನಾಟ್ಯವಾಡುವ ವಾರನಾರಿಯರೆನಿಪ ಗೊಲ್ಲಿತಿ ಜನರನು
ನೋಡಿ ಪಾರ್ಥನು ದಣಿಯನು ॥

೧೮

ಅಳಿಯೆ ದಾರಿಗೆ ಬಳಸು ಮುನ್ನಿನ, ಕೆಲದ ಪೈರಿನ ಹುಲುಸನು
ಮೇದು ಮುಗಿಸಿರೆ ಬಸವನು ।
ಗಟ್ಟಿಕೆಸರನು ಗಾಲಿ ಬೈತಲೆತಿದ್ದೆ ಜನಗಳ ಪಯಣದೆ
ದಾರಿ ಪೊಸಯಿಸೆ ನಡೆದನು ॥

೧೯

ಸೌಮ್ಯಕರ್ಮದ ಭಾವಭೂಷಣವೆರಡರೊಳಗೂ ಋಜುಗಳ
ಹಳ್ಳಿವಾಡದ ಜನಗಳ ।
ಇರ್ಕೆಯೆನಿಸುವ ಬಳ್ಳಿಕಾವಣ ಪೂಗಳಿಂದಾಶ್ರಮವನು
ಪೋಲೆ ತಣಿಯದೆ ಕಂಡನು ॥

೨೦

ಶರದ ಸೊಬಗನು ನೋಡುವಾಸೆಯನವನ ಕಣ್ಣಲಿ ಕಾಣುತೆ
ಯಕ್ಷನೊರೆದನು ತೋರುತೆ ।
ಶರದ ಸಿರಿಯನೆ ಕೇಳದಿರ್ದೊಡಮಿಂಗಿತಜ್ಞರು ಸಮಯದೆ
ಸುಮ್ಮನಾಗರು ನುಡಿಯದೆ ॥

೨೧

ಶುಭದ ನಿಯತಿಯ ಸಿದ್ಧಿಯೆನಿಸುತೆ ಜಗದ ಗೆಯ್ಮೆಯ ಸಫಲಿಸಿ
ನೀರನೆಲ್ಲೆಡೆ ತಿಳಿಯಿಸಿ ।
ಮೋಡ ನಿರ್ಜಲವೆನಿಸಿ ಸೊಗಯಿಪ ಶರದ ವಿಜಯದ ಸಿರಿಯನೆ
ನಿನಗೆ ಬೆಳೆಸಲಿ ವಿಜಯನೆ ॥

೨೨

ಸೊಬಗು ಬಂದುದು ಕಳಿತ ಪೈರಿಗೆ ನದಿಗೆ ಪೂರದ ಇಳಿಕೆಯು
ನೆಲಕೆ ಕೆಸರಿನ ಕೊರತೆಯು ।
ಇಂತು ಪೊಸಗುಣದಿಂದೆ ಪರಿಚಯಗಾಢ ರಾಗವು ಕಾರೊಳು
ಬೀತುದೊಡನೆಯೆ ಜನರೊಳು ॥

೨೩

ನಭದೆ ಬೆಳ್ಳಕ್ಕಿಗಳು ಹಾರವು ಮಳೆಯ ಬಿಲ್ಲನು ಧರಿಸಿದ
ಸಾಲ್ಗಳಂತೆಯೆ ಮೋಡದ ।
ಆದೊಡತಿಶಯ ಚೆಲುವನಾಂತಿದೆ ಬಾನು ಸಹಜದೆ ರಮ್ಯಕೆ
ಬೇರೆ ಸಿಂಗರವೇತಕೆ ॥

೨೪

ಆ ಕದಂಬಾನಿಲಗಳೊಡೆಯನು ಪೋಗೆ ಬಾಡಿ ಪಯೋಧರ
ಬೆಳ್ಪನಾಂತವು ಸುಂದರ ।
ಮಿಂಚ ಬಳ್ಳಿಯ ಹೇಮಕಾಂಚಿಯು ಜಗುಳೆ ದಿಗ್ವಧುಗಣಕಿದು
ಕೃಶತೆಯೇ ಚೆಲುವಾದುದು ॥

೨೫

ನವಿಲು ನಿರ್ಮದವೆನಲು ಕಂಠದೊಳಿಂಪು ದನಿಗಳೊಳಳಿದಿರೆ
ಕೇಳಲೊಲ್ಲದೆ ಕಿವಿಯಿರೆ ।
ಮತ್ತಹಂಸಗಳುಲಿಯ ಬಯಸುತೆ, ಗುಣವೆ ಪ್ರಿಯತೆಗೆ ಸಾಧನ;
ಅಲ್ಲ ಪರಿಚಯ ಬಂಧನ ॥

೨೬

ದೊಡ್ಡ ತೆನೆಗಳ ಬತ್ತ ಬಲಿಯುತೆ ಹೊನ್ನ ಕಾಂತಿಯ ತಳೆದಿವೆ
ಮತ್ತೆ ತಾವೇ ಬಾಗಿವೆ ।
ಗದ್ದೆನೀರೊಳಗರಳಿ ಕಂಪನು ಬೀರ್ವ ಕನ್ನೈದಿಲೆಯನೆ
ನಾಡೆ ವಾಸಿಸಲೆಂದೆನೆ ॥—

೨೭

ಪಸುರ ಪದ್ಮಿನಿಯೀಯೆ ಪದ್ಮದ ದಲವು ಕೆಂಪನು ತೀವಲು,
ಅಂತೆ ಭತ್ತದ ತೆನೆಗಳು ।
ಹೊನ್ನ ಬಣ್ಣವ ಕುಡಲು ಓಡುವ ವೃತ್ರವೈರಿಯ ಬಿಲ್ಲೆನೆ
ಸೊಬಗ ಬೀರುವ ನೀರನೆ ॥—

೨೮

ಬಿಳಿಯ ಕಂಚುಕವೆನಲು ಗಾಳಿಯು ಹೂವ ಧೂಳಿಯನೆತ್ತಲು
ಬೇಗ ಪರಿಹರಿಸುತ್ತಲು ।
ಬಿಟ್ಟ ಕಣ್ಗಳೆನಲ್ಕೆ ನೀರ್ವೂಗಳನು ಪುಷ್ಪಸುಹಾಸೆಯ
ಈ ಮಹಾವನವನಿತೆಯ ॥—

೨೯

ಅಂತೆ ಮಿಂಚಿನ ಬೆಂಕಿ ಬೆಳಗದ, ಬಿಳಿಯ ಮೋಡದ ಗಡಣವು
ಬಿಸಿಲನಿಳಿಸಿರೆ ಸತತವು ।
ನೀರ ಕಣಗಳ ತಳೆದ ತಾವರೆಗಾಳಿ ತೀವಿದ ಬಾನನು
ಬಹಳ ಮಂಗಳಕರವನು ॥—

೩೦

ಕುರಿತು ಪರಿಯುವ ಬಿಳಿಯ ಬಣ್ಣದ ಹಂಸೆಗಳ ಕಲನಿನದವು
ತೀವೆ ದೆಸೆಗಳನೆಲ್ಲವು ।
ಮೋಡದೆರೆಯನು ಹರಿದು ವಿಮಲತೆಯಾಂತ ದೆಸೆಗಳೆ ತಮ್ಮೊಳು
ಮಾತನಾಡುವವೆನಿಪುದು ॥

೩೧

ಮಾಳದಿಂದಲಿ ಹಟ್ಟಿಗಾತುರದಿಂದೆ ಮರಳುವ ಹಸುಗಳು
ಹಿಂಡನಗಲುತೆ ಭರದೊಳು ।
ಠಾಲು ಸೋರುವ ಕೆಚ್ಚಲಿಂದಿದೊ ತಮ್ಮ ಕರುಗಳಿಗೀವುವು
ಮೆಚ್ಚನೆಂದೆನಿಸಿರ್ಪುವು ॥

೩೨

ಶೋಕಮೂಲವು ಲೋಕಪಾವನವೆನಿಪ ಗೋಗಣ ಹಟ್ಟಿಯ
ಕರುಗಳನ್ನೊಡಗೂಡಲು ।
ಮಂತ್ರದೆಡೆಯನು ಕೂಡಿದಾಹುತಿಯಂತೆ ಕಾಂತಿಯ ತಳೆವುದು
ಎಲ್ಲ ಪರಿಯೊಳು ನೋಡಲು ॥

೩೩

ಗೊಲ್ಲವೆಣ್ಗಳ ಮಧುರಗಾನವು ನವಿಲಿನುಲಿಯನು ಸೋಲಿಸೆ
ಧ್ಯಾನದಿಂದದನಾಲಿಸೆ ।
ಹಸಿವು ಹಿರಿದಾಗಿರೆಯು ಮರೆಯುತೆ ಹರಿಣಗಣವಿದು ಮೆಲ್ಲದು
ಬೆಳೆದು ನಿಂದಿಹ ಹುಲ್ಲನು ॥

೩೪

ತಲೆಯ ಬಾಗಿಸಿ ನಮಿಸುತಿರ್ದೊಡಮೊಲ್ಲದೆಯೆ ಧಿಕ್ಕರಿಪಳು
ನಳಿನಿ ಕಳವೆಯನೆನಿಸಲು ।
ನೀರಿನೊಡನೆಯೆ ಒಣಗಿ ಕಳವೆಯು ಬೆಳ್ಪನಾಂತುದು ಬೇಗನೆ
ಕಾಮತಾಪದೊಳೆಂದೆನೆ ॥

೩೫

ಪದ್ಮರಜವನು ಪೊತ್ತು ಶೈತ್ಯವನಾಂತು ತೀಡುವ ಗಾಳಿಯು
ಸೆಳೆಯೆ ದುಂಬಿಗಳೋಳಿಯು ।
ಗತಿಯ ನಿಶ್ಚಯಿಸಲ್ಕೆ ನೆರೆಯದು ಕಷ್ಟ ದುಷ್ಟರಿಗೊದಗಿರೆ
ಎಂತು ನೆರೆಯರೊ ಅಂತೆಯೆ ॥

೩೬

ಬಿರಿದ ಹವಳದ ಕೆಂಪು ಹೊಳೆಯುವ ಕೊಕ್ಕಿನಿಂದಲಿ ಕಳವೆಯ
ಹೊನ್ನ ತೆನೆಗಳ ತಳೆದಿಹ ।
ಮೃದುಲ ಸಿರಿಸದ ಸುಮುದವೋಲಿರೆ ಬಳಗ ತಳೆವುದು ಗಿಳಿಗಳ,
ಇಂದ್ರಚಾಪದ ಸಿರಿಗಳ ॥

೩೭

ಇಂತು ಯಕ್ಷನು ನುಡಿಯೆ ಕಂಡುದು ಅನತಿದೂರದೊಳಲ್ಲಿಯೆ
ದೊಡ್ಡ ಪರ್ವತರಾಜಿಯೆ ।
ಮುಚ್ಚಿ ಸೂರ್ಯನ ಬಿಂಬವನ್ನದು ನೀರ ಭಾರವ ಸುರಿಸಿದ
ಬೆಳ್ಮುಗಿಲ್ಗಳ ಚಯವೆನೆ ॥

೩೮

ಆ ಮಹಾವನರಾಜಿ ಕಪ್ಪನು ತೀವಿ ತಪ್ಪಲಿನೆಡೆಯೊಳು
ಮೇಲೆ ಹಿಮಗಳ ವಿಮಲ ಧವಲತೆ ಮುಸುಕೆ ಪಾರ್ಥನು ನಗವನು ।
ನೋಡಿ, ಮಧ್ಯದ ರಾಗವಿಳಿಯಲು ನೀಲವಸ್ತ್ರವ ಧರಿಸಿದ
ಸೀರಪಾಣಿಯೆನಿಪ್ಪ ರಾಮನ ಲಕ್ಷ್ಮಿಯನ್ನುರೆ ನೆನೆದನು ॥

ನಾಲ್ಕನೆಯ ಸರ್ಗ ಮುಗಿದುದು

# ಕನ್ನಡ ಕಿರಾತಾರ್ಜುನೀಯ

---

## ಐದನೆಯ ಸರ್ಗ

೧

ಪೊನ್ನಿನ ಬೆಟ್ಟವ ಗೆಲ್ಲುವೆನೆಂದೋ
ರಭಸದೆ ದಿಕ್ಕಡೆಗಾಣುವೆನೆಂದೋ ।
ಬಾನನೆ ಮೀರಿಪೆನೆಂದೋ ನೆಗೆದಿರೆ
ಬಂದನು ಸೂನ್ನತ ತುಹಿನಾಚಲಕೆ ॥

೨

ಒಂದೆಡೆ ಸೂರ್ಯನ ಬಿಸಿಲದು ಹೊಳೆವುದು
ಮತ್ತೊಂದೆಡೆ ಕಾರ್ಗತ್ತಲೆಯಿಹುದು ।
ಮುಂಗಡೆ ತಮವನು ನಗೆಯುಪಹರಿಸಲು
ಗಜಚರ್ಮವು ಹಿಂದಿಹ ಶಿವನೆನಲು ॥

೩

ಬುವಿಬಾನ್ ಸಗ್ಗದ ಜನಕದು ನೆಲೆಯೆನೆ
ನೋಡಲ್ ನೆರೆಯರು ತಂತಮ್ಮೊಳಗೆ ।
ತನ್ನಯ ಮೂಜಗದೊಡೆತನ ಸಾರಲು
ಶಂಭುವೆ ಬೆಸಸಿದ ಪ್ರತಿನಿಧಿಯೆನಲು ॥

೪

ಶೇಷನವೋಲ್ ಸಿತವೆನೆ ಬಾನಡರುತೆ
ಕನಕದ ಕಾಂತಿಯ ಬೆಟ್ಟದ ಸಾನು ।
ಉನ್ನತ ಶಿಖರದೆ ಮಿಂಚುಗಳೆಸೆಯುವ
ಶರದಭ್ರವನೇ ನಗುವುದು ತಾನು ॥

೫

ರನ್ನದ ಕಿರಣಾಂಶುಕವದು ಪೊಳೆಯಲು
ಅಮರೀಭೋಗದ ಲತೆವನೆಯಿರಲು ।
ಬಂಡೆಗಳೊಳಗೇ ಗೋಪುರವೆನಿಸಲು
ಪೂಬನವೆಸೆವುದು ನೆಲ ಪುರವೆನಲು ॥

೬

ಮಳೆಯನು ಸುರಿಸುತೆ ಬೆಳ್ಪನು ತಳೆಯುತೆ
ಸೆಳೆಮಿಂಚಿನ ಬೆಳಕನು ಕಳೆಯುತ್ತೆ ।
ಗರ್ಜನೆಯಡಗಿದ ತಪ್ಪಲ ಮುಗಿಲಿಂ
ಬೆಟ್ಟಕೆ ರೆಕ್ಕೆಯೆ ಮೂಡಿದುವೆನಿಸೆ ॥

೭

ಸಮಸೋಪಾನವು ಅಸಮಾನವೆನಲ್
ಮಾಗಜ ಕರಪುಟ ಪಾಟಿತ ತಲದ ।
ಬಗೆಗೊಳೆ ವರಜಲ ವನಜವನಾಶ್ರಯ
ಭರದಿಂ ಪರಿಯುವ ತೊರೆಗಳ ತಳೆದ ॥

೮

ಅರಳಿದ ದಾಸಾಳದ ಪೂವಿನವೊಲು
ಬೆಳಗಲು ಮಿರುಗುವ ಕೆಂಪಿನ ಕಲ್ಲು ।
ಚಿನ್ನದ ಗೋಡೆಯವೋಲ್ ತಪ್ಪಲೊಳು
ಸಂಧ್ಯಾರಾಗವು ಒಪ್ಪುವುದೆನಲು ॥

೯

ಈಚಲ ತುರುಗಲು ಚೆಲುವೇರಿಸಲು
ಹೊಂಗೆಯ ಜಂಗುಳಿ ಕಿಕ್ಕಿರಿದಿರಲು ।
ತುಂತುರ ತೋರವು ಹಿಮನಿಕರಂಗಳು
ಮೊಗದಿಂ ಮದವುಗಿವುವು ಆನೆಗಳು ।

೧೦

ರತ್ನಗಳಿಲ್ಲದ ಶಿಖರಂಗಳನು
ಲತೆವನೆಯಿಲ್ಲದ ಕಂದರಗಳನು ।
ಪೂಮಣಲಿಲ್ಲದ ತೊರೆವೆಣ್ಣುಗಳನು
ತಳಿಯನು ಪೂವಿಲ್ಲದ ತರುಗಳನು ॥

೧೧

ಸುರಸುಂದರಿಯರ ರಶನಾಲಂಕೃತ
ಘನಜಘನಂಗಳು ತೊರೆಗಳನಪ್ಪೆ ।
ಬಳ್ಳಿಯ ಬಳಗವನಳಿಪುವ ಸರ್ಪದ
ಸಂಕುಲವೆಲ್ಲೆಲ್ಲಿಯು ಬಿಡದೊಪ್ಪೆ ॥

೧೨

ಮಣಿಗಳ ಬೆಳಗದು ಮಳೆಬಿಲ್ಲೆನಿಸಲು
ನಿರ್ಜಲ ಬಿಳುಪೆನೆ ಹಿಮುಗಳ ಬಿಳುಪು ।
ತನ್ನಯ ಶಿಖರದೆ ತಳೆವನು ಚಲಿಸದ
ಮೋಡದ ಚಯವನು ಸೂಚಿಸೆ ಗುಡುಗು ॥

೧೩

ಆ ಗಿರಿ ತಾವರೆ ಸರಸಿಯೊಳೊಪ್ಪಲು
ಕಲಹಂಸಗಣಂ ಶುಚಿಮಾನಸನುಂ ।
ಮೆರೆವನು ಶಿವನೆನೆ ಮುನಿದುಮೆ ಗೈಯಲು
ಕಲಹಂ ಸಗಣಂ ಶುಚಿಮಾನಸನುಂ ॥

೧೪

ಗ್ರಹಗಳನಮರವಿಮಾನಂಗಳುಮಂ
ಬಾನೊಳಗುರಿಸಿರೆ ಓಷಧಿಯಗ್ನಿ ।
ಒಂದೊಂದಿರುಳುಂ ತ್ರಿಪುರರ ಅಳಿವನು
ನೆನೆಯಿಸುವನು ಶಿವಗಣಗಳಿಗವನು ॥

೧೫

ಮೇಲಕೆ ಶೀಕರ ರಾಶಿಗಳೊಗೆಯೆ
ಬಂಡೆಗೆ ಬಡಿಯುತೆ ಜಲ ಹಿಂದೊಗೆಯೆ ।
ಉನ್ನತ ಸಾನುಸಮುದ್ಧತೆ ಗಂಗೆ
ಕಾಂಬಳು ಚಾಮರವಿಕ್ಕುವ ತೆರದೆ ॥

೧೬

ಬೆಟ್ಟವ ನೋಡುತೆ ಕೌತುಕವುಕ್ಕುವ
ಪಾರ್ಥನ ಮನವನು ಯಕ್ಷನು ತಿಳಿದು ।
ಪ್ರಿಯವಚನವನಿಂತೊರೆದನು ವಿನಯದೆ
ನುಡಿಯಲು ಸಮಯದೆ ನುಡಿ ಸೊಗಸುವುದು ॥

೧೭

ನೋಡಿದೊಡನೆ ಜನರ ಪಾಪಚಯವ ನುಚ್ಚುನೂರಿನೆ
ನಗವು ಮಾಡಲಾರ್ಪುದು ।
ತುಹಿನಧವಲ ಶಿಖರದಿಂದೆ ಮೇಘಪಥವೆ ನೆಟ್ಟನೆ
ಸಾವಿರಾಗಿ ತೋರ್ಪುದು ॥

೧೮

ಇದರ ಅಂತರವಧಿಕ ದುರ್ಗಮವೆನಿಸಲಾಗಮ*ವರ್ಗದೆ
ಸತತ ಬಣ್ಣಿಪರಿನಿತನೆ ।
ಪರಮಗಹನನೆನಿಪ್ಪ ಈತನು ಸಮನು ಪರಮಾತ್ಮನಿಗೆನೆ
ಅರಿವನೊರ್ವನೆ ಬೊಮ್ಮನೆ ॥

೧೯

ಸುರುಚಿರ ಪಲ್ಲವ ಪುಷ್ಪಲತಾಗೃಹವೆಲ್ಲೆಡೆ ಬಗೆಗೊಳಿಸೆ
ಅರಳಿದ ತಾವರೆ ಸರಸಿಗಳೊಳಗಡೆ ಸುತ್ತಲು ಕಂಗೊಳಿಸೆ ।
ನಲ್ಲರ ಪಾರ್ಶ್ವದೆ ನಿರ್ಭಯದಿಂದಿಹ ನಾರಿಯರಿಗೆ ಸಹಿತ
ಮನದುಮ್ಮಳವನು ಪೆರ್ಚಿಸುತಿಹುದೀ ಪರ್ವತವನವರತ ॥

* ವುರ ವುತ್ತು ಶಾಸ್ತ್ರ

೨೦

ನೀತಿನಿಯತಿಯುಳ್ಳವರಿಗೆ ಸುಲಭವೆನಿಸುವ
ಆ ಕುಬೇರರಾಜನನ್ನೆ ಆಸೆಗೊಳಿಸುವ ।
ವಿಪುಲಧನವ ಪಡೆಯೆ ನಗವು ಬುವಿಯೆ ಮೆರೆವುದು
ಮಿಕ್ಕ ಲೋಕಗಳನು ಸಿರಿಯಿನಿಳಿಕೆಗೈವುದು ॥

೨೧

ಈ ನಿಖಿಲ ತ್ರಿಭುವನವೆ ಗೌರಿಗಂ ಪಿತನಪ್ಪ
ಈತನಿಗೆ ಪಾಸಟಿಯು ಎಂದೆನಿಸದು ।
ಏಕೆಂದೊಡಿಲ್ಲಿಯೇ ಸಂತತವು ವಾಸಿಪನು
ಅಜ್ಞಾತವಿಭವನೆನೆ ಗಿರಿಜೇಶನವನು ॥

೨೨

ಹುಟ್ಟುಮುಪ್ಪುಗಳೆಂಬ ದಂದುಗವಿರದ ಪರಮಬ್ರಹ್ಮಪದವನು
ಪಡೆಯಲಾಟಿಪ ಜನಕೆ ಬೆಟ್ಟದೊಳು ।
ಬರ್ಪುವೊಡನೆಯೆ ಭಯವಿನಾಶಕವಪ್ಪ ನಿರ್ಮಲಮತಿಗಳಿನ್ನಲು
ತಮವನಳಿಸುವ ಶಾಸ್ತ್ರಕದು ಸಮವು ॥

೨೩

ತಳೆಯುತೆ ಚರಣಾಲಕ್ತಕಚಿಹ್ನೆಯ–
ನಂತೆಯೆ ನಿಪತಿತಪುಷ್ಪೋತ್ಕರವ ।
ಮರ್ದಿತವೆನೆ ಪೂಸೆಜ್ಜೆಗಳೊರೆವುವು
ಸುರವೆಣ್ಗಳ ಸುರತೋತ್ಸವ ಭರವ ॥

೨೪

ಈ ಜಗದ್ವಂದ್ಯನೊಳು ಗುಣದೇಳ್ಗೆಯಿಂ ನೆಲೆಸಿ
ಓಷಧಿಗಳುನ್ನತಿಯ ಪಡೆದಿರುವುವು ।
ನಯಶಾಲಿ ರಾಜನೊಳು ಸಂಪದಗಳೆಂತಂತೆ
ಬಿಡದೆ ಬೆಳಕನು ಬೀರಿ ಕಣ್ಗೆಸೆವುವು ॥

೨೫

ಉಲಿಯಲು ನೀರಿನ ಹಕ್ಕಿಗಳೊಯ್ಯನೆ ತರುಗಳು ಬಾಗಿರೆ ಸುಮದಿಂದೆ
ಜಲವೆಲ್ಲವು ಕಮಲಾನ್ವಿತವಾಗಿರೆ ತೊರೆಗಳ ವನತರುವಾವರಿಸೆ ।
ನಳನಳಿಸುವ ನಳವೃಕ್ಷಗಳೆಸೆಯಲು ಬೆಂಕಿಯ ಬೇಗೆಯನಾರಿಸುತೆ
ಗಜಗಳ ಚಿತ್ತಕೆ ಹರಿಸವ ತರುವವು ಇಲ್ಲಿಯ ತೊರೆಗಳು ಧಾವಿಸುತೆ ॥

೨೬

ಸುರಗಜ ಕೆನ್ನೆಯನುಜ್ಜಿದ ತಾಣದೆ
ಮದಜಲವೆನಿಸಲು ಮಾವಿನ ಕಂಪು ।
ಅಳಿಗಳ ಬಳಗವು ನೆರೆಯಲಕಾಲದೆ
ಏರಿತು ಕೋಗಿಲೆಗಳ ಸರದಿಂಪು ॥

೨೭

ಬಹುಸುರವನಿತಂ ನಿತಂಬರುಚಿರಂ
ಸುಚಿರಂ ಸುನಿನದ ನದಸಹಿತಂ ।
ಹಿತನಹಿಪತಿಗೆನೆ ಧಿಕ್ಕೃತವಸುಧೆಯ
ಸುಧೆಯನು ತಳೆವನು ನಗಮಹಿತಂ ॥

೨೮

ಬಳ್ಳಿಗಳೆ ಭವನಗಳು ಓಷಧಿಯೆ ದೀಪಗಳು
ಚಂದನದ ತಳಿರುಗಳೆ ಪೊಸ ಸೆಜ್ಜೆಯೆನಲು ।
ರತಿಯ ಬಳಲಿಕೆಯನ್ನು ಕಳೆಯೆ ತಾವರೆಯೆಲರು
ಸಗ್ಗವನೆ ಮರೆವರೈ ಇಲ್ಲಿಯಮರಿಯರು ॥

೨೯

ನೀರೊಳುಮೆ ಚಿರಕಾಲ ಶಿವಗಾಗಿ ತಪಗೈಯೆ
ಜಲಚರರದ ಸಂಚಾರದಿಂ ಕಣ್ಣು ಚಲಿಸೆ ।
ಅವಳ ಕೈಯನು ಶಿವನು ಪಿಡಿದನ್ನೆ ಬೆರಳುಗಳು
ಸುರಿವ ಬೆಮರಿನ ಧಾರೆಯಿಂ ನೆನೆದುದೆನಿಸೆ ॥

೩೦

ಆವುದರ ಬಲದಿಂದೆ ಸುರರಸುರರಮೃತಕೆನೆ
ನೀರೊಣಗೆ ತಳ ಕಾಣೆ ಕಡೆದರೋ ಕಡಲ।
ಆ ಗಿರಿಯೆ ಮಂದರವು ತಳೆದುರಗಚಿಹ್ನೆಗಳ
ಬಾನ ಚುಚ್ಚುವ ತೆರದೆ ಕಾಂಬುದಿದೊ ಧವಲ॥

೩೧

ರವಿಯ ಕಿರಣ ಜಾಲದಿಂದೆ ಬೆಳೆಯಲೆತ್ತರಂಗಳು
ನೀಲರತ್ನಮಾಲೆಯಿಂದೆ ಮೊಳೆಯಲತಿಶಯಂಗಳು।
ಹಂಸಧವಲ ಸ್ಫಟಿಕ ರಜತಭಿತ್ತಿಕಾಂತಿನಿಕರವು
ಮಧ್ಯದಿನದೆ ಜೊನ್ನವೆಂಬ ಶಂಕೆಯನ್ನು ತರುವವು॥

೩೨

ನೃತ್ಯದ ಲೀಲೆಯ ತೋರುವ ತೆರದೊಳು
ಮಂದಾನಿಲನೊಳು ಕಂಪಿಸುವ।
ಪಂಕಜವೆಸೆವುವು ಜಲಗಳು ತುಳುಕಲು
ಗಣಿಕೆಯು ಹುಬ್ಬನು ಕುಣಿಸುವೊಲು॥

೩೩

ಇಲ್ಲೆ ಪಿಡಿದನು ಶಿವನು ಲೀಲೆಯೊಳುಮೆಯ ನಡುಗುವ ಕರವನು
ದುಗಡದಿಂದದು ರಮ್ಯವೆನಿಸುವ ಲೋಲ ಲೋಚನವೆಸೆಯಲು।
ಲಗ್ನಮಂಗಳವೆನಿಪ ಓಷಧಿಯವಳ ಕರದಲಿ ಶೋಭಿಸೆ
ಜೋಲ್ವ ಪಾವಿನ ಮಾಲೆ ತನ್ನಯ ಕರದೆ ಸೂತ್ರವದೆನ್ನಿಸೆ॥

೩೪

ಸ್ಫಟಿಕಮಣಿಯ ಕಿರಣಜಾಲವೆಣಿಕೆಯಿರದೆ ಪಸರಿಸಿ
ಮುಗಿಲ ಪಥಕೆ ನೆಗೆವುದು॥
ಸಪ್ತಕಿರಣವೆನಿಪ ರವಿಯ ಕರದ ಲೆಕ್ಕ ಸಾವಿರ–
ವನ್ನು ಮೀರಲೆನಿಪುದು॥

೩೫

ಆ ಕುಬೇರನೆಲ್ಲಿ ಶಿವನು ಮೆಚ್ಚಲೆಂದು ಪುರವನೆ
ನಿರ್ಮಿಸಿಹನೊ ಕಟ್ಟಿಸುತ್ತ ಪಿರಿಯ ಸುಗೋಪುರವನೆ ।
ಪಕ್ಕದಲ್ಲಿ ಸುತ್ತುತಿರುವ ಸೂರ್ಯನಸ್ತನಾದವೋಲ್
ತೋರಿಸಿರ್ಪ ಶಿಖರವಿದುವೆ ನೋಡು ಕೈಲಾಸವು ॥

೩೬

ಆ ಗಿರಿಕಟಕದ ಸಾನುಗಳಲ್ಲಿ
ರತ್ನಟ ದೀಪ್ತಿಯು ಗಡಣಿಸಲು ।
ಕಟ್ಟದ ಗೋಡೆಗಳೆನ್ನುವ ಭ್ರಮೆಯನು
ಹರಿದುವು ಬೀಸುವ ಗಾಳಿಗಳು ॥

೩೭

ಹಚ್ಚ ಹುಲ್ಲಿನ ಹಸುರು ಶೋಭೆಯು ಕುಂದದೆಂದೂ ಗಿರಿಯೊಳು
ನಿತ್ಯ ನಲಿನೀವನಗಳೆಸೆವುವು ತಳೆದು ಹಸುರಿನ ಚೆಲುವನು ।
ಇಲ್ಲಿ ಬಗೆಬಗೆಯಪ್ಪ ಪುಷ್ಪದ ಜಾಲವೆಲ್ಲೆಡೆ ತೀವಿದ
ತರುಗಳಿವುಗಳ ತಳಿರ್ಗಳೆಂದೂ ಕಳಿತು ಕಾಣವು ಅಳಿವನು ॥

೩೮

ಇಲ್ಲಿ ಗಿರಿಪರಿಸರದೆ ಗಿಳಿಮರಿತೆರದ ಬಣ್ಣದ ಪಚ್ಚೆಯ
ಕಿರಣನಿಕರವು ಕಲೆತು ರವಿಕರಜಾಲದೊಳು ಮೂರ್ಪೊಳೆವುವು ।
ಹಸಿರು ಹುಲ್ಲಿನ ಶಂಕೆಯನ್ನವು ಹರಿಣಗಣಗಳಿಗೊಡರಿಸೆ
ತಿನ್ನಲಾಶಿಸಿ ನೆಕ್ಕುತವುಗಳು ಕಡೆಗೆ ಯತ್ನವ ಬಿಡುವುವು ॥

೩೯

ಅರಳಿದ ನೆಲದಾವರೆವನದಿಂದಿದೊ
ಎದ್ದಿಹ ಪದುಮದ ಪೂದೂಳಿ ।
ಗಿರ್ರನೆ ತಿರುಗುತೆ ಗಾಳಿಗೆ ಗಗನದೆ
ಪೊಂಗೊಡೆ ಚೆಲುವನು ತಳೆಯುತಿದೆ ॥

೪೦

ಇಲ್ಲಿ ಗಂಗೆಯ ತಡಿಯೊಳೆಸೆಯುವ ವಿಷಮ ಹೆಜ್ಜೆಯ ಸಾಲೊಳು
ಬಳಿದ ಅಲತಿಗೆಯಿಂದ ಬೆಳಗಿನೊಳೊಪ್ಪಲೆಡಗಾಲ್ ರೇಖೆಯು ।
ತಾವು ಸಂಧ್ಯಾವಿಧಿಯ ಗೈವೆಡೆ ನಿಯಮದಿಂ ಬಲವಂದಿರಲ್
ಪಾರ್ವತೀಪರಮೇಶರಲ್ಲಿಯು ಕೂಡಿಯಿರ್ದುದನೊರೆವುದು ॥

೪೧

ರಜತಭಿತ್ತಿಯ ಕಿರಣಜಾಲದೆ ಪೆರ್ಚಿ ಪೊಳೆಯುತಲೆತ್ತಲು
ಲೋಲತರುಗಳ ಬಳ್ಳಿಜಾಳಿಗೆಯೊಳಗೆ ಮಾರ್ಪೊಳೆಯುತ್ತಲು ।
ಮತ್ತೆಮತ್ತೆಯು ಚಂಡಕಿರಣನ ಕಾಂತಿಪಟಲಗಳೆಸೆವುವು
ರನ್ನಗನ್ನಡಿಯಲ್ಲಿ ಪೊಳೆಯುವ ಬಿಂಬಗಳು ತಾವೆನಿಪುವು ॥

೪೨

ದೇಹವನ್ನು ಧವಲಕಿರಣಚಯವು ಮುಸುಕಲು
ಬೆಟ್ಟವನ್ನು ಮುಟ್ಟುತಿರಲು ತನ್ನ ಬಟ್ಟತನುವದು ।
ಶಿವನ ಬಸವನಿದರ ಶಿಖರವನ್ನು ಸೇರಲು
ಪೆಣ್ಗಳಿಂಗೆ ಚಂದ್ರನೆಂಬ ಶಂಕೆಯನ್ನು ತರುವುದು ॥

೪೩

ಮುಗಿಲ್ಗಳೀಗ ನೀರ್ಗಳಿರದೆ ಬೇರೆನಲ್ಕೆ ಸೊರಗಿರೆ
ಮೆಲ್ಲನೆಂತೊ ಸಣ್ಣನಾಗಿ ಮಳೆಯ ಬಿಲ್ಲು ಮೂಡಿದೆ ।
ಬಣ್ಣದೊಳಗೆ ಕೊರತೆಯಳಿಯುವಂತೆ ಶಿಖರ ಮಣಿಗಳ
ಬಣ್ಣಬಣ್ಣವೆನಿಪ ಕಾಂತಿಪಟಲವೀಗ ಮಾಡಿದೆ ॥

೪೪

ಪೊಸಬಳ್ಳಿ ಮರಗಳಾ ಕುಡಿಗಳನು ಚಿಮುಕಿಸುತ
ಕರಗಳಿಂದಮೃತವನು ಸತತ ಸೋರಿಸುತ ।
ಕಾರಿರುಳೊಳಂ ಬಿಡದೆ ಬೆಳಗುವುದು ಬನಗಳನು
ಶಂಭುವಿನ ಮುಡಿಯೊಳಿಹ ಶಶಿಯ ಕಲೆ ತಾನು ॥

೪೫

ಕಾಡೊಳಗೆ ಹರಿಸುತ್ತ ಬಹಳ ಹೊಂಬೆಳಗನ್ನು
ಹೊನ್ನ ಹಚ್ಚಡವನ್ನು ಹೊದಿಸಿದಂತೆ ।
ಇಲ್ಲಿ ಸೊಗಯಿಪ ಗಿರಿಯು ಹೇಮಕಂದರಮಯವು
ನಿಮ್ಮಯ್ಯಗೆನಿಸುವುದು ಪರಮ ಪ್ರಿಯವು ॥

೪೬

ಬಳ್ಳಿಗಳ ಸಿಕ್ಕನ್ನು ಗಾಳಿ ಬೇಗನೆ ಬಿಡಿಸೆ
ನೆಗೆವ ನೇಸರ ಕಿರಣ ಬೆಳಕನಿಮ್ಮಡಿಸೆ ।
ತಟಗಳಲಿ ತಳತಳಿಪ ಚಿನ್ನಗಲ್ಗಳ ಬೆಳಕು
ಮಿಂಚುಗಳ ಹೊಳೆಪನ್ನು ಹಾಸ್ಯಗೈಯುವುದು ॥

೪೭

ಕೆರೆದೊಡನೆಯೆ ಹೆಬ್ಬಾವುಗಳೋಡಿರೆ
ಮದ್ದಾನೆಗಳೂ ಸುಳಿಯದಿರೆ ।
ಚಂದನದೊಳು ಕೂಡಿರೆ ಮದಗಂಧವು
ಸುರಗಜ ಪ್ರೋದುದನರಿಪುವವು ॥

೪೮

ಮೇಘಮಾಲೆಯಂತೆ ನಿಬಿಡವಾದ ನೀಲಮಣಿಗಳು
ಕಿರಣವಿಳಿಸೆ ಪ್ರಸರವ ।
ರವಿಯ ಕಾಂತಿ ಗುಹೆಯ ಬೆಳಗದಿಹುದು ತನಗೆ ಕತ್ತಲು
ಕವಿಯಿತೆನಿಸುತೆತ್ತಲು ॥

೪೯

ಶಾಂತಚಿತ್ತದೆ ನೀನು ಮುನಿಗಳ ಮಾತಿನಂತೆಯೆ ನಿಲ್ಲುತೆ
ಕ್ಷಾತ್ರಪಥದೊಳು ತಪವ ಗೈವುದು ಮರವೆಯೆಲ್ಲವ ಕೊಲ್ಲುತೆ ।
ಇಷ್ಟದರ್ಥವನೀವ ಕರ್ಮವ ಗೈದಮೇಲೆಯು ಜಗದೊಳು
ಕಷ್ಟವಿಲ್ಲದೆ ವಿಘ್ನವಿಲ್ಲದೆ ಜನರನೈದವು ಶುಭಗಳು ॥

೫೦

ಅಡ್ಡದಾರಿಗೆಳೆಯದಿರಲಿ ನಿನ್ನ ಕರಣಹಯಗಳು
ಬಳಲಿದಾಗ ಶಿವನೆ ನಿನ್ನ ಬಗೆಯೊಳಾರ್ಪನೀಯಲಿ ।
ಲೋಕಪಾಲರೆಲ್ಲ ತಪಕೆ ಬಲವನಿತ್ತು ಕಾಯಲಿ
ಕರ್ಮವಧಿಕ ಶುಭದ ಫಲವನೀಯುವಂತೆ ಗೈಯಲಿ ॥

೫೧

ಹಿತಮಧುರವಚನವನು ಪ್ರೀತಿಯಿಂದಿಂತೊರೆದು
ತನ್ನ ಲೋಕವನೈದೆ ಯಕ್ಷನಾಗ ।
ಉತ್ಕಂಠೆಯಿಂ ನರನು ಚಿಂತೆಯನು ತಾಳಿದನು ;
ಪೇರಳಲನುಕ್ಕಿಪುದು ಸದ್ವಿಯೋಗ ॥

೫೨

ಸರ್ವಸತ್ತ್ವಯೋಗದಿಂದ ದಾಂಟಲಿಕ್ಕಶಕ್ಯವು
ಪತ್ತೆಸಾರ್ದ ಫಲವನೇಕವೆನಲು ಶೂನ್ಯವಲ್ಲವು ।
ಅಕೃಶರೂಪವೆನಿಪ ತನ್ನ ಪುರುಷಕಾರವೆಂಬೊಲು
ಎಳಸಿದಗವನವನು ಕಂಡನಕೃಶಲಕ್ಷ್ಮಿಯೊಪ್ಪಲು ॥

ಇಲ್ಲಿಗೆ ಐದನೆಯ ಸರ್ಗ ಮುಗಿದುದು.

# ಕನ್ನಡ ಕಿರಾತಾರ್ಜುನೀಯ

## ಆರನೆಯ ಸರ್ಗ

೧

ಧೃತಸನ್ಮಾರ್ಗಂ ರುಚಿರಾಕಾರಂ
      ಭಾಗೀರಥಿಗಭಿಮುಖವೆನಲು ।
ಏರಿದನರ್ಜುನನಾ ಪೊಂಬೆಟ್ಟವ
      ಗರುಡನನೇರುವ ವಿಷ್ಣುವೊಲು ॥

೨

ಅಲಿರವ ಜಯದನಿಯೆನಿಸಲು ಗಾಳಿಗೆ
      ಚಲಿಸಲು ಬಾಗಿದ ಕೊಂಬೆಗಳು ।
ಸ್ತುತಿಪಾಠಕರಂ ಪೋಲುತೆ ತರುಗಳು
      ಕರೆದುವು ಪಾರ್ಥಗೆ ಪೂಮಳೆಯ ॥

೩

ಪಂಕಜರಜಗಳನೆತ್ತುತೆ ಗಂಗೆಯ
      ತನುಜಲದಲೆಗಳ ನೊತ್ತುತಲಿ ।
ಮುಂಗಡೆ ತೆಂಬೆಲರಪ್ಪಿದುವವನನು
      ಗೆಳೆಯನನಪ್ಪುವ ಮಿತ್ರರೊಲು ॥

೪

ಬಂಡೆಗೆ ಹೊಡೆಯುವ ಶಬ್ದವು ಮೊಳಗಲು
      ನೀರ್ವಕಿಗ್ಕಳುಲಿಯಗ್ಗಳಿಸೆ ।
ತೊರೆಗಳ ದನಿಗಳು ಮೋದವನಿತ್ತವು
      ಮಂಗಳ ತೂರ್ಯದ ದನಿಯೆನಿಸೆ ॥

೫

ಮುಂಗಡೆ ಗಂಗೆಯ ನೀರೊಳಗುರುಳಿದ
ಪೆರ್ಮರನಡಿಯಲಿ ಜೊಂಡುಗಳು ।
ಹಿರಿಯರ ಸೇವೆಯೆ ಲೇಸೆಂದೊರೆವೊಲು
ನಮಿಸಿರ್ದುದನವ ನೋಡಿದನು ॥

೬

ಪದ್ಮದ ರೇಣುಗಳಿಂದರುಣಿಸುತಿರೆ
ಸುತ್ತಲು ಅಲೆಗಳ ಚೆಲುವೇರೆ ।
ಅಂಚೆಯ ಗುಂಪನು ನೋಡುತೆ ಸೋತನು
ತೊರೆಗದೆ ಮೇಲುದು ಎಂದವನು ॥

೭

ಮದ ಪೆಣ್ದುಂಬಿಗೆ ಮದವೇರಿಸುತಿರೆ
ಮದಗಜದಂತದ ಗಾಯವನು ।
ತಳಿದಾ ತೊರೆಯನು ನೋಡುತೆ ತಣಿಯನು
ಪೀಡಿಪ ಪಿರಿಯನೆ ಮನ್ನಿಯನು ॥

೮

ಹೇಮದ ಕಟಕದೆ ಕೆಂಪಗೆ ಹೊಳೆಯುವ
ನಲ್ಲನು ಸಮನೆನೆ ಪೇರಲೆಗೆ ।
ಇಲ್ಲೆಂದರಸುತ ನಿಡುಸರಗೈಯುವ
ಕೋಕಿಯ ಕಂಡನು ನಲವಿಂದೆ ॥

೯

ಚಂಚಲವೀಚಿಯ ರಂಜಿತವಾಗಿಸಿ
ಆಳದೆ ಮುಳುಗಿದ ಮಣಿಗಳನು ।
ಬೆಳಕುಗಳರುಹಿದುವರ್ಜುನನಿಗೆ ಮೇಣ್
ಆಕೃತಿಯೊರೆವೊಲು ಭಾವವನು ॥

೧೦

ಬಂಡೆಗೆ ಬಡಿವಲೆಗಳು ಮೇಲೆತ್ತಲು
ಬಿರುಗಾಳಿಯು ಸಲೆ ಚೆದುರಿಸಲು ।
ಕೇದಗೆ ತುದಿಯೆನೆ ಬಿಳಿಯಹ ನೊರೆಗಳ
ಕಂಡನು ತೊರೆಗಳ ನಗೆಯೆನಲು ॥

೧೧

ನೀರೊಳಗಿಳಿದಿರುವಾನೆಯ ಮದಜಲ–
ಪಟಲವು ಸೋಗೆಯ ಕಣ್ಣೆನಿಸೆ ।
ಕಂಡನು ನೋಡಲು ನದಿಯೇ ತೆರೆದಿಹ
ಲೋಚನಶತ ತಾನೆಂದೆನಿಸೆ ॥

೧೨

ತವೆ ಸಿಡಿದೇಳುತ ಬಾಯ್ದೆರೆವಂದದೆ
ಚಿಪ್ಪಿನ ಪೆಣ್ಣನು ಮಣಲಿನೊಳು ।
ಪಾರ್ಥನು ಕಂಡನು ಮುತ್ತಿನ ಮಣಿಗಳು
ಕಣ್ಣೀರೆಂಬೊಲು ಸುರಿದಿರಲು ॥

೧೩

ನೀರೊಳು ನಿರ್ಮಲ ಹವಳದ ತಳಿರದು
ನಸುನೊರೆಯೊಂದಿಗೆ ಕೂಡಿರಲು ।
ಕಾಮವನುಕ್ಕಿಪ, ಪಲ್ಗಳು ಸೊಗಯಿಪ
ನಲ್ಲೆಯ ತುಟಿಯನು ನೆನೆಯಿಸಿತು ॥

೧೪

ಚಂಚಲ ವೀಚಿಗಳುಯ್ಯುವ ಮದಜಲ–
ಗಂಧವ ವಾಸಿಸಿ ನೀರಿಂದೆ ।
ಏಳುವ ನೀರಾನೆಗಳನು ತಿಳಿದನು
ಗಜದಭಿಮುಖ ಪ್ರತಿಗಜವೆಂದೆ ॥

೧೫

ಬೇಗನೆ ಮೇಲಕೆ ಹತ್ತುವ ಹಾವಿನ
ನಿಡುಸುಯ್ ನೀರ್ಗಳ ಸಂಚಯವ ।
ಶರದಭ್ರಮೆನಲ್ ಗಗನದೆ ಗಡಣಿಸೆ
ನೋಡುತೆ ತಳೆದನು ವಿಸ್ಮಯವ ॥

೧೬

ಮಳಲಿನ ತಟಗಳ ಸುಳಿಮಿಾನ್ ಕಣ್ಗಳ
ಗಂಗೆಯ ಸೇರುವ ತೊರೆಗಳನು ।
ಸೂನ್ನತ ಜಘನದ ಸುಂದರ ಸಖಿಯರ
ನೆಂಬವೊಲಾತನು ದಾಟಿದನು ॥

೧೭

ಬೆಟ್ಟವನೇರುತೆ, ಪೂವಿಂ ಬಾಗಿದ
ಮರಗಳು ನೆಲವನು ರಂಜಿಸಲು ।
ಮನದಾಶಯದೊಲು ನಿರ್ಮಲವಾಗಿಹ
ಬನಕೈತಂದನು ನೆತ್ತಿಯೊಳು ॥

೧೮

ಲತೆಗಳು ಕುಸುಮಿತ, ತರುಗಳು ಫಲಯುತ
ಬನಗಳು ನಿರ್ಜನವೆನಲಂದು ।
ಸಾನುಗಳೆಸೆಯುವ ಬೆಟ್ಟವು ಪಾರ್ಥನ
ತಪದುತ್ಸಾಹವನುಕ್ಕಿಸಿತು ॥

೧೯

ವಿಧಿಯಿಂ ಬುದ್ಧಿಯ ರೋಧಿಸಿ ಮುನಿಗಳ
ವೃತ್ತಿಯ ಕೊಂಡಾ ಪಾರ್ಥನನು ।
ದುಷ್ಕರತಪಮುಂ ಖೇದಂಗೊಳಿಸದು
ಖೇದಿಪುದಾವುದು ಧೀರರನು ॥

೨೦

ಇಂದ್ರಿಯಶಮುಸುಖವುಕ್ಕಲು ಶುಚಿಗುಣ-
ದಿಂದಲಿ ತಮವನು ಮಳ್ಗಿಸುತೆ ।
ಅನುದಿನ ಸುಕೃತದೆ ವಿಮಲನು ಬೆಳೆದನು
ಕಲೆಯಿಂ ಬೆಳೆಯುವ ಶಶಿಯಂತೆ ॥

೨೧

ಸುಮತಿಯು ಬಗೆಯಿಂದೋಡಿಸಲಗುಣದ
ಸಂಗವನೆತ್ತಲು ಪರಿಪರಿಯ ।
ಸಂತತ ಶಮಸುಖದನುಭವವಿಳಸಿತು
ವಿಷಯಾಸಕ್ತಿಯ ಕೋಟಲೆಯ ॥

೨೨

ಇಂದ್ರನನೊಲಿಸಲು ಜಪನಮನಗಳಿಂ
ಪ್ರಯತನು ಗೈಯುತೆ ಧ್ಯಾನಗಳ ।
ಒಮ್ಮೆಯೆ ತಳೆದನು ಜಯಶಮವೆರಡರ
ಸಹಜವಿನೂತನ ತೇಜಗಳ ॥

೨೩

ಮರಕತಮಣಿನಿಭನಾಂತಿರೆ ತಲೆಯೊಳು
ಸ್ನಾನದೆ ಜನಿಸಿದ ಜಟೆಗಳನು ।
ಅರುಣನ ಕಿರಣದೆ ತುಂಬಿದ ತುದಿಗಳ
ಹೊಂಗೆಯ ಮರವನು ಹೋಲಿದನು ॥

೨೪

ಕೈದುಳ್ಳೊಡೆಯುಂ ಕುಟಿಲತೆಯಾನದೆ
ಮುನಿಗಳ ಮೀರಿಸಿ ಸುಚರಿತದೆ ।
ಶಮದಿಂ ಮಿಗಗಳ ಬಗೆಗಳ ಸೆಳೆದನು
ಸುಗುಣಗಳಾರನು ಮೆಚ್ಚಿಸವು ॥

೨೫

ತಾನನುಕೂಲದ ಕಂಪಿನ ಪವನನ—
ನೆಲ್ಲೆಡೆ ಮೆಲ್ಲನೆ ಸುಳಿಯಿಸುತೆ ।
ಋತುಧರ್ಮವನೇ ತಪ್ಪಿಸಿ ಸೂರ್ಯನ
ಕಿರಣಕೆ ತಂಪನು ತುಂಬಿಸುತೆ ॥

೨೬

ಪೂಗಳ ಕೊಯ್ವೆಡೆ ಕೈಮುಗಿದಂತಿರೆ
ತಳಿರ್ಗಳು ಬಾಗಿಸಿ ಪೆರ್ಮರವ ।
ಇರುಳೊಳು ದಿನದಿನವೆಳೆವುಲ್ಗಡಣದೆ
ಹೊದಿಸುತಲವ ಮಲಗುವ ನೆಲವ ॥

೨೭

ಮುಗಿಲಿಲ್ಲದೆ ಬಾನ್ ಸುರಿಸುವ ತುಂತು—
ರ್ವನಿಗಳು ರಜಗಳ ಕಳೆಯುತಿರೆ ।
ದಯೆಯಿಂದತಿಕೃಶನಪ್ಪರ್ಜುನನಿಗೆ
ತಪವೇ ಸೇವೆಯ ಸಲ್ಲಿಸಿರೆ ॥

೨೮

ಮುಂಗಡೆ ನೋಡುತೆ ಮಾಫಲಕರಳಿದ
ಪೂಗಳ ಮಂಗಳಶಕುನವನು ।
ವಿಸ್ಮಿತನಾಗದೆಯಿದ್ದನು ಮುನಿಗಳ
ಮೈಮೆಯು ಮುರಿಯದು ಧೈರ್ಯವನು ॥

೨೯

ಕೆಲದಿನಗಳ ತಪದಿಂದಲೆ ಆತನ
ಮೈಮೆಯು ನಿರುಪಮವೆಂದರಿತು ।
ಮನದುಮ್ಮಳದಿಂದಿಂದ್ರನ ಬೀಡಿಗೆ
ಬಂದರು ಕಾಡಿನ ಜನ ಕಲೆತು ॥

೩೦

ಕಾಯುವ ಕೆಲಸವು ಕುಂದಿರಲೊಡನೆಯೆ
ತಿಳಿಯಿಸಿ ಬರವನು ತಲೆವಾಗಿ ।
ಕಾಲೋಚಿತ ನಲ್ನುಡಿಗಳನೀಪರಿ
ಇಂದ್ರನಿಗೊರೆದರು ಇಂಬಾಗಿ ॥

೩೧

ಇಂದ್ರನೆ, ನಿನ್ನಯ ಗಿರಿಯೊಳಗೊರ್ವನು
ತೇಜದೊಳೆನಿಸುತೆ ಗ್ರಹಪತಿಯು ।
ಮೂಪುರುಷನು ತಾಂ ಮಾಜಯಕೆನ್ನುತೆ
ತಪಗೈವನು ಸುಡೆ ಧಾರಿಣಿಯು ॥

೩೨

ಕಾಳೋರಗಸಮುಭುಜನವ ತಳೆವನು
ಪೆರ್ಬಿಲ್ಲನು ಪಗೆಯಂಜುತಿರೆ ।
ಆತನ ನಿರ್ಮಲಚರಿತಗಳಿಂದಲಿ
ಸನ್ನುತ ಮುನಿಗಳೆ ಸೋಲುತಿರೆ ॥

೩೩

ಗಾಳಿಯು ಸುಖಕರ, ಪೊಸಪುಲ್ ಬುವಿಯೊಳು
ತಿಳಿ ಬಾನ್, ದೂಳೊಳು ನೀರ್ಮಳೆಯು ।
ಅನುಗುಣವೀಪರಿ ಭೂತಗಳಾತನ
ಗುಣಸಿರಿಗೆನೆ ಬೆಸಗೈಯುವವು ॥

೩೪

ಹೋರದೆ ಮಿಗಗಳು ಸೇವಿಪವವನನು
ಗುರುವನು ಸೇವಿಪ ಶಿಷ್ಯರೊಲು ।
ಪೂಗೊಯ್ವೆಡೆ ಮರ ಬಾಗುವುವಾತಗೆ
ನಗವಾತನ ವಶ ನಿನ್ನವೊಲು ॥

೩೫

ಅದಟನ್ನೊರೆವುದು ಬಳಲಿಕೆಯಿಲ್ಲಮೆ
ವರತನು ಗೆಲ್ಲವ ನುತಿಸುವುದು ।
ಶಾಂತನೆಯೆಂದೊಡಮಾತನ ಮೈಮೆಯು
ನೋಡುವ ಜನಗಳನಂಜಿಪುದು ॥

೩೬

ಋಷಿವಂಶಜನೋ ದಾನವಕುಲಜನೊ
ಕ್ಷತ್ರಿಯವಂಶದೊಳೊಗೆದಿಹನೋ ।
ನಿನ್ನಯ ಬನದೊಳು ತಪಗೈವಾತನ
ನೆಲೆಗಾಣುವ ಬಲವಿಲ್ಲೆಮಗೆ ॥

೩೭

ಕಾರಣ ಬಹುಗುಣವೆಂಬುದನೆಣಿಸುತೆ
ಮೇಣಾವರಿಯದೆ ನುಡಿದುದನು ।
ಸೈರಿಸುವುದು ನೀನಹಿತವದಾಗೆಯು
ವನಚರರರಿವರೆ ಸುಮತಿಯನು ॥

೩೮

ಮನಕಿನಿದಾಗಿರೆ ಕಂದನ ತಪವನು
ಕೇಳುತೆ ಬಾಯಿಂ ಗುಹ್ಯಕರ ।
ಮರೆಸಿದನಿಂದ್ರನು ಮೂಡಿದ ಮುದವನು
ಅರಸರ ಮತಿಗಳು ನೀತಿಪರ ॥

೩೯

ಚಿತ್ತೈಕಾಗ್ರ್ಯದೊಳಿಂದ್ರನು ಭಕ್ತನ-
ನರಿತೊಡಮರಿಯದ ತೆರದಿಂದೆ ।
ಆತನ ನಿಯಮಸ್ಥೈರ್ಯವ ಪರಿಕಿಸ-
ಲಿಂತೊರೆದನು ಸುರಸತಿಯರಿಗೆ ॥

೪೦

ಕೋಮಲವೇಕವು ಸೂಕ್ಷ್ಮವು ದೂರಗ–
ವಮೋಘವಪ್ರತಿಹತವೆನಿಸೆ ।
ಭೇದಿಪ ಬೇರೊಂದಸ್ತ್ರವು ಕಾಮನ
ವಿಜಯಕೆ ನೀವಲ್ಲದೆಯಿಹುದೆ ॥

೪೧

ಭವಮೋಕ್ಷಕೆ ತಮದೊಡ್ಡನು ಗೆಲ್ದರ
ರಜವನು ಶಮಿಸುವ ಬೋಧಜಲ ।
ಬತ್ತುವುದೈಸಲೆ ನಿಮ್ಮಯ ನಯನಾಂ–
ಜಲಿಗಳು ಪೀರ್ದುವು ಎನಲಖಿಲ ॥

೪೨

ಪಲವೆಡೆ ಹಂಚಿದ ಚೆಲುವನ್ನೊಟ್ಟಿಗೆ
ಕೂಡಿಸಿ ನಿಮ್ಮನು ವಿಧಿ ಮಾಡೆ ।
ಅಮರರ ಲೋಕವನ್ನೈದುವ ಬಯಕೆಯು
ಮೂಡಿತು ಜನತೆಗೆ ಮೇಣ್ ನೋಡೆ ॥

೪೩

ಆದರಿಂದಾತನ ತಪವನು ಮುರಿಯಿರಿ
ಕಲೆಯೊಳು ಜಾಣರ ಜತೆಗೊಂಡು ।
ಯೋಗಿಗಳಂ ಮಿಗೆ ಗೆದ್ದಿಹ ನಿಮಗಿದು
ಸುಲಭವು ಸುಖಸಂಗಿಯ ಗೆಲಲು ॥

೪೪

ಸಂದೆಯವಿಲ್ಲವು ಪಗೆಗಳ ಕೊಲ್ಲುತೆ
ವಿಷಯಸುಖಂಗಳನಳಿಪುವನು ।
ಭವಮೋಕ್ಷಕೆ ವಿಧಿಯದು ತವೆ ಸಲ್ಲದು
ಎತ್ತಣ ಬಿಲ್ಲೆತ್ತಣ ಮುಕ್ತಿ ॥

೪೫

ಮಹಿಮನು ಮತ್ತಿನ ಮುನಿಗಳ ತೆರದೊಳು
ಮುನಿಸನು ತಳಿವುದನೆಣಿಸದಿರಿ ।
ಕೀರ್ತಿಯ ಕಾಯುವ ಶೂರರ ಮತಿಗಳು
ಪೆಣ್ಗಳ ಪೀಡೆಯ ಸೈರಿಸವು ॥

೪೬

ಸುರರ ಮುಂಗಡೆಯವರ ಮನ್ನಿಸಿ ನುಡಿಯಲಿಂದ್ರನು ಬಗೆಯನು
ಸ್ವಾಮಿಸನ್ನಿಧಿಯಲ್ಲಿ ಸೊಗಯಿಪ ಪ್ರಭುವಿನಾಣತಿಯಾನುತೆ ।
ದೇವನಾರಿಯರಾಗ ಪಡೆದರು ಪಿರಿಯ ಕಾಂತಿಯನೊಡನೆಯೆ
ಸ್ವಾಮಿ ಗೌರವಗೈಯಲನುಚರನಪ್ಪನತಿಶಯತುಷ್ಟನು ॥

೪೭

ಪೊಡೆಮುಟ್ಟು ಪೊರಮಟ್ಟ ಸಂತುಷ್ಟರಮಣಿಯರ
ಕುಚಭಾರವಂಗಗಳ ಬಾಗಿಸಿತ್ತು ।
ನೋಡುವಿಂದ್ರಗೆ ಕಮಲಲಕ್ಷ್ಮಿಯನು ದೊರೆಕೊಂಡ
ತೆರೆದ ಸಾವಿರ ಕಣ್ಣು ಸಾಲದಾಯ್ತು ॥

ಆರನೆಯ ಸರ್ಗ ಮುಗಿದುದು.

# ಟಿಪ್ಪಣಿಗಳು

(ಅಂಕಗಳು ಪದ್ಯಸಂಖ್ಯೆಯನ್ನು ಸೂಚಿಸುತ್ತವೆ)

---

## ಮೊದಲನೆಯ ಸರ್ಗ

೧. ಕಿರಾತಾರ್ಜುನೀಯವು 'ಮಹಾಕಾವ್ಯ'. ಮಹಾಕಾವ್ಯವು ಮಂಗಳಾಶಂಸೆಯಿಂದ ಇಲ್ಲವೆ ನಮಸ್ಕಾರದಿಂದ ಇಲ್ಲವೆ ವಸ್ತುನಿರ್ದೇಶದಿಂದ ಆರಂಭವಾಗಬೇಕೆಂಬುದು ಸಂಪ್ರದಾಯ. ಇಲ್ಲಿ ಭಾರವಿ ಮೂರನೆಯ ಕ್ರಮವನ್ನನುಸರಿಸಿ ಕಾವ್ಯದ ಆದಿಯಲ್ಲೇ ಕಥಾವಸ್ತುವನ್ನು ನಿರ್ದೇಶಿಸುತ್ತಿದ್ದಾನೆ. ಹನ್ನೆರಡು ವರ್ಷಗಳ ವನವಾಸದ ಪ್ರತಿಜ್ಞೆಯನ್ನು ಪಾಲಿಸುವುದಕ್ಕಾಗಿ ಪಾಂಡವರು ದ್ವೈತವನಕ್ಕೆ ಬಂದರು. ಬಂದವರೇ ಅಲ್ಲಿಯ ನಿವಾಸಿಯಾದ ಕಿರಾತನೊಬ್ಬನನ್ನು ಹಸ್ತಿನಾವತಿಯ ಸುದ್ದಿಯನ್ನು ರಹಸ್ಯವಾಗಿ ತಿಳಿದುಬರಲು ಕಳುಹಿಸಿದ್ದರು. ಆ ಗುಪ್ತಚಾರನು ತನ್ನ ಕಾರ್ಯವನ್ನು ಮಾಡಿಕೊಂಡು ಯುಧಿಷ್ಠಿರನಿಗೆ ಸಮಾಚಾರವನ್ನು ಮುಟ್ಟಿಸಲು ಬಂದಿದ್ದಾನೆ.

ಕುರುರಾಜನೆಂದರೆ ಇಲ್ಲಿ ದುರ್ಯೋಧನ. ಸಿರಿಯೊದವು-ಸಂಪತ್ತಿನ ಆಧಿಕ್ಯ. ನೆಲೆ-ಮುಖ್ಯಕಾರಣ. ನಯ-ರಾಜನೀತಿ. ಕಿರಾತನು ಬ್ರಹ್ಮಚಾರಿಯ ವೇಷದಲ್ಲಿ ಹಸ್ತಿನಾವತಿಗೆ ಹೋಗಿ ಜನಗಳಲ್ಲಿ ಬೆರೆತು ಅಲ್ಲಿಯ ವಿದ್ಯಮಾನಗಳನ್ನೆಲ್ಲ ತಿಳಿದುಬಂದಿದ್ದಾನೆ. ವಿಚಾರಂ-ವಿಚಾರವನ್ನು. ಅಂತ್ಯಪ್ರಾಸಕ್ಕಾಗಿ ದ್ವಿತೀಯಾವಿಭಕ್ತಿಯ ಬದಲು ಪ್ರಥಮೆ ಬಂದಿದೆ.

ಪ್ರತಿಯೊಂದು ಸರ್ಗದ ಆದಿಯ ಪದ್ಯದಲ್ಲಿಯೂ ಕಡೆಯ ಪದ್ಯದಲ್ಲಿಯೂ ಶ್ರೀ ವಾಚಕವಾದ ಪದಗಳು ಬರುತ್ತವೆ. ಇದು ಈ ಮಹಾಕಾವ್ಯದ 'ಮುದ್ರೆ'. ಇಲ್ಲಿ 'ಸಿರಿ' ಎಂಬ ಪದ ಗಮನಾರ್ಹ.

೨. ನೀತಿಶಾಸ್ತ್ರದಲ್ಲಿ ಹೇಳಿರುವ ದೂತನ ಆದರ್ಶಗುಣಗಳೆಲ್ಲವನ್ನೂ ಭಾರವಿ ಈ ದೂತನಲ್ಲಿ ತೋರಿಸುತ್ತಾನೆ. ಸತ್ಯವು ಅಪ್ರಿಯವಾಗಿದ್ದರೂ

ಇದ್ದಂತೆ ನಿವೇದಿಸುವುದು ದೂತನ ಕರ್ತವ್ಯ. ಆದ್ದರಿಂದಲೇ ದುರ್ಯೋಧನನ ಮೇಲ್ಮೆಯನ್ನು ಧರ್ಮಜನಿಗೆ ಹೇಳುವುದಕ್ಕೂ ಅವನ ಮನಸ್ಸು ಹಿಂದಾಗಲಿಲ್ಲ. 'ಹಿತೈಷಿಗಳಿಂದೂ ಸುಳ್ಳಾದ ಪ್ರಿಯವಾರ್ತೆಯನ್ನು ಆಡಲಿಚ್ಛಿಸುವುದಿಲ್ಲ' ಎಂಬುದು ಅರ್ಥಾಂತರನ್ಯಾಸವೆಂಬ ಅಲಂಕಾರಕ್ಕೆ ಉದಾಹರಣೆ. ಇಲ್ಲಿ ದೂತನ ಚರ್ಯೆಯನ್ನು ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ.

೩. ಸಾಮಾನ್ಯವಾಗಿ ದೂತನಾದವನು ಕಟುವಾಗಿ ನುಡಿಯಬಾರದೆಂಬುದೇ ನಿಯಮ. ಆದರೆ ರಾಜನೇ ಅಪ್ಪಣೆಮಾಡಿದಾಗ ಮಾತ್ರ ಕಟುವಾದ ಸತ್ಯವನ್ನು ಹೇಳಲಡ್ಡಿಯಿಲ್ಲ. ಹಾಗೆಯೇ ರಾಜನಿಗೂ ಕೂಡ ಸುಮ್ಮನೆ ಪ್ರಿಯಕ್ಕಿಂತ ಸತ್ಯವನ್ನು ಕೇಳುವ ಲವಲವಿಕೆಯಿರಬೇಕು. ಅಂತೆಯೇ ಆದರ್ಶರಾಜನಾದ ಧರ್ಮರಾಯನು ಚಾರನನ್ನು ಏಕಾಂತದಲ್ಲಿ ಕುಳ್ಳಿರಿಸಿಕೊಂಡು ಸತ್ಯವನ್ನು ಹೇಳುವಂತೆ ತಿಳಿಸುತ್ತಾನೆ. ದೂತನ ನುಡಿಯಲ್ಲಿರಬೇಕಾದ ಮುಖ್ಯ ಗುಣಗಳು ಮೂರು—

(1) ಸೌಶಬ್ದ್ಯ ಅಥವಾ ಶಬ್ದಶುದ್ಧಿ (ವ್ಯಾಕರಣದ ಅಭ್ಯಾಸದಿಂದ ಇದು ಬರತಕ್ಕದ್ದು).

(2) ಗುರ್ವರ್ಥ ಅಥವಾ ಅರ್ಥಸಂಪತ್ತು. ಇದನ್ನೇ ಅರ್ಥಗೌರವವೆಂದೂ ಮತ್ತೆ ಭಾರವಿ ಎರಡನೆಯ ಸರ್ಗದಲ್ಲಿ ಕರೆಯುತ್ತಾನೆ. (ಅಭಿಪ್ರಾಯಗಳು ಮಹತ್ವದ್ದಾಗಿರಬೇಕೆಂದು ತಾತ್ಪರ್ಯ).

(3) ಶಾಸ್ತ್ರಾರ್ಥ ಅಥವಾ ಶಾಸ್ತ್ರಗಳ ಸಿದ್ಧಾಂತಕ್ಕೆ ಅನುಗುಣವಾಗಿರುವ ಅಭಿಪ್ರಾಯ. ಮಾತಾಡುವ ಕ್ರಮ, ಮಾತಿನ ಅರ್ಥದ ಮೇಲ್ಮೆ, ಶಾಸ್ತ್ರದ ಯುಕ್ತಿ–ಮೂರೂ ಸೇರಬೇಕಾದರೆ ದೂತನು ವ್ಯಾಕರಣ, ವ್ಯವಹಾರ, ಶಾಸ್ತ್ರಗಳಲ್ಲಿ ನುರಿತವನಾಗಿರಬೇಕೆಂಬ ಆದರ್ಶವನ್ನಿಲ್ಲಿ ಸೂಚಿಸಿದೆ.

೪. 'ಚಾರರೇ ರಾಜರಿಗೆ ಕಣ್ಣು' ಎಂದು ನೀತಿಶಾಸ್ತ್ರಕಾರರು ಹೇಳಿದ್ದಾರೆ. ಅದನ್ನು ಭಾರವಿ ಇಲ್ಲಿ ಬಳಸಿಕೊಂಡಿದ್ದಾನೆ. 'ಚಾರಚಕ್ಷುಗಳು' ಬಹುವ್ರೀಹಿ ಸಮಾಸ. ಕ್ರಿಯೆಯುಳ್ಳ–ಎಂದರೆ ಕ್ರಿಯಾವಂತರು ಅಥವಾ ಕಾರ್ಯಮಗ್ನರು. 'ಹಿತವೂ ಆಗಿ ಪ್ರಿಯ ಅಥವಾ ರುಚಿಕರವೂ ಆಗಿರುವ ಮಾತುಗಳೇ ದುರ್ಲಭ' ಎಂಬುದು ಸುಂದರವಾದ ಅರ್ಥಾಂತರನ್ಯಾಸಾ

ಲಂಕಾರ. ಭಾರವಿಯ ಲೋಕಾನುಭವವನ್ನು ಇದು ತೋರಿಸುತ್ತದೆ. ಸಾಮಾನ್ಯವಾಗಿ ಮಾತು ಹಿತವಾಗಿದ್ದರೆ ಎಂದರೆ ಒಬ್ಬನ ಒಳ್ಳೆಯದನ್ನು ಕೋರುತ್ತಿದ್ದರೆ ಅದು ಕೇಳುವವನ ಮನಸ್ಸಿಗೆ ರುಚಿಸುವಂತಿರುವುದಿಲ್ಲ; ರೋಗಿಗೆ ಅಪಥ್ಯವೇ ರುಚಿಯಾಗುವಂತೆ ಪಥ್ಯವಾದ ಆಹಾರ ರುಚಿಸುವುದಿಲ್ಲ.

೫. ರಾಜ ಮತ್ತು ಮಂತ್ರಿಗಳಲ್ಲಿ ಯಾವ ದೋಷಗಳಿರಬಾರದೆಂದು ಭಾರವಿ ತೋರಿಸುತ್ತಿದ್ದಾನೆ. ಸಮಯೋಚಿತವಾಗಿ ರಾಜನಿಗೆ ಹಿತೋಪದೇಶ ಮಾಡದಿದ್ದರೆ ಮಂತ್ರಿಯ ದೋಷ; ಉಪದೇಶವನ್ನು ಕೇಳದಿದ್ದರೆ ರಾಜನ ತಪ್ಪು. ಈ ದೋಷವಿಲ್ಲದೆ ಇಬ್ಬರಲ್ಲಿಯೂ ಐಕಮತ್ಯವುಂಟಾದರೆ ಆಗ ಸರ್ವಸಂಪತ್ತುಗಳೂ ತಾವಾಗಿಯೇ ಸಿದ್ಧಿಸುತ್ತವೆ. ಈ ಕಡೆಯ ವಾಕ್ಯದಲ್ಲಿ ಐಕಮತ್ಯವೆಂಬ ಕಾರಣವನ್ನು ಅದರ ಕಾರ್ಯವಾದ ಸಂಪತ್ಪ್ರಾಪ್ತಿ ಸಮರ್ಥನೆ ಮಾಡುವುದರಿಂದ ಇದನ್ನೂ ಅರ್ಥಾಂತರನ್ಯಾಸಾಲಂಕಾರದ ಮತ್ತೊಂದು ಬಗೆಯೆಂದು ತಿಳಿಯಬೇಕು.

೬. ದುರ್ಗಮ-ತಿಳಿಯಲು ಗಹನವಾದುದು. ದೂತನು ವಿನಯ ದಿಂದ ತನ್ನ ಬುದ್ಧಿ ಕಿರಿದೆಂದು ಹೇಳಿಕೊಳ್ಳುತ್ತಾನೆ. ಮೊದಲನೆಯ ಎರಡು ಸಾಲುಗಳಲ್ಲಿ ವಿಷಮಾಲಂಕಾರವಿದೆ; ಅತಿಗಹನವಾದ ರಾಜಕಾರಣ ವನ್ನು ಜಡಮತಿಯ ಜಂತುಗಳು ಅರಿಯುವುದು ಅಶಕ್ಯವೆಂದು ಪರಸ್ಪರ ವಿಸಂಗತಿಯನ್ನು ಎತ್ತಿ ಹೇಳಿರುವುದರಿಂದ. ಆದರೂ ಧರ್ಮರಾಜನ ಮಹಿಮೆಯಿಂದ ತನಗೂ ಆ ಶಕ್ತಿ ಬಂದಿತೆಂದು ದೂತನು ಪ್ರಕಾರಾಂತರ ದಿಂದ ರಾಜನನ್ನು ಪ್ರಶಂಸೆಮಾಡುತ್ತಿದ್ದಾನೆ; ಸಂಪೂರ್ಣವಾಗಿ ತಿಳಿದು ಮಾತನಾಡುತ್ತಿರುವೆನೆಂದೂ ಸೂಚಿಸುತ್ತಿದ್ದಾನೆ; ಇಲ್ಲಿ 'ಗೂಢನೀತಿ' ಯೆಂದರೆ ರಾಜರಿಗೆ ವಿಧಿಸಿರುವ ಷಡ್ಗುಣಗಳು—(1) ಸಂಧಿ, (2) ವಿಗ್ರಹ, (3) ಯಾನ, (4) ಸಂಸ್ಥೆ, (5) ಆಸನ, (6) ದ್ವೈಧೀಭಾವ.

೭. ದುರ್ಯೋಧನನು ಸಿಂಹಾಸನದಲ್ಲಿ ಮಂಡಿಸಿದ್ದಾನೆ; ಪಾಂಡ ವರು ಕಾಡಿನಲ್ಲಿ ತೊಳಲುತ್ತಿದ್ದಾರೆ. ಆದರೂ ಅವನಿಗೆ ಇವರಿಂದ ಭಯವೇ ಎನ್ನುವಾಗ ಕಾರಣವಿಲ್ಲದೆಯೇ ಕಾರ್ಯವುಂಟಾಯಿತೆಂಬಂತೆ ವರ್ಣನೆಯಿದೆ ಯೆಂದು ಭಾವಿಸಿದರೆ 'ವಿಭಾವನೆ' ಯೆಂಬ ಅಲಂಕಾರ; ನಿರ್ಭಯಕ್ಕೆ ಕಾರಣವಿದ್ದರೂ ಆ ಕಾರ್ಯವು ಉಂಟಾಗಲಿಲ್ಲವೆಂದು ಭಾವಿಸಿದರೆ 'ವಿಶೇ

ಷೋಕ್ತಿ' ಯೆಂಬ ಅಲಂಕಾರ. ಮುಂದೆ, ಜೂಜಿನಲ್ಲಿ ಧರೆಯನ್ನು ಗೆದ್ದಾಗಿಯೇ ಇದ್ದರೂ (ಆ ಗೆಲವು ಸ್ಥಿರವಲ್ಲವೆಂಬ ಅಭಿಪ್ರಾಯದಿಂದ) ಮತ್ತೆ ಗೆಲ್ಲಲು ರಾಜನೀತಿಯ ಸಹಾಯವನ್ನು ಪಡೆದುಕೊಳ್ಳುತ್ತಿರುವನೆನ್ನುವಾಗ, ಅವನ ಮನಸ್ಸಿನ ಅಭಿಪ್ರಾಯವನ್ನು ಕಾರ್ಯಮುಖೇನ ಊಹೆ ಅಥವಾ ಅನುಮಾನ ಮಾಡಿಕೊಳ್ಳಬೇಕಾಗಿದೆ. ಈ ಊಹೆಯಿರುವ ಸ್ಥಳಗಳನ್ನು 'ಕಾವ್ಯಲಿಂಗ' ವೆಂಬ ಅಲಂಕಾರವೆನ್ನುತ್ತಾರೆ.

೮. ದುರ್ಯೋಧನನು ವಸ್ತುತಃ ಕುಟಿಲಮತಿ. ಆದರೂ ಧರ್ಮಮೂರ್ತಿಯಾದ ಧರ್ಮಜನನ್ನು ಮೀರಿಸಲು ತಾನೂ ಧರ್ಮಮಾರ್ಗಕ್ಕೆ ಬಂದಿದ್ದಾನೆ. ಇದರ ಮೇಲಿಂದ ಕವಿ ಸಾಮಾನ್ಯ ಸತ್ಯವನ್ನು ಸಿದ್ಧಾಂತಿಸುತ್ತಾನೆ—ಕೆಟ್ಟವರ ಗೆಳೆತನಕ್ಕಿಂತಲೂ ಸಜ್ಜನರ ಹಗೆತನವೇ ಲೇಸು. ಇದು ಅರ್ಥಾಂತರನ್ಯಾಸಾಲಂಕಾರ. ಅದಕ್ಕೆ ಸಂಪತ್ತನ್ನು ಕೊಡುವ ಶಕ್ತಿಯಿದೆ ಯೆಂಬ ಕಾರಣವನ್ನೂ ತಿಳಿಸುವುದರಿಂದ ಕಾವ್ಯಲಿಂಗಾಲಂಕಾರದ ಛಾಯೆಯೂ ಇದೆ.

೯. ಷಡ್ರಿಪುಗಳು—ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ. ರಾಜನು ಹಗಲಿರುಳುಗಳನ್ನು ಹೇಗೆ ವಿಭಾಗಿಸಿಕೊಂಡು ಪ್ರತಿಕ್ಷಣವೂ ಕಾರ್ಯಪರನಾಗಿರಬೇಕೆಂದು ಚಾಣಕ್ಯನ ಅರ್ಥಶಾಸ್ತ್ರದಲ್ಲಿ ವಿವರಿಸಿದೆ. ದುರ್ಯೋಧನನು ಅದರಂತೆ ನಡೆಯುತ್ತಿದ್ದಾನೆ. (ಹೋಲಿಸಿ—Uneasy lies the head that wears a crown) ವಿಧಿವಿಹಿತವಾಗಿರುವ ರಾಜನ ದಿನಚರಿ ಅತ್ಯಂತ ಕಷ್ಟಕರವಾದುದು; ಸುಖದ ಲೇಶವೂ ಅಲ್ಲಿಲ್ಲ.

೧೦. ಇಲ್ಲಿ ದುರ್ಯೋಧನನು ಯಾವ ರೀತಿ ಸೇವಕರು, ಮಿತ್ರರು, ಬಂಧುಗಳು ಮುಂತಾದವರೆಲ್ಲರ ಪ್ರೀತಿವಿಶ್ವಾಸಗಳನ್ನು ಗಳಿಸುತ್ತಿರುವನೆಂಬುದನ್ನು ವರ್ಣಿಸಿದೆ. ಇಲ್ಲಿ ಪ್ರತಿವಾಕ್ಯದ ಕಡೆಯ ಭಾಗದಿಂದ ಅದರ ಮುಂದಿನ ವಾಕ್ಯವನ್ನಾರಂಭಿಸುವುದರಿಂದ ಚಮತ್ಕಾರವುಂಟಾಗಿದೆ. ಇದಕ್ಕೆ 'ಏಕಾವಲೀ' ಅಲಂಕಾರವೆಂದು ಹೆಸರು. ಪದ್ಯದಲ್ಲಿ 'ದೀನ' ಎಂದರೆ 'ಗರ್ವವಿಲ್ಲದ ವಿನೀತ' ಎಂದರ್ಥ; 'ಶೋಚ್ಯ' ನೆಂದಲ್ಲ.

೧೧. 'ತ್ರಿಗಣ' ಎಂದರೆ 'ತ್ರಿವರ್ಗ' ಅಥವಾ ಧರ್ಮ, ಅರ್ಥ,

ಕಾಮ ಎಂಬ ಪುರುಷಾರ್ಥಗಳು. ಈ ಮೂರರಲ್ಲಿ ಎಲ್ಲಕ್ಕೂ ಸಮವಾದ ಪ್ರಾಧಾನ್ಯವನ್ನಿತ್ತು ಸೇವಿಸಬೇಕೆಂದು ನೀತಿ; ಒಂದಕ್ಕೆ ಮತ್ತೊಂದಕ್ಕಿಂತ ಹೆಚ್ಚು ಬೆಲೆ ಕೊಡಕೂಡದು. ದುರ್ಯೋಧನನು ಅದರಂತೆಯೇ ನಡೆಯುತ್ತಿದ್ದಾನೆ. ಅವನ ಗುಣಗಳಿಗೆ ಮನಸೋತು ಕೆಳೆಗೊಂಡಂತೆ ಎನ್ನುವಾಗ ಉತ್ಪ್ರೇಕ್ಷಾಲಂಕಾರ ಸ್ಪಷ್ಟ.

೧೨. ನಲ್ವಾತು—ಒಳ್ಳೆಯ ಮಾತು. ಅವನು ಒಳ್ಳೆಯ ಮಾತನ್ನಷ್ಟೆ ಆಡುವುದಿಲ್ಲ; ಮಾತಿಗೆ ಸರಿಯಾಗಿ ಧನವನ್ನೂ ತ್ಯಾಗಮಾಡುತ್ತಾನೆ; ಹಣಕೊಟ್ಟರೂ ಕೊಳ್ಳುವವನನ್ನು ಕೀಳುಮಾಡಿ ಕೊಡುವುದಿಲ್ಲ; ಪೂಜಿಸಿ ಪುರಸ್ಕರಿಸಿ ಕೊಡುತ್ತಾನೆ; ಸತ್ಪಾತ್ರರನ್ನಲ್ಲದೆ ಪೂಜಿಸುವುದಿಲ್ಲ. ಇಲ್ಲಿಯೂ **ಏಕಾವಲೀ ಅಲಂಕಾರ** ಸ್ಪಷ್ಟ.

೧೩. ಸಂಯಮಿ-ಜಿತೇಂದ್ರಿಯ. ನಿಷ್ಪಕ್ಷಪಾತವಾಗಿ ಧರ್ಮಶಾಸ್ತ್ರದಂತೆ ದುರ್ಯೋಧನನು ನ್ಯಾಯವನ್ನು ನಿರ್ಣಯಿಸುತ್ತಾನೆ. ರಾಗ, ದ್ವೇಷ, ಲೋಭಗಳಿಗೆ ಆಸ್ಪದವೀಯುವುದಿಲ್ಲ.

೧೪. ದುರ್ಯೋಧನನು ಆತ್ಮರಕ್ಷಣೆಗೆ ಪೂರ್ಣವಾಗಿ ವ್ಯವಸ್ಥೆಮಾಡಿಕೊಂಡಿರುವುದರಿಂದ ಒಳಗಿರುವ ಅಂಜಿಕೆ ಹೊರಕ್ಕೆ ಕಾಣದಂತಿರುತ್ತಾನೆ. ಕಾರ್ಯವನ್ನು ಮಾಡಿದ ಸೇವಕರಿಗೆ ಅವನು ಅಪಾರವಾಗಿ ಬಹುಮಾನಮಾಡಿ ಅವರ ಭಕ್ತಿಯನ್ನು ಸ್ಥಿರಮಾಡಿಕೊಂಡಿದ್ದಾನೆ. ಕೃತವೇದಿ-ಕೃತಜ್ಞ.

೧೫. ನಾಲ್ಕು ನಯ-ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳು. ಒಂದೊಂದನ್ನೂ ಪ್ರತ್ಯೇಕವಾಗಿ ಪರೀಕ್ಷಿಸಿಯೇ ಯಥೋಚಿತವಾಗಿ ಪ್ರಯೋಗಿಸುತ್ತಾನೆಂದು ಮೊದಲೆರಡು ಸಾಲುಗಳ ತಾತ್ಪರ್ಯ. ನಾಲ್ಕು ಉಪಾಯಗಳಿಗೆ ಇಲ್ಲಿ ಚೇತನಧರ್ಮವನ್ನಾರೋಪಿಸಿದೆ. ಅದರಿಂದಲೇ ಅವುಗಳಿಗೆ ಒಂದೊಂದಕ್ಕೂ ಸರಿಯಾದ ಸತ್ಕಾರ ಸಿಕ್ಕಿತೆಂಬ ಸಂತೋಷ ಬಂದು ಸಂಪತ್ತುಗಳನ್ನು ಸುರಿಸುತ್ತಿವೆ ಎಂದು ಹೇಳಿದ್ದಾನೆ. 'ಸ್ಪರ್ಧೆಗೊಂಡು' ಎನ್ನುವಾಗ ಉತ್ಪ್ರೇಕ್ಷೆ ಅಲಂಕಾರ.

೧೬. ದುರ್ಯೋಧನನ ಐಶ್ವರ್ಯವನ್ನಿಲ್ಲಿ ವರ್ಣಿಸಿದೆ. ರಾಜರೆಲ್ಲ ಅವನಿಗೆ ಅಧೀನರು. ಅವರ ಕುದುರೆಗಳೂ, ತೇರುಗಳೂ ಕಿಕ್ಕಿರಿದಿವೆ ಅವನ

ಅರಮನೆಯ ಮುಂದೆ. ಅವರು ಕಾಣಿಕೆಯಿತ್ತ ಆನೆಗಳ ಮದೋದಕದಿಂದ ಅವನ ಆಸ್ಥಾನದ ನೆಲವೆಲ್ಲ ನೆನೆದಿದೆ. ಅದರ ಸೊಗಡು ಪರಿಮಳವನ್ನು 'ಸಪ್ತಪರ್ಣ' ಅಥವಾ ಏಳೆಲೆ ಬಾಳೆಗೆ ಹೋಲಿಸಿದೆ. ಐಶ್ವರ್ಯದ ಆಧಿಕ್ಯವನ್ನು ವರ್ಣಿಸಿರುವುದರಿಂದ ಉದಾತ್ತಾಲಂಕಾರ.

೧೭. ದುರ್ಯೋಧನನು ನೂರಾರು ಕೆರೆ ಕಾಲುವೆಗಳನ್ನು ಕಟ್ಟಿಸಿ ರೈತರ ಕೃಷಿಗೆ ನೆರವಾಗಿದ್ದಾನೆ. ಅವರು ಮಳೆಯನ್ನು ನೆಚ್ಚಿ ಕುಳ್ಳಿರುವ ಸ್ಥಿತಿ ತಪ್ಪಿದೆ. ಎಲ್ಲೆಲ್ಲೂ ಭೂಮಿ ಪೈರಾಗಿ ಶೋಭಿಸುತ್ತಿದೆ. ಈ ಸ್ಥಿತಿಯನ್ನು ಇಂದಿನ ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಯೊಡನೆ ಹೋಲಿಸಬಹುದಾಗಿದೆ. ಇಂದಾದರೂ ಸರಕಾರವು ತನ್ನ ಪಂಚವಾರ್ಷಿಕವೇ ವೊದಲಾದ ಯೋಜನೆಗಳಲ್ಲಿ ನೀರಿನ ಪೂರೈಕೆಗೆ ಹೆಚ್ಚಿನ ಮಹತ್ವವಿತ್ತಿದೆ.

೧೮. ವಸು-ಸಂಪತ್ತು ಮತ್ತು ಕುಬೇರ. 'ವಸುಸದೃಶ' ಎನ್ನುವಾಗ ಕುಬೇರನೆಂದರ್ಥಮಾಡಬೇಕು. ಇಲ್ಲಿ ಧರಣಿಯು ಸಂಪತ್ತನ್ನೆಲ್ಲ ಕರೆಯುವಳು ಎಂಬಾಗ ಕಾಮಧೇನುವೆಂಬರ್ಥವು ಗಮ್ಯವೆಂದರೆ ಅಲಂಕಾರವು 'ಸಮಾಸೋಕ್ತಿ' ಯೆನಿಸುತ್ತದೆ; ಅಥವಾ ಕಾಮಧೇನುವೂ ಧರಣಿಯೂ ಬೇರೆಬೇರೆಯಾದರೂ ಒಂದೇ ಎಂದಾರೋಪಿಸಿದೆಯೆಂದು ತಿಳಿದರೆ ಅಲಂಕಾರ 'ಅತಿಶಯೋಕ್ತಿ'.

೧೯. ಆಜಿ-ಯುದ್ಧ. ಜಸ-ಕೀರ್ತಿ. ಸೇವಕರಲ್ಲಿ ಪರಸ್ಪರ ಒಡಕುಗಳಿದ್ದರೂ ರಾಜನಿಗೆ ಹಿತವಿಲ್ಲ; ದುರಭಿಪ್ರಾಯದ ಕೂಟಗಳಿದ್ದರೂ ಲೇಸಲ್ಲ. ದುರ್ಯೋಧನನ ಆದರ್ಶ ರಾಜ್ಯದಲ್ಲಿ ಎರಡು ದೋಷಗಳೂ ಇರಲಿಲ್ಲ. 'ಬಲವುಳ್ಳ' ಮುಂತಾದ ವಿಶೇಷಣಗಳೆಲ್ಲವೂ ಕಡೆಯ ಸಾಲಿನಲ್ಲಿ ಬರುವ 'ಪ್ರಾಣವನ್ನು ಸಹ ತೆತ್ತು ಹಿತಗೈಯಲಿಹರು' ಎಂಬ ನಿರ್ಣಯಕ್ಕೆ ಕಾರಣಗಳನ್ನೊದಗಿಸುವುದರಿಂದ ಕಾವ್ಯಲಿಂಗಾಲಂಕಾರ. ವಿಶೇಷಣಗಳೆಲ್ಲ ಸಾಭಿಪ್ರಾಯವಾಗಿವೆಯಾದ್ದರಿಂದ ಪರಿಕರಾಲಂಕಾರದ ಸೊಬಗೂ ಉಂಟು.

೨೦. ದುರ್ಯೋಧನನ ಕಾರ್ಯಾರಂಭವು ಕಾಣುವುದಿಲ್ಲ; ಫಲಸಿದ್ಧಿ ಮಾತ್ರ ಕಾಣುತ್ತದೆ. ಫಲಸಿದ್ಧಿಯ ಮೇಲಿಂದ ಅವನು ಕಾರ್ಯಮಾಡಿರುವುದನ್ನು ಊಹಿಸಬೇಕಾಗಿದೆ. ರಹಸ್ಯವಾಗಿ ರಾಜಕಾರ್ಯ ಮಾಡು

ವುದರ ಮರ್ಮ ದುರ್ಯೋಧನನಿಗೆ ತಿಳಿದಿತ್ತೆಂದು ತಾತ್ಪರ್ಯ. ತನ್ನ ಚಾರರಿಂದಲೇ ಸಕಲ ರಾಜವೃತ್ತಾಂತವನ್ನೂ ಗೂಢವಾಗಿ ತಿಳಿಯುತ್ತಿದ್ದನು. ರಾಜನ ರಹಸ್ಯದ ಪರಿಯನ್ನು ವಿಧಾತನ ಮತಿಗೆ ಹೋಲಿಸಿರುವುದು ಸುಂದರವಾದ ಉಪಮಾಲಂಕಾರ.

೨೧. ಅವನ ಗುಣದಿಂದ ರಾಜರೆಲ್ಲ ವಶವರ್ತಿಗಳಾಗಿದ್ದಾರೆ; ಅವನು ತನ್ನ ಕೋಪತಾಪಗಳನ್ನಾಗಲಿ ಶಸ್ತ್ರಬಲವನ್ನಾಗಲಿ ಪ್ರದರ್ಶಿಸುವ ಪ್ರಸಂಗಕ್ಕೆ ಎಡೆಯಿಲ್ಲ. ಕಡೆಯ ಸಾಲಿನಲ್ಲಿ ಉಪಮಾಲಂಕಾರ ಸ್ಪಷ್ಟ.

೨೨. • ಸಿದ್ಧಶಾಸನ-ಯಾರ ಶಾಸನ ಅಥವಾ ಆಜ್ಞೆ ಅಪ್ರತಿಹತವೋ ಅವನು. ರಾಜಕಾರ್ಯವನ್ನು ಮುಗಿಸಿ ದುರ್ಯೋಧನನು ದೇವಕಾರ್ಯಗಳಲ್ಲಿಯೂ ತೊಡಗಿದ್ದಾನೆ.

೨೩. ಆಸಿಂಧು-ಸಮುದ್ರದಿಂದ ಹಿಡಿದು ಸಮುದ್ರದವರೆಗೆ ಹಬ್ಬಿರುವ, ಭೂವಲಯ-ಪೃಥ್ವೀಮಂಡಲ. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸಾಲಂಕಾರ. ಪ್ರಬಲರ ಹಗೆತನದ ಪರ್ಯವಸಾನ ಕೇಡೇ ಸರಿ ಎಂದು ಸಾಮಾನ್ಯತತ್ವವನ್ನು ಸಾರುತ್ತಿದ್ದಾನೆ ಭಾರವಿ.

೨೪. ಅದಟು-ಪರಾಕ್ರಮ. ದುರ್ಯೋಧನನಿಗೆ ಹೆಚ್ಚಿನ ಭಯ ಪಾರ್ಥನಿಂದಲೇ. ಹಾವಿಗೆ ಹೆಚ್ಚಿನ ಭಯ ಗರುಡನಿಂದ. ಭಾರವಿಯ ಸಂಸ್ಕೃತಮೂಲದಲ್ಲಿ ಪಾರ್ಥ, ಗರುಡ ಎರಡೂ ಅರ್ಥ ಬರುವ 'ಆಖಂಡಲಸೂನುವಿಕ್ರಮ' ಎಂಬ ಪ್ರಯೋಗವಿದೆ. ಕಡೆಯಲ್ಲಿ ಉಪಮಾಲಂಕಾರ ಸ್ಪಷ್ಟ.

೨೫. ಕಡೆಯ ಸಾಲಿನ ಸಾಮಾನ್ಯವಾಕ್ಯವು ಹಿಂದಿನ ವಾಕ್ಯಕ್ಕೆ ಸಮರ್ಥನೆಯನ್ನೀಯುವುದರಿಂದ ಅರ್ಥಾಂತರನ್ಯಾಸಾಲಂಕಾರ.

೨೬. ಅಲಂಕಾರದ ಚಮತ್ಕಾರವಿಲ್ಲದೆ ಕಥೆಯನ್ನು ಮುಂದುವರಿಸುವ ಇಂತಹ ಪದ್ಯಗಳು ಈ ಮಹಾಕಾವ್ಯದಲ್ಲಿ ಅತ್ಯಂತ ವಿರಳ.

೨೭. ಭಾರವಿ ಬರೆದಿರುವ ದ್ರೌಪದಿಯ ಭಾಷಣವು ಸಂಸ್ಕೃತ ಸಾಹಿತ್ಯದಲ್ಲೇ ಅತ್ಯುತ್ತಮವೆನಿಸುವ ಭಾಗಗಳಲ್ಲೊಂದು. ಅದರಲ್ಲಿ ಭಾವದ ಬೆಂಕಿಯನ್ನೂ ಆಕ್ರೋಶದ ಉರಿಯನ್ನೂ ಶಬ್ದದ ಕಿಡಿಯನ್ನೂ ಕಾಣಬಹುದು.

೨೮. ದ್ರೌಪದಿ ತನ್ನ ಭಾಷಣಕ್ಕೆ ತಕ್ಕ ಪೀಠಿಕೆಯನ್ನು ಕಲ್ಪಿಸುತ್ತಿದ್ದಾಳೆ. ಹೆಂಗಸಿನ ಮಾತೆಂದು ಉದಾಸೀನಮಾಡಬಾರದೆಂದು ಪ್ರಕಾರಾಂತರದಿಂದ ಸೂಚಿಸುತ್ತಿದ್ದಾಳೆ.

೨೯. ಸುತ್ರಾಮ–ಇಂದ್ರ. ಧರ್ಮಜನನ್ನು ಮದ್ದಾನೆಗೆ ಹೋಲಿಸಿ ಅವನ ಅವಿವೇಕವನ್ನು ಬಯಲಿಗೆಳೆಯುತ್ತಿದ್ದಾಳೆ. ಉಪಮಾಲಂಕಾರ. ಬಂದ ಲಕ್ಷ್ಮಿಯನ್ನು ಕೈಯಾರೆ ನೂಕುವವನು ಅವಿವೇಕಿಯೇ ಎಂದು ಅವಳ ಸಿದ್ಧಾಂತ.

೩೦. ರಾಜನೀತಿಯ ಸ್ವರೂಪವನ್ನಿಲ್ಲಿ ತಿಳಿಸುತ್ತಾಳೆ. ಕುಟಿಲರನ್ನು ಕುಟಿಲನೀತಿಯಿಂದಲೇ ಎದುರಿಸಬೇಕು. ವಿಷಕ್ಕೆ ವಿಷವೇ ಮದ್ದು. ಇಲ್ಲದೆ ಸಾಧುಗುಣಗಳನ್ನು ತೋರಿಸಿದರೆ ಸೋಲು ಸಿದ್ಧ. ಅದಕ್ಕೆ ಪೋಷಕವಾಗಿ ಸೊಗಸಾದ ಉಪಮೆಯನ್ನು ಕೊಟ್ಟಿದೆ.

೩೧. ಇಲ್ಲಿ ಕವಿ ರಾಜ್ಯಲಕ್ಷ್ಮಿಯನ್ನು ಪತಿವ್ರತೆಯಾದ ಪತ್ನಿಗೆ ಹೋಲಿಸಿರುವುದರಿಂದ ಉಪಮಾಲಂಕಾರ. ಅವಳನ್ನು ಕೈಬಿಡುವುದು ಅಭಿಮಾನಶಾಲಿಗೆ ತರವಲ್ಲ. ಮೂರನೆಯ ಸಾಲಿನ ವಿಶೇಷಣಗಳು ಲಕ್ಷ್ಮಿ, ಪತ್ನಿ, ಇಬ್ಬರಿಗೂ ಸಮಾನವಾಗಿ ಅನ್ವಯಿಸುತ್ತವೆ.

೩೨. ಒಂದರ ಮೇಲೊಂದು ಉಪಮೆಗಳು ದ್ರೌಪದಿಯ ಮಾತಿನ ಅರ್ಥಕ್ಕೆ ಕಾಂತಿಯನ್ನೀಯುತ್ತವೆ.

೩೩. ರಾಜನಿಗೆ ಸ್ಥಾನಕ್ಕೆ ತಕ್ಕಂತೆ ಕೋಪವೂ ಇರಬೇಕೆಂದಿಲ್ಲಿ ಸ್ಥಾಪಿಸುತ್ತಿದ್ದಾಳೆ–ದ್ರೌಪದಿ. ಕಡೆಯ ಎರಡು ಸಾಲುಗಳಲ್ಲಿ ರಸಿಕರು ಮೆಚ್ಚುವ ಲೋಕೋಕ್ತಿಯಿದೆ.

೩೪. ಧರ್ಮರಾಯನ ಮೃದುಸ್ವಭಾವವನ್ನು ಟೀಕಿಸಿದನಂತರ ಪಾಂಡವರ ಹಿಂದಿನ ವೈಭವದೊಡನೆ ಇಂದಿನ ದುರ್ಗತಿಯನ್ನು ಹೋಲಿಸಲು ಹೊರಡುತ್ತಾಳೆ. ಇಲ್ಲಿರುವ ವಿಷಮಾಲಂಕಾರವು ಯಾರ ಮನಸ್ಸನ್ನಾದರೂ ಸೆರೆ ಹಿಡಿಯುತ್ತದೆ.

೩೫. ವಾಸವ-ಇಂದ್ರ. ಉಪಮ-ಸದೃಶ. ಇಲ್ಲಿಯೂ ವಿಷಮಾಲಂಕಾರ.

೩೬. ಇಲ್ಲಿ ನಕುಲಸಹದೇವರ ಶೋಚ್ಯಾವಸ್ಥೆಯನ್ನು ವರ್ಣಿಸಿದೆ.

ಹಿಂದಿನಂತೆ ವಿಷಮಾಲಂಕಾರ.

೩೭. ಎರಡನೆಯ ಸಾಲಿನಲ್ಲಿ ಮರೆಯಲಾರದಂಥ ಅರ್ಥಾಂತರನ್ಯಾಸ ವಿದೆ. ಈಗ ದ್ರೌಪದಿ ಧರ್ಮರಾಯನ ಶೋಚ್ಯಾವಸ್ಥೆಯನ್ನು ವಿವರಿಸಲು ಹೊರಟಿದ್ದಾಳೆ.

೩೮. ಇಲ್ಲಿಂದ ೪೧ನೆ ಪದ್ಯದವರೆಗೂ ವಿಷಮಾಲಂಕಾರವು ಪ್ರಭಾವ ಶಾಲಿಯಾಗಿ ಪ್ರಯುಕ್ತವಾಗಿದೆ. ವಂದಿ–ಹೊಗಳುವ ಭಟ್ಟರು.

೩೯. ಯಶಸ್ಸು, ಕಾಯ, ಎರಡೂ ಒಂದೇ ಸಮವಾಗಿ ಬಡವಾಗಿದೆ ಯೆಂದು ಹೇಳುವಾಗ ಅಲಂಕಾರ ಸಹೋಕ್ತಿ.

೪೦. ನೃಪೆರ ಎಂದು ತಪ್ಪಾಗಿ ಅಚ್ಚಾಗಿದೆ. 'ನೃಪರ' ಎಂದೋದಿ ಕೊಳ್ಳಬೇಕು.

೪೧. ಪ್ರತಿಯೊಂದು ಮಾತಿನಲ್ಲಿಯೂ ದ್ರೌಪದಿ ಧರ್ಮರಾಯನನ್ನು ಕೆಣಕಿ ಕೆರಳಿಸುತ್ತಿರುವುದನ್ನು ಕಾಣಬಹುದು.

೪೨ ಶಾಂತಿಜಪವನ್ನು ಬಿಟ್ಟು ಉತ್ಸಾಹಶೀಲನಾಗಬೇಕೆಂದು ಇಲ್ಲಿ ಯುಧಿಷ್ಠಿರನನ್ನು ಹುರಿದುಂಬಿಸುತ್ತಿದ್ದಾಳೆ. ಮುನಿವೃತ್ತಿ ಕ್ಷತ್ರಿಯರಿಗೆ ಸಲ್ಲದು.

೪೩. ಪರಾಭವವನ್ನು ಪಡೆದ ಕ್ಷತ್ರಿಯನು ಸುಮ್ಮನಿರಲಾಗದು. ಅವನು ಪ್ರತಾಪದಿಂದ ಲೋಕಕ್ಕೆ ಮಾರ್ಗದರ್ಶನ ಮಾಡಬೇಕು.

೪೪. ಇಲ್ಲಿ ಧರ್ಮರಾಯನ ಎದೆಗೆ ನಾಟುವಂತೆ ವಾಗ್ಬಾಣಗಳಿಂದ ಅವನನ್ನು ದ್ರೌಪದಿ ಚುಚ್ಚುತ್ತಿದ್ದಾಳೆ.

೪೫. ಕಡೆಯ ಎರಡು ಸಾಲುಗಳಲ್ಲಿ ಅರ್ಥಾಂತರನ್ಯಾಸಾಲಂಕಾರ. ಸರ್ಗದ ಕಡೆಗೆ ಬರುವ ಪದ್ಯಗಳು ಬೇರೆ ಬೇರೆ ಛಂದಸ್ಸುಗಳಲ್ಲಿರುವುದು ಸಂಸ್ಕೃತ ಮಹಾಕಾವ್ಯದ ಸಂಪ್ರದಾಯ.

೪೬. ದ್ರೌಪದಿಯ ಹಾರೈಕೆಯಲ್ಲಿ ಉಪಮಾಲಂಕಾರದ ಸೌಂದರ್ಯ ವನ್ನೂ ಭಾರವಿ ಕವಿಯ 'ಮುದ್ರೆ' ಯಾದ 'ಲಕ್ಷ್ಮೀ' ಶಬ್ದದ ಪ್ರಯೋಗ ವನ್ನೂ ಗಮನಿಸಿ.

## ಎರಡನೆಯ ಸರ್ಗ

೧. ದ್ರೌಪದಿಯ ಮಾತುಗಳಿಗೆ ಶಾಸ್ತ್ರದ ಆಧಾರದಿಂದ ಭೀಮನು ಪುಷ್ಟಿಕೊಡುತ್ತಾನೆ. ಆದುದರಿಂದಲೇ ಅವನ ಮಾತು 'ಯುಕ್ತಿ ಯುಕ್ತ'. ಅವನ ಹೃದಯವೂ ಸಾಹಸವನ್ನು ಮೆಚ್ಚತಕ್ಕುದೇ ಆದ್ದರಿಂದ ಅದು 'ಊರ್ಜಿತಾರ್ಥ' ವುಳ್ಳದೂ ಆಗುತ್ತದೆ. ಈ ಸರ್ಗದಲ್ಲೆಲ್ಲ ರಾಜನೀತಿಯ ವಿವರಣೆಯೇ ಹೆಚ್ಚು.

೨. ಅಲಂಕಾರ ಅತಿಶಯೋಕ್ತಿ.

೩. ಪದ್ಯದ ಪೂರ್ವಾರ್ಧದಲ್ಲಿ ಉಪಮಾಲಂಕಾರ. ಅದನ್ನೇ ಮುಂದೆ ವಿಸ್ತರಿಸಿದೆ. ರಾಜನೀತಿಯನ್ನು ದುಸ್ತರವಾದ ನದೀಪ್ರವಾಹಕ್ಕೆ ಹೋಲಿಸಿದೆ; ಶಾಸ್ತ್ರವನ್ನು ಹಾಯುವ ಸಾಧನಕ್ಕೆ.

೪. ವಿಶೇಷಣಗಳು ದ್ರೌಪದಿಯ ನುಡಿಗೂ-ಔಷಧಕ್ಕೂ ಸಮಾನ ವಾಗಿ ಅನ್ವಯಿಸುತ್ತವೆ. ಉಪಮಾಲಂಕಾರ.

೫. ದ್ರೌಪದಿ ಹೆಂಗಸೆಂದು ಅವಳ ಮಾತನ್ನು ಕಡೆಗಣಿಸಲಾಗ ದೆಂದು ತಾತ್ಪರ್ಯ.

೬. ನ್ಯಾಯಶಾಸ್ತ್ರ, ವೇದಗಳು, ವಾರ್ತಾ, ಮತ್ತು ದಂಡನೀತಿ, ನಾಲ್ಕನ್ನೂ ಆಧಾರವಾದ ವಿದ್ಯೆಗಳೆಂದು ಪರಿಗಣಿಸಲಾಗಿದೆ. ಉಪಮಾ ಲಂಕಾರ. ಸಕಲವಿದ್ಯಾಪಾರಂಗತನು ಸಂದೇಹಗ್ರಸ್ತನಾಗಬಾರದು.

೭. ಕ್ಷತ್ರಿಯನಿಗೆ ಪೌರುಷದ ಪ್ರಾಧಾನ್ಯವನ್ನು ವಿವರಿಸಲು ಭೀಮ ಆರಂಭಿಸುತ್ತಾನೆ.

೮. ಪರ್ಯವಸಾನದಲ್ಲಿ ಕೇಡು ಎಂದರೆ ನಾಶ ಇರುವುದು 'ದುರಂತ.' ಅಭ್ಯುದಯಕ್ಕೆ ವಿರುದ್ಧ ಪದ 'ಕ್ಷಯ.' ಉದಯವೆಂದರೂ ಅಭ್ಯುದಯವೇ. ಇವು ಅರ್ಥಶಾಸ್ತ್ರದ ಪಾರಿಭಾಷಿಕ ಶಬ್ದಗಳು.

೯. ಪದ್ಯದ ಮೊದಲ ಸಾಲು ತಪ್ಪಾಗಿ ಅಚ್ಚಾಗಿದೆ. 'ಅಚಿರವಂತೆ ಪಿರಿಯದೆನಿಸಲರಿಕ್ಷಯದ ಯೋಗವು' ಎಂದು ತಿದ್ದಿಕೊಳ್ಳಿ. ರಾಜನು ತನ್ನ ಮತ್ತು ಶತ್ರುವಿನ ಬೆಂಬಲಗಳನ್ನು ತೂಗಿ ನೋಡಿ ಕಾರ್ಯವನ್ನು ಕೈಕೊಳ್ಳಲು ಅಥವಾ ಸುಮ್ಮನಿರಲು ನಿರ್ಣಯಿಸಬೇಕು.

೧೦. ಕೋಶದಂಡಗಳ ಸಂಪತ್ತಿನಿಂದ ರಾಜನಿಗೆ ಬರುವ ಪ್ರಭಾವ ಮತ್ತು ಪ್ರತಾಪಗಳಿಗೆ ಪ್ರಭುಶಕ್ತಿಯೆಂದು ಹೆಸರು. ಜನಬು ಬಯ್ಯುವ ರೆಂಬ ಭಯದಿಂದಲೋ ಎಂಬಂತೆ ಎನ್ನುವಾಗ ಉತ್ಪ್ರೇಕ್ಷಾಲಂಕಾರ ಸ್ಪಷ್ಟ.

೧೧. ಪರಿಕ್ಷೀಣನಾದವನು ಪ್ರಬಲನೊಡನೆ ಅಭಿಯೋಗ ಮಾಡುವುದು ಹೇಗೆನ್ನುವುದಕ್ಕೆ ಉತ್ತರವಿದು. ತೇಜವೆಂದರೆ ಪೌರುಷ. ವಿಶೇಷಣಗಳು ನೃಪನಿಗೂ ಚಂದ್ರನಿಗೂ ಸಮಾನವಾಗಿ ಅನ್ವಯಿಸುತ್ತವೆ. ಉಪಮಾಲಂಕಾರ.

೧೨. ಪ್ರಭುಶಕ್ತಿಯಿಲ್ಲದವನ ಉತ್ಸಾಹಕ್ಕೇನು ಉಪಯೋಗವೆಂಬುದನ್ನು ಹೇಳುತ್ತಾನೆ. 'ಪಂಚರೀತಿಯ ನಯ' ವೆಂದರೆ ಕಾರ್ಯಾರಂಭದ ಉಪಾಯ, ಪುರುಷದ್ರವ್ಯ ಸಂಪತ್ತು, ದೇಶಕಾಲವಿಭಾಗ, ವಿನಿಪಾತಪ್ರತೀಕಾರ ಮತ್ತು ಕಾರ್ಯಸಿದ್ಧಿ. 'ಲೋಕ' ವೆಂದರೆ ಕೃಷಿಯೇ ಮೊದಲಾದ ಕರ್ಮಗಳಲ್ಲಾಸಕ್ತವಾದ ಜನ. ಜನ ಹೇಗೆ ನಿಯತಿ ಅಥವಾ ದೈವದಿಂದುಂಟಾಗುವ ಮಳೆಗೆ ಅಧೀನವೋ ಹಾಗೆ. ಉಪಮಾಲಂಕಾರ.

೧೩. ಉತ್ಸಾಹವಿದ್ದರೂ ಅಸಹಾಯನಿಗೆ ಕಾರ್ಯಸಿದ್ಧಿ ಹೇಗೆಂದರೆ ಉತ್ತರ ಹೇಳುತ್ತಾನೆ. ಆತ್ಮ ಪೌರುಷಕ್ಕಿಂತ ಹೆಚ್ಚಿನ ಸಹಾಯಕರಿಲ್ಲ.

೧೪. ಪೌರುಷವಿಲ್ಲದವನ ಗತಿಯನ್ನು ವರ್ಣಿಸುತ್ತಾನೆ. ತೀವುದು —ತೀವುವುದು. ಛಂದಸ್ಸಿನ ಸೌಕರ್ಯಕ್ಕಾಗಿ ಒಂದಕ್ಷರ ಬಿಟ್ಟಿದೆ. ಆಯತಿ— ಪರ್ಯವಸಾನದಲ್ಲಿ ಬರುವ ಫಲ.

೧೫. ಆದ್ದರಿಂದ ಫಲಿತಾರ್ಥವೇನೆಂದು ಇಲ್ಲಿ ತಿಳಿಸುತ್ತಾನೆ.

೧೬. ಸಮಯವನ್ನು ಕಾಯುತ್ತಿದ್ದೇನೆ, ಆತುರವೇನು? ಎಂದರೆ ಅದಕ್ಕೆ ಉತ್ತರವಿದು.

೧೭. ಒಂದು ವೇಳೆ ದೈವಾತ್ ಅವನು ರಾಜ್ಯವನ್ನು ದಾನಮಾಡಿದರೂ ಅದು ನಮಗೆ ರುಚಿಸುವುದು ಹೇಗೆಂದು ವಿವರಿಸುತ್ತಾನೆ.

೧೮. ಸಾಮದಿಂದಾಗುವುದಕ್ಕೆ ಕ್ಷಾತ್ರವೇಕೆ? ಆಗ್ರಹವೇಕೆ? ಎಂಬುದಕ್ಕುತ್ತರವಿಲ್ಲಿದೆ. ಕಡೆಯ ಸಾಲುಗಳಲ್ಲಿ ಅರ್ಥಾಂತರನ್ಯಾಸಾಲಂಕಾರ.

೧೯. ಯುದ್ಧದಿಂದ ಪ್ರಾಣ ಹೋಗಬಹುದು; ಆದರೆ ಶಾಶ್ವತ ಕೀರ್ತಿ ಸಿಕ್ಕುತ್ತದೆ. ನಶ್ವರವಾದ್ದನ್ನು ಕೊಟ್ಟು ಶಾಶ್ವತವಾದ್ದನ್ನು ಪಡೆಯುವುದು

ಒಳ್ಳೆಯ ವಿನಿಮಯವಲ್ಲವೇ ? ಇದು ' ಪರಿವೃತ್ತಿ' ಯೆಂಬ ಅಲಂಕಾರ.

೨೧. ಪ್ರಾಣಕ್ಕಿಂತ ಮಾನ ಹೆಚ್ಚೆನ್ನುವುದುಂಟೇ ಎಂದರೆ ಹೇಳುತ್ತಾನೆ–ಇಲ್ಲಿಯೂ ೧೮ನೆಯ ಪದ್ಯದಂತೆ ಸಾಮಾನ್ಯವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥಿಸಿರುವುದರಿಂದ ಅರ್ಥಾಂತರನ್ಯಾಸಾಲಂಕಾರ.

೨೧. ಇಲ್ಲಿ ಪ್ರಯೋಜನದ ಪ್ರಶ್ನೆಯೇ ಬರಬೇಕಾಗಿಲ್ಲ ; ಮಹಾತ್ಮರ ಸ್ವಭಾವವೇ ಅದು ಎಂಬುದಕ್ಕೆ ಮತ್ತೊಂದು ಅರ್ಥಾಂತರನ್ಯಾಸವನ್ನು ಹೇಳುತ್ತಿದ್ದಾನೆ.

೨೨. ವಾದದ ನಿಗಮನ (Conclusion) ವನ್ನಿಲ್ಲಿ ಹೇಳುತ್ತಾನೆ.

೨೩. ನಮಗೆಂದೂ ಸೋಲಿನ ಅಂಜಿಕೆಯಿಲ್ಲವೆಂಬುದನ್ನು ವಿವರಿಸುತ್ತಾನೆ. ಬರ್ದಿಲಾಣ್ಮ–ಇಂದ್ರ. ನಾಲ್ಕು ಸೋದರರೂ ನಾಲ್ಕು ದಿಗ್ಗಜಗಳಂತೆ, ನಾಲ್ಕು ಸಾಗರಗಳಂತೆ ಎನ್ನುವಾಗ ಉತ್ತಮವಾದ ಉಪಮಾಲಂಕಾರವಿದೆ.

೨೪. ಇದೇ ಭೀಮನ ಹಾರೈಕೆ. ಇಲ್ಲಿ ವೈರವನ್ನು ಬೆಂಕಿಯೆಂದು ಭಾವಿಸಿ ಅದರ ಹೆಚ್ಚಳ, ಇಳಿತಗಳನ್ನು ವರ್ಣಿಸಿರುವುದರಿಂದ ಅತಿಶಯೋಕ್ತಿ ಅಲಂಕಾರ. ಜಯಲಕ್ಷ್ಮಿಯೊಲಿಯಲೆಂಬುದನ್ನು ಪ್ರಕಾರಾಂತರವಾಗಿ ವೈರಿನಾರಿಯರ ಕಣ್ಣೀರಿನ ವರ್ಣನೆಯಿಂದ ಧ್ವನಿಸುತ್ತಿದ್ದಾನೆಂದು ತಿಳಿದರೆ ಪರ್ಯಾಯೋಕ್ತವೆಂಬ ಅಲಂಕಾರ.

೨೫. ವಾಯುದೇವಪುತ್ರ–ಭೀಮ.

೨೬. ಅವನನ್ನು ಸಮಾಧಾನಮಾಡಲು ಹೊರಟು ಮೊದಲು ಭೀಮನನ್ನು ಧರ್ಮಜನು ಹೊಗಳುತ್ತಾನೆ. ಮಾತು ತಿಳಿಯಾಗಿರುವುದರಿಂದ ನಿನ್ನ ಮತಿಯೂ ತಿಳಿಯಾಗಿದೆ ಎಂಬುದಕ್ಕೆ ಕನ್ನಡಿಯ ಉಪಮಾನವನ್ನು ಕೊಡುತ್ತಾನೆ.

೨೭. ವ್ಯಾಕರಣದ ದೃಷ್ಟಿಯಿಂದ, ಇಂಪಿನ ದೃಷ್ಟಿಯಿಂದ, ತರ್ಕಶಾಸ್ತ್ರದ ದೃಷ್ಟಿಯಿಂದ, ಹೇಗೆ ನೋಡಿದರೂ ನಿನ್ನ ಮಾತು ನಿರ್ದುಷ್ಟವೂ ಮಹತ್ವಪೂರ್ಣವೂ ಆಗಿದೆಯೆಂದು ತಾತ್ಪರ್ಯ. ಇದರ ವಿಶೇಷವಿಮರ್ಶೆಗೆ ಪೀಠಿಕೆಯನ್ನೋದಿ. ಇದರ ಮತ್ತು ಮುಂದಿನ ಪದ್ಯಗಳ ಭಾವ ಭಾರವಿಯ ಕವಿತೆಗೂ ಚೆನ್ನಾಗಿ ಅನ್ವಯಿಸುವಂತಿದೆ.

೨೮. ಬಲ-ಪರಾಕ್ರಮದ ಪಕ್ಷ. ಯುಕ್ತಿ-ಸಾಧಕಪ್ರಮಾಣ. ಆಗಮ-

ಶಾಸ್ತ್ರ. ಆಶಯ—ಕ್ಷಾತ್ರವೆಂದು ತಾತ್ಪರ್ಯ.

೨೯. ಹಾಗಾದರೆ ಅಂತೆಯೇ ನಡೆಯಲು ಅಡ್ಡಿಯೇನು ಎನ್ನಬಹುದು. ಅದಕ್ಕೆ ಉತ್ತರವಿದು. ಮೊದಲನೆಯ ವಾಕ್ಯಕ್ಕೆ ಎರಡನೆಯದು ಕಾರಣವನ್ನೊದಗಿಸುತ್ತಿರುವುದರಿಂದ ಕಾವ್ಯಲಿಂಗಾಲಂಕಾರ.

೩೦. ವಸ್ತುವಿಶೇಷಗಳನ್ನೆಲ್ಲ ಅರಿಯದೆ ಪ್ರವರ್ತಿಸುವುದು ತಪ್ಪೆಂದು ಧರ್ಮರಾಯ ತೋರಿಸುತ್ತಾನೆ. ಅರ್ಥಾಂತರನ್ಯಾಸಾಲಂಕಾರ. ಕಾವ್ಯದ ಸೂಕ್ತಿರತ್ನಗಳಲ್ಲಿ ಇದಕ್ಕೆ ಮೊದಲನೆಯ ಸ್ಥಾನವೆನ್ನಬಹುದು.

೩೧. ಸಾಹಸಿಕನಿಗೂ ಅಪ್ಪಿ ತಪ್ಪಿ ಕಾರ್ಯಸಿದ್ಧಿ ಬರಬಹುದು; ಆದರೆ ವಿವೇಕಿಗೆ ಮಾತ್ರ ತಪ್ಪದೆ ಬಂದೇ ಬರುತ್ತೆಂಬುದು ವ್ಯತ್ಯಾಸ. ಉಪಮಾಲಂಕಾರ. ಸುಫಲಶಾಲಿ—ಬತ್ತದ ತೆನೆ. ಸುಫಲ—ಎಂಬಲ್ಲಿ ಫಲಕಾರಿ, ಬೆಳೆದ ಎಂಬ ಎರಡರ್ಥಗಳೂ ಇರುವುದರಿಂದ ಶ್ಲೇಷಾಲಂಕಾರವೂ ಇದೆ.

೩೨. ಮೊದಲ ಪದವು ಕಡೆಯದಕ್ಕೆ ವಿಶೇಷಣವಾಗುತ್ತ ಹೋಗುವುದರಿಂದ ಇಲ್ಲಿ ಏಕಾವಲೀ ಅಲಂಕಾರ. ನೀತಿಲಬ್ಧವಾದ ಸಿದ್ಧಿಯೇ ಸರ್ವೋತ್ತಮವೆಂದು ಇಲ್ಲಿ ಹೊಗಳಿದ್ದಾನೆ.

೩೩. ವಿವೇಕಕ್ಕೆ ಶಾಸ್ತ್ರವೇ ಆಲಂಬನವೆಂದಿಲ್ಲಿ ಸೂಚಿಸುತ್ತಾನೆ. ಉಪಮಾಲಂಕಾರ ಸ್ಪಷ್ಟ.

೩೪. ಹೀಗೆ ವಿವೇಕದಿಂದ ಕಾರ್ಯಪ್ರವೃತ್ತನಾದವನಿಗೆ ದೈವದಿಂದ ಅನರ್ಥವೊದಗಿದರೂ ಅಪರಾಧವಿಲ್ಲವೆಂದು ಹೇಳುತ್ತಾನೆ.

೩೫. ಕಾಲೋಚಿತವಾಗಿ ವಿವೇಚಿಸಬೇಕಾದ್ದನ್ನು ವಿವರಿಸುತ್ತಾನೆ. ಪೌರುಷವನ್ನು ಉಪಾಯಕ್ಕೆ ಹೊಂದಿಸಿಕೊಂಡು ಹೋಗಬೇಕು. ಅನಿಶ್ಚಿತ ಫಲವಾದುದನ್ನು ಮಾಡಹೊರಡಬಾರದು.

೩೬. ಮುಳಿಸಿನ ಏರು ಇಳಿದೇ ಇರಬೇಕೆಂಬುದನ್ನು ವಿವರಿಸುತ್ತಾನೆ. ಇದಕ್ಕೆ ಸೂರ್ಯನೇ ದೃಷ್ಟಾಂತ. ದೃಷ್ಟಾಂತಾಲಂಕಾರ.

೩೭. ಇದು ದುರ್ಬಲನಿಗೆ ಮಾತ್ರ ಅನ್ವಯಿಸುವ ನ್ಯಾಯವಲ್ಲ. ಸೂರ್ಯನಾದರೂ ಮುಳಿಸಿನಿಂದ ಕಾರ್ಯಸಿದ್ಧಿ ಪಡೆಯಲಾರನೆಂಬುದನ್ನು ತೋರಿಸುತ್ತಾನೆ. ಉಪಮಾಲಂಕಾರ. ಸುಧಾಸೂತಿ—ಚಂದ್ರ.

೩೮. ವಿವೇಚನೆಯೆಂದರೆ ಮುಖ್ಯವಾಗಿ ಮಾರ್ದವ ಯಾವಾಗ ಇರಬೇಕು, ತೀಕ್ಷ್ಣತೆ ಯಾವಾಗ ಇರಬೇಕು ಎಂಬುದನ್ನು ಕುರಿತದ್ದು. ಇದಕ್ಕೆ ಸೂರ್ಯನ ಉಪಮಾನವನ್ನು ಕೊಟ್ಟಿದೆ.

೩೯. ಹಾಗಲ್ಲದಿದ್ದರೆ ಅನರ್ಥ ತಪ್ಪದೆಂದು ವಿವರಿಸುತ್ತಾನೆ. ಪೂರ್ವೋತ್ತರ ವಾಕ್ಯಗಳಲ್ಲಿ ಕಾರ್ಯಕಾರಣಭಾವವಿರುವುದರಿಂದ ಕಾವ್ಯಲಿಂಗಾಲಂಕಾರ.

೪೦. ಕ್ರೋಧವು ಹೀನವಾದ್ದರಿಂದ ಅದು ಹೇಯ. ಇಲ್ಲಿ ಸಮುದ್ರವನ್ನು ನಿನಗಿಂತ ಮೇಲೆ ಮಾಡುವುದೇ? ಎನ್ನುವುದಕ್ಕೆ ಕೋಪದ ಕಾರಣವನ್ನು ಕೊಟ್ಟಿರುವುದರಿಂದ ಇದೂ ಕಾವ್ಯಲಿಂಗಾಲಂಕಾರಕ್ಕೇ ಉದಾಹರಣೆ.

೪೧. ಅರಿಷಡ್ವರ್ಗಗಳನ್ನು ಜಯಿಸದೆ ಸಂಪತ್ತು ಬಾರದೆಂದು ತಾತ್ಪರ್ಯ.

೪೨. ಕ್ರೋಧದಿಂದಾಗುವುದು ಕಾರ್ಯಹಾನಿಯೇ ಹೊರತು ಕಾರ್ಯಸಿದ್ಧಿಯಲ್ಲ.

೪೩. ಕ್ಷಮೆಯ ಎಂದರೆ ಶಾಂತಿಯ ಗುಣಗಳನ್ನು ಬಣ್ಣಿಸುತ್ತಾನೆ. ವ್ಯತಿರೇಕಾಲಂಕಾರ—ನಿರುಪಮವೆಂದು ಬಣ್ಣಿಸುವುದರಿಂದ.

೪೪. ಶಾಂತಿಯಿಂದ ಸುಮ್ಮನಿದ್ದುಬಿಟ್ಟರೆ ರಾಜರೆಲ್ಲ ಹಗೆಯ ವಶವರ್ತಿಗಳಾಗಬಹುದಲ್ಲವೇ? ಎಂಬ ಪ್ರಶ್ನೆಗೆ ಸಮಾಧಾನ ಹೇಳುತ್ತಾನೆ. ಕಾವ್ಯಲಿಂಗಾಲಂಕಾರ.

೪೫. ಸಹಜರು—ಸೋದರರು.

೪೬. ಇದು ಅಭಿಯೋಗಕ್ಕೆ ಕಾಲವಲ್ಲವೆಂಬುದನ್ನು ತೋರಿಸುತ್ತಾನೆ. ಇನ್ನೂ ಪ್ರತಿಜ್ಞೆಯ ಅವಧಿ ಕಳೆದಿಲ್ಲ. ಉಪಮಾಲಂಕಾರ. ಆಮೇಲಾದರೆ ವೃಷ್ಣಿಪಕ್ಷದವರೆಲ್ಲ ನಮ್ಮ ಪಕ್ಷಕ್ಕೆ ಸೇರುತ್ತಾರೆಂದು ತಾತ್ಪರ್ಯ.

೪೭. ವೃಷ್ಣಿಪಕ್ಷಕ್ಕೆ ಸೇರದ ಅರಸುಗಳನ್ನು ಕುರಿತೀಗ ಹೇಳುತ್ತಾನೆ. ಕಾವ್ಯಲಿಂಗಾಲಂಕಾರ.

೪೮. ದೂತನ ವರದಿಯನ್ನು ನಂಬಿದರೆ ದುರ್ಯೋಧನನು ಮದೋದ್ಧತನೆಂತು ಎಂದರೆ ಉತ್ತರ ಹೇಳುತ್ತಾನೆ. ಅವನ ಆ ಸಹಜಗುಣವು ಈಗ ತಗ್ಗಿದಂತಿದ್ದರೂ ಮುಂದೆ ಪ್ರಕಾಶಕ್ಕೆ ಬಂದೇ ಬರುತ್ತದೆ.

೪೯. ಮದದ ಅನರ್ಥಫಲಗಳ ವರ್ಣನೆ. ಹಿಂದಿನದು ಮುಂದಿನದಕ್ಕೆ

ಕಾರಣವಾದ್ದರಿಂದ ಕಾರಣಮಾಲಾಲಂಕಾರ.

೫೦. ಕಾರಣಮಾಲೆ ಹಿಂದಿನ ಪದ್ಯದಿಂದ ಇಲ್ಲಿಗೂ ಮುಂದುವರಿದಿದೆ. ಉಪಮಾಲಂಕಾರವೂ ಮೂರನೆಯ ಸಾಲಿನಲ್ಲಿ ಸ್ಪಷ್ಟ.

೫೧. ಒಳಒಡಕುಗಳಿಂದ ಸಾಧ್ಯವಾಗದುದೇ ಇಲ್ಲವೆನ್ನುವುದಕ್ಕೆ ಬೆಟ್ಟವನ್ನೇ ಸುಡುವ ಅಗ್ನಿಯ ದೃಷ್ಟಾಂತವನ್ನು ಕೊಡುತ್ತಾನೆ. ಅದು ಹುಟ್ಟುವುದು ಸಣ್ಣ ಮರದ ಕೊನೆಯಲ್ಲಿ. ದೃಷ್ಟಾಂತಾಲಂಕಾರ.

೫೨. ಶತ್ರು ದುರ್ವಿನೀತನಾದ್ದರಿಂದ ಅವನ ವೃದ್ಧಿಯನ್ನು ಉಪೇಕ್ಷಿಸೈದರೂ ತಪ್ಪಿಲ್ಲವೆಂದು ಹೇಳುತ್ತಾನೆ. ಅರ್ಥಾಂತರನ್ಯಾಸಾಲಂಕಾರ.

೫೩. ದುರ್ವಿನೀತನಾದರೂ ಹಗೆಯನ್ನು ಜಯಿಸುವುದು ಹೇಗೆಂದರೆ ಒಡಕುಗಳ ಪ್ರಭಾವದಿಂದ ಎಂದು ತೋರಿಸುತ್ತಾನೆ. ಉಪಮಾಲಂಕಾರ.

೫೪. 'ಕಾಮಿತಾರ್ಥವೇ ಕೈಗೆ ಬಂದಂತೆ' ಎಂಬಲ್ಲಿ ಉತ್ಪ್ರೇಕ್ಷಾಲಂಕಾರ.

೫೫. ವ್ಯಾಸರ ವರ್ಣನೆ. ಮೂರನೆಯ ಸಾಲಿನಲ್ಲಿ ವಿರೋಧಾಭಾಸಾಲಂಕಾರ. ಪಾಪವನ್ನು ಸುಡುವ ಶಕ್ತಿಯಿದ್ದರೂ ಕಣ್ಣಿಗೆ ತಂಪನ್ನೇ ಉಂಟುಮಾಡುತ್ತಿದ್ದಿತು ವ್ಯಾಸರ ಮೂರ್ತಿ.

೫೬. 'ಮೂರ್ತಿಗೊಂಡ ಪುಣ್ಯದಂತೆ' ಎಂಬುದು ಸುಂದರ ಉತ್ಪ್ರೇಕ್ಷೆ.

೫೭. ಉಪಮಾಲಂಕಾರದ ಸೊಬಗನ್ನು ಗಮನಿಸಿ.

೫೮. ಧರ್ಮರಾಯನ ವಿನಯಗುಣದ ವರ್ಣನೆ. ಉಪಮಾಲಂಕಾರ.

೫೯. ಚಂದ್ರನ ಸೊಬಗನ್ನು ತಳೆದನು ಎನ್ನುವುದು ನಿದರ್ಶನಾಲಂಕಾರ. ಒಬ್ಬರ ಸೊಬಗನ್ನೇ ಮತ್ತೊಬ್ಬರು ಪಡೆಯುವುದು ಅಸಂಭವವಾದ್ದರಿಂದ. ಸರ್ಗಾಂತ್ಯ ಪದ್ಯದಲ್ಲಿ ಬರುವ ಲಕ್ಷ್ಮೀಶಬ್ದವನ್ನು ಗಮನಿಸಿ.

## ಮೂರನೆಯ ಸರ್ಗ

೧. ವ್ಯಾಸರ ಪ್ರಭಾವವನ್ನು ಕವಿ ಬಣ್ಣಿಸುತ್ತಿದ್ದಾನೆ. ಇಲ್ಲಿರುವ ಶಬ್ದಚಿತ್ರವು ಎಷ್ಟು ಸೂಕ್ಷ್ಮವೂ ಸಮಗ್ರವೂ ಆಗಿದೆಯೆಂದರೆ ಚಿತ್ರಗಾರನೊಬ್ಬನೋದಿದರೆ ಅದನ್ನು ಬಣ್ಣದಲ್ಲಿ ಬರೆಯಬಹುದು. ಮೊದಲ ನಾಲ್ಕೂ ಪದ್ಯಗಳು ಸೇರಿ ಒಂದು ವಾಕ್ಯ. ಇದಕ್ಕೆ 'ಕಲಾಪಕ' ವೆನ್ನುತ್ತಾರೆ. ದೇಹದ ಕಾಂತಿ ಅವನ ಎತ್ತರವನ್ನು ಹೆಚ್ಚಿಸುವಂತಿತ್ತೆಂಬುದು ಉತ್ಪ್ರೇಕ್ಷೆ. ಕೆಂಜಡೆಯನ್ನು ಹಾಗೆಯೇ ಮಿಂಚಿಗೂ ಕಪ್ಪುಮೈಯನ್ನು ಮೋಡಕ್ಕೂ ಹೋಲಿಸುವುದು ಕವಿಯ ಕಲ್ಪನೆಯಲ್ಲಿ ಮಾತ್ರ ಸಾಧ್ಯವಾದ್ದರಿಂದ ಅಲಂಕಾರ ಉತ್ಪ್ರೇಕ್ಷೆ.

೨. ಹೊಸ ಜನಗಳು—ಪ್ರಥಮತಃ ನೋಡುತ್ತಿರುವ ಅಪರಿಚಿತರು. ಆಕೃತಿಯಲ್ಲಿಯೇ ಪ್ರೇಮರಸ ಸೂಸುವುದು ತಪೋಧನರ ವೈಶಿಷ್ಟ್ಯ. ತಪಸ್ವಿಗಳ ಆದರ್ಶವನ್ನು ಮನವಾರೆ ಬಣ್ಣಿಸದ ಸಂಸ್ಕೃತ ಕವಿಯೇ ಇಲ್ಲವೆನ್ನಬಹುದು. ಭಾಸ, ಕಾಳಿದಾಸ, ಬಾಣ, ಭವಭೂತಿ ಮುಂತಾದ ಎಲ್ಲ ಮಹಾಕವಿಗಳೂ ಈ ಆದರ್ಶಕ್ಕೆ ಮಾರುವೋಗಿರುವುದರಿಂದ ಇದೇ ಭಾರತಸಂಸ್ಕೃತಿಯ ತಿರುಳೆನ್ನಬಹುದು.

೩. ಕಡೆಯ ಸಾಲಿನಲ್ಲಿ ಬರುವ ಉತ್ಪ್ರೇಕ್ಷೆ ಹೃದಯಂಗಮವಾಗಿದೆ.

೪. ಶ್ರುತಿಗಳು—ವೇದಗಳು. ಅವನ್ನೆಲ್ಲ ಸಂಗ್ರಹಿಸಿದ ಕೀರ್ತಿ ವ್ಯಾಸನದೇ ಎಂದು ಸಂಪ್ರದಾಯ ಹೇಳುತ್ತದೆ.

೫. ಉಪಮಾಲಂಕಾರವನ್ನು ಗಮನಿಸಿ. ಮೊದಲು ಬರುವ ವಿಶೇಷಣಗಳೆಲ್ಲವೂ ಮುನಿದರ್ಶನ ಮತ್ತು ಮೋಡವಿಲ್ಲದ ಮಳೆಗಳೆರಡಕ್ಕೂ ಅನ್ವಯಿಸುತ್ತವೆ.

೬. ಅಲಂಕಾರ—ಪ್ರೇಯಸ್; ಪ್ರಿಯಕರವಾದ ಸ್ತೋತ್ರವಿರುವುದರಿಂದ.

೭. ಈ ಪ್ರೇಯೋಽಲಂಕಾರವೇ ಇಲ್ಲಿ ಮತ್ತು ಮುಂದಿನ ಶ್ಲೋಕಗಳಲ್ಲೂ ಮುಂದುವರಿದಿದೆ. ಉಪಮಾಲಂಕಾರವೂ ಸ್ಪಷ್ಟ.

೮. ಕಾರಣವಿದ್ದರೂ ಕಾರ್ಯವಿಲ್ಲವೆನ್ನುವುದರಿಂದ ವಿಶೇಷೋಕ್ತಿ

ಅಲಂಕಾರ. ಜೊನ್ನ–ಬೆಳುದಿಂಗಳು.

೯. ಧರ್ಮರಾಯನ ವಿನಯಸೌಜನ್ಯಗಳಿಗೆ ಇದು ದ್ಯೋತಕವಾಗಿದೆ. ಬಹಳ ಮರ್ಯಾದೆಯಿಂದ ಪರ್ಯಾಯೋಕ್ತಗಳನ್ನಾಡುತ್ತಾನೆ.

೧೦. ಮಾರ್ನುಡಿದನು–ಪ್ರತ್ಯುತ್ತರ ಕೊಟ್ಟನು.

೧೧. ವ್ಯಾಸರು ತಟಸ್ಥರಲ್ಲ, ಪಾಂಡವರ ಪಕ್ಷಪಾತಿಯೇ ಎಂಬುದನ್ನು ಇದೂ ಮುಂದಿನ ಪದ್ಯವೂ ತೋರಿಸುತ್ತದೆ. ಎರಡೂ ಸೇರಿ ಒಂದೇ ವಾಕ್ಯ ಅಥವಾ ಯುಗ್ಮ.

೧೨. ಅನುವಿಸು ಎಂದರೆ ಇಲ್ಲಿ ಅನುವರ್ತಿಸು ಅಥವಾ ಅನುಮೋದಿಸು ಎಂಬರ್ಥದಲ್ಲಿ ಪ್ರಯೋಗಿಸಿದೆ.

೧೩. ತೃಷ್ಣೆ–ದಾಹ, ಲೋಭ. ವಿಷಯ–ಭೋಗ. ಅಲಂಕಾರ–ಅರ್ಥಾಂತರನ್ಯಾಸ.

೧೪. ಶತ್ರುಪಕ್ಷ ಪತನೋನ್ಮುಖವಾಗಿದೆಯೆಂದು ಸೂಚಿಸುತ್ತಾನೆ. ಮತ್ತೆ ಕಡೆಯ ಸಾಲುಗಳಲ್ಲಿ ಅರ್ಥಾಂತರನ್ಯಾಸ.

೧೫. ಧರ್ಮಜನ ಭಾವೀಸಿದ್ಧಿಯನ್ನೀಗ ಸೂಚಿಸುತ್ತಾನೆ, ಅವನ ಸದ್ಗುಣಗಳ ಪ್ರಶಂಸೆಯ ಮೂಲಕ.

೧೬. ನಿನಗೆ ಹಗೆಗಳು ಬಯಸಿದ ಕೇಡೆಲ್ಲಾ ಅವರಿಗೇ ಮರಳುತ್ತಿದೆಯೆಂದು ತೋರಿಸುತ್ತಾನೆ.

೧೭. ಪರಾಕ್ರಮವಿಲ್ಲದೆ ವಿಜಯ ಸಿಕ್ಕದೆಂದೂ, ಆದರೆ ಪರಾಕ್ರಮದ ಪ್ರದರ್ಶನಕ್ಕೆ ಮುಂಚೆ ಅಸ್ತ್ರಗಳನ್ನು ಹೆಚ್ಚಿಸಿಕೊಳ್ಳಬೇಕೆಂದೂ ವ್ಯಾಸರ ಸಲಹೆ. (ಅರ್ಥಾಂತರನ್ಯಾಸಲಂಕಾರ) ಏಕೆಂದರೆ ಶತ್ರುಪಕ್ಷವು ಬಹಳ ಬಲಿಷ್ಠ. ಅದನ್ನೇ ಮುಂದೆ ವರ್ಣಿಸುತ್ತಾನೆ.

೧೮. ಜಮದಗ್ನಿಸುತ–ಪರಶುರಾಮ. ಶಿಷ್ಯ–ಭೀಷ್ಮ. ಅಂಬಿಕೆಯ ಸ್ವಯಂವರಕಾಲದಲ್ಲಿ ಈ ಯುದ್ಧ ನಡೆದು ಪರಶುರಾಮನು ಸೋಲುವ ಕಥೆ ಪ್ರಸಿದ್ಧ. ಗುಣ ಒಂದೇ ಆದರೂ ಬೇರೆ ಬೇರೆ ಪಾತ್ರಗಳಲ್ಲಿ ಪಾತ್ರಗಳ ವೈಶಿಷ್ಟ್ಯಗಳು ಗುಣಕ್ಕೂ ಬರುವುವು. ವಿದ್ಯೆ ಒಂದೇ ಆದರೂ ಬ್ರಾಹ್ಮಣನಾದ ಪರಶುರಾಮನಿಗಿಂತಲೂ ಕ್ಷತ್ರಿಯನಾದ ಭೀಷ್ಮನಲ್ಲಿ ಅದು ಹೆಚ್ಚು ಪ್ರಕಾಶಕ್ಕೆ ಬಂದಿತು.

೧೯. ಭೀಷ್ಮನೊಬ್ಬನ ಮಹತ್ವವನ್ನೇ ಮತ್ತೂ ಹೊಗಳುತ್ತಾನೆ. ಅನುವ–ಎದುರಿಸುವ. ಜವ–ಯಮ. ಬವರ–ಕಾಳೆಗ.

೨೦. ಇಲ್ಲಿ ದ್ರೋಣನ ಶೌರ್ಯದ ವರ್ಣನೆಯಿದೆ. ಅಲಂಕಾರ, ಉತ್ಪ್ರೇಕ್ಷೆ.

೨೧. ಇನ್ನು ಕರ್ಣನ ಪ್ರತಾಪ. ಅಲಂಕಾರ – ಅತಿಶಯೋಕ್ತಿ. ವೃತ್ಯು–ಯಮು.

೨೨. ಕಾಲೋಚಿತವಾದ ಕರ್ತವ್ಯವನ್ನು ವ್ಯಾಸರು ಹೇಳುತ್ತಾರೆ. ಕಪಿಕೇತನ–ಅರ್ಜುನ. ಇದೂ ಮುಂದಿನ ಪದ್ಯವೂ ಸೇರಿ ಯುಗ್ಮ.

೨೩. ಮಂತ್ರ–ಮಂತ್ರದ ಉಪದೇಶ. ಇಲ್ಲಿಗೆ ಈ ವ್ಯಾಸರ ಮಾತು ಮುಗಿಯುತ್ತದೆ.

೨೪. ಆಣತಿ–ಅಪ್ಪಣೆ. ಅರ್ಜುನನ ಭಕ್ತಿ ವರ್ಣಿತವಾಗಿದೆ.

೨೫. ಮಂತ್ರೋಪದೇಶದ ವರ್ಣನೆ. ಉಪಮಾಲಂಕಾರವು ಬಹಳ ಅರ್ಥಗರ್ಭಿತವೂ ಚಮತ್ಕಾರಮಯವೂ ಆಗಿದೆ.

೨೬. ಇಲ್ಲಿಯ ಉತ್ಪ್ರೇಕ್ಷೆಯಾದರೂ ಅಷ್ಟೇ ಔಚಿತ್ಯಪೂರ್ಣವಾಗಿದೆ. ಯೋಗಬಲದಿಂದ ಅರ್ಜುನನ ಅಜ್ಞಾನ ತೊಲಗಿ ತಟ್ಟನೆ ಕಣ್ಣನ್ನು ತೆರೆದಂತಾಯಿತು. ಜ್ಞಾನೋದಯವಾಗುವವರೆಗೆ ಕಣ್ಣಿದ್ದರೂ ಮನುಷ್ಯ ಕುರುಡನೇ ಎಂಬಭಿಪ್ರಾಯ ಬಹಳ ಚೆನ್ನಾಗಿ ಧ್ವನಿತವಾಗಿದೆ.

೨೭. ಮುಂದಿನ ಕರ್ತವ್ಯವನ್ನೂ ವ್ಯಾಸರು ಹೇಳುತ್ತಾರೆ. ಅನುವಿಸೆ-ನಿಯೋಜಿಸಲು ಎಂದು ಇಲ್ಲಿ ಅರ್ಥ.

೨೮. ಪರರು–ಶತ್ರುಗಳು.

೨೯. ತಪಸ್ಸಾಧನೆಗೆ ಸರಿಯಾದ ಕ್ಷೇತ್ರವನ್ನು ಸೂಚಿಸುತ್ತಾರೆ ಇಲ್ಲಿ. ಅವರ ಇಷ್ಟದಂತೆ ಒಬ್ಬ ಯಕ್ಷನೂ ಅಲ್ಲಿ ಆಗಲೇ ಬಂದಿದ್ದಾನೆ.

೩೦. ಯಕ್ಷನ ವರ್ಣನೆ. ಉತ್ಪ್ರೇಕ್ಷಾಲಂಕಾರ.

೩೧. ಅರ್ಥಾಂತರನ್ಯಾಸಾಲಂಕಾರ.

೩೨. ಇಲ್ಲಿ ತಮ ಎಂದರೆ ಶ್ಲೇಷೆಯಿಂದ 'ಕತ್ತಲು' ಮತ್ತು 'ಅಗಲಿಕೆಯ ದುಗುಡ' ಎಂಬ ಎರಡೂ ಅರ್ಥಗಳು. ಶ್ಲಿಷ್ಟೋಪಮಾಲಂಕಾರ.

೩೩. ಕ್ಷಣಕಾಲದ ಮೇಲೆ ವಿವೇಕದಿಂದ ದುಗುಡವನ್ನು ಮರೆತರು.

ಎಲ್ಲರೂ ಸಮವಾಗಿ ಹಂಚಿಕೊಂಡುದೂ ಅದರ ಭಾರ ಕಡಿಮೆಯಾಗಲು ಕಾರಣವೆಂದು ಕವಿ ಉತ್ಪ್ರೇಕ್ಷೆ ಮಾಡುತ್ತಾನೆ.

೩೪. ಪ್ರೇಮವು ಶೋಕವನ್ನು ಜಗ್ಗಿದರೂ ವಿವೇಕವು ಅದನ್ನು ಗೆದ್ದಿತೆಂದು ವಿವರಿಸುತ್ತಾನೆ.

೩೫. ಆದರೆ ದ್ರೌಪದಿಯ ಕಥೆಯೇ ಬೇರೆಯಾಯಿತು. ಅವಳ ದುಗುಡ ಅತಿಯಾಯಿತು. ಅದನ್ನೇ ಸುಂದರವಾದ ಉತ್ಪ್ರೇಕ್ಷೆಯಿಂದ ವರ್ಣಿಸಿದ್ದಾನೆ. ಕೃಷ್ಣೆಯ—ಎಂಬಲ್ಲಿ ಶ್ಲೇಷೆ. ದ್ರೌಪದಿಯನ್ನು ಮತ್ತು ಕೃಷ್ಣಪಕ್ಷದ ಎಂದೆರಡರ್ಥ.

೩೬. ಇಂಗಿತ—ಇಲ್ಲಿ ದುಗುಡವೆಂದಭಿಪ್ರಾಯ. ಕಣ್ಣೀರೊಸರುವ ನೋಟಕ್ಕೆ ಹಿಮಾಕುಲ ಕನ್ನೈದಿಲೆಯನ್ನು ಉಪಮಾನವಾಗಿ ಕೊಟ್ಟಿದ್ದಾನೆ.

೩೭. ಇಲ್ಲಿಯ ಅಲಂಕಾರದ ಚಮತ್ಕಾರ ಅತ್ಯಂತ ಹೃದಯಂಗಮವಾಗಿದೆ. ರಸ—ಭಾವ ಮತ್ತು ರುಚಿ. ಶ್ಲಿಷ್ಟೋಪಮೆಯೇ ಅಲಂಕಾರ.

೩೮. ಮೊದಲನೆಯ ಸಾಲಿನಲ್ಲಿ ಸ್ಪಷ್ಟವಾದ ಉಪಮಾಲಂಕಾರ.

೩೯. ಚಿಂತೆಯೇ ತಪಕ್ಕೆ ವೈರಿ, ಆದ್ದರಿಂದ ಅದಕ್ಕೆ ಆಸ್ಪದ ಕೊಡಬೇಡವೆಂದು ಪ್ರಾರ್ಥಿಸುತ್ತಿದ್ದಾಳೆ. ತೀರ್ವನ್ನಂ—ತೀರುವವರೆಗೂ.

೪೦. ತಪಸ್ಸಿನಿಂದ ಸರ್ವಾರ್ಥಗಳೂ ಸಿದ್ಧಿಸುತ್ತವೆಯಾದ್ದರಿಂದ ತಪಸ್ಸಿಗೆ ಪ್ರತಿಕೂಲವಾದ ವಿರಹದುಃಖಕ್ಕೆಡೆಯೀಯಬಾರದೆಂಬುದನ್ನೇ ಸಮರ್ಥಿಸಿದ್ದಾಳೆ. ದ್ರೌಪದಿಯ ಮಾತಿನಲ್ಲಿ ಭಾರತದ ಕ್ಷತ್ರಿಯ ವೀರಪತ್ನಿಯ ಆದರ್ಶವನ್ನು ನೋಡಬಹುದು.

೪೧. ಕೋಪವನ್ನು ಕೆರಳಿಸಿ ಆತನನ್ನೂ ತಪಸ್ಸಿನಲ್ಲಿ ನೆಲೆಗೊಳಿಸುವ ಉದ್ದೇಶದಿಂದ ವೈರಿಗಳಿಂದಾದ ಅಪಮಾನವನ್ನು ನಾಲ್ಕು ಪದ್ಯಗಳಿಂದ ಹೇಳುತ್ತಾಳೆ. ಅವು ನಾಲ್ಕೂ ಕೂಡಿ ಕಲಾಪಕ.

೪೨. ಉತ್ಪ್ರೇಕ್ಷಾಲಂಕಾರ.

೪೩. ಪೂರ್ಣೋಪಮಾಲಂಕಾರ.

೪೪. ಉಪಮಾಲಂಕಾರ.

೪೫. ಈಗ ಮತ್ತೆ ಮೂರು ಪದ್ಯಗಳಿಂದ ಪ್ರಕಾರಾಂತರವಾಗಿ ಅರ್ಜುನನ ಕೋಪವನ್ನುದ್ದೀಪಿಸುತ್ತಾಳೆ. ಉಪಮಾಲಂಕಾರ.

೪೬. ಮೊದಲು ಉತ್ಪ್ರೇಕ್ಷಾಲಂಕಾರ, ಆಮೇಲೆ ಉಪಮಾಲಂಕಾರ.

೪೭. ಅಂದಿನ ಪಾರ್ಥನೇ ನೀನಾಗಿದ್ದರೆ ಖಂಡಿತವಾಗಿಯೂ ನನಗೆ ಎಂದರೆ ನಿನ್ನ ಯಶಸ್ಸಿಗಾದ ಅಪಮಾನವನ್ನು ಮರೆಯುವುದಿಲ್ಲ. ಎಷ್ಟೇ ತಪಸ್ಸು ಕಷ್ಟವಾದರೂ ಸಿದ್ಧಿಗೆ ಮೊದಲು ಮರಳುವುದಿಲ್ಲ.

೪೮. 'ಕ್ಷತ' ಎಂದರೆ ಗಾಯವಾಗದಂತೆ ತ್ರಾಣ ಅಥವಾ ರಕ್ಷಣೆ ಮಾಡುವವನೇ 'ಕ್ಷತ್ರ' ಎಂಬ ಶಬ್ದದ ವ್ಯುತ್ಪತ್ತಿಸಿದ್ಧವಾದ ಅರ್ಥ. ಅಂತಹ ಕ್ಷತ್ರವಂಶಕ್ಕೆ ಸೇರಿದವನೇ ಕ್ಷತ್ರಿಯ. ಎಂದಮೇಲೆ ತ್ರಾಣಶಕ್ತಿಯಿಲ್ಲದವನು ಕ್ಷತ್ರಿಯನೆಂತಾದಾನು? ಹಾಗೆಯೇ ಕರ್ಮಗಳಲ್ಲಿ ಶಕ್ತವಾದುದು 'ಕಾರ್ಮುಕ' ವೆನ್ನಿಸುತ್ತದೆ, ಶಬ್ದದ ಮೂಲವನ್ನು ವಿಚಾರಿಸಿದರೆ. ಕರ್ಮವೇ ಇಲ್ಲದೆ 'ಕಾರ್ಮುಕ' ವಿರುವುದು ಸರಿಯಾದೀತೆ? ಹಾಗೆ ಅರ್ಥಹೀನವಾಗಿ ಹೊರುವುದು ಆ ಶಬ್ದಗಳಿಗೆ ಕೂಡ ಅಪಚಾರಮಾಡಿದಂತೆ. ಅಲಂಕಾರ ಉತ್ಪ್ರೇಕ್ಷೆ.

೪೯. ನೀನು ಸಾಹಸಮಾಡದಿದ್ದರೆ ಪತ್ನಿಯಾದ ನನ್ನಂತೆ ಆಗಲೇ ಕುಂದಿರುವ ನಿನ್ನ ಗುಣಗಳೂ ಸಾಯುವುವೆಂದು ವ್ಯಂಗ್ಯವಾಗಿ ಎಚ್ಚರಿಸುತ್ತಾಳೆ. ಉಪಮಾ ಮತ್ತು ಉತ್ಪ್ರೇಕ್ಷಾಲಂಕಾರಗಳೆರಡೂ ಇವೆ.

೫೦. ಇದು ನಿನ್ನಮೇಲೆ ಮಾತ್ರ ಬಿದ್ದ ಭಾರವೆಂದು ತೋರಿಸುತ್ತಾಳೆ. ಉಪಮಾಲಂಕಾರ.

೫೧. ಕ್ರಿಯಾಶೂರನ ಮೇಲ್ಮೆಯನ್ನು ಹೊಗಳಿದೆ. ಅವನೇ ನಿಜವಾಗಿಯೂ ಅದ್ವಿತೀಯನಾದ ಪುರುಷ ಅಥವಾ ಗಂಡು.

೫೨. ಇದೂ ಮುಂದಿನ ಪದ್ಯವೂ ಕೂಡಿ ಯುಗ್ಮ. ಇಲ್ಲಿ ಒಬ್ಬನೇ ಆದ ಅರ್ಜುನನು ಹೇಗಿರಬೇಕೆಂದು ಸೂಚಿಸುತ್ತಾಳೆ.

೫೩. ಅರ್ಥಾಂತರನ್ಯಾಸಾಂಲಕಾರ.

೫೪. ಮಾತನ್ನೂ ಮುಗಿಸುವಾಗ ಹೆಣ್ಣಿನ ಪ್ರೀತಿಯೆಲ್ಲ ಒಂದೇ ಮಾತಿನಲ್ಲಿ ಉಕ್ಕುವಂತೆ ಮುಗಿಸುತ್ತಾಳೆ.

೫೫. ಉಪಮಾಲಂಕಾರ. ದ್ರೌಪದಿಯ ನುಡಿಗಳ ಪರಿಣಾಮ ಆಗಲೇ ಕಂಡಿತು.

೫೬. ಭಾರವಿಯ ಕಾಲದಲ್ಲೇ ಆಭಿಚಾರಿಕವಾದ ಮಂತ್ರಗಳಲ್ಲಿದ್ದ ಶ್ರದ್ಧೆ

ಇದರಿಂದ ವ್ಯಕ್ತವಾಗುತ್ತದೆ.

೫೭. ಅರ್ಜುನನು ಆಯುಧ ಸನ್ನದ್ಧನಾದುದನ್ನೂ ಅವನ ಪ್ರಯಾಣವನ್ನೂ ಮೂರು ಶ್ಲೋಕಗಳ ಒಟ್ಟಾದ 'ವಿಶೇಷಕ' ದಿಂದ ವರ್ಣಿಸುತ್ತಾನೆ.

೫೮. ಉತ್ಪ್ರೇಕ್ಷಾಲಂಕಾರ.

೫೯. ಹೃದಯಂಗಳ ಸೆಳೆದನು ಎಂದರೆ ಸೂರೆಗೊಂಡನೆಂದು ತಾತ್ಪರ್ಯ.

೬೦. ಸರ್ಗಾಂತ್ಯದ ವೃತ್ತವೈವಿಧ್ಯವನ್ನೂ 'ಲಕ್ಷ್ಮೀ' ಮುದ್ರೆಯನ್ನೂ ಗಮನಿಸಿ. ಅಲಂಕಾರ ಸುಂದರವಾದ ಸಮಾಸೋಕ್ತಿ—ನಿಸರ್ಗಸಿದ್ಧವಾದ ಭೂಸಮುದ್ರಗಳ ಸಂಬಂಧವನ್ನೂ ಪ್ರಿಯಪ್ರೇಯಸಿಯರ ಆಲಿಂಗನವೆಂದೂ ಸೂಚಿಸಿರುವುದರಿಂದ ಪ್ರಿಯವನುಸುರುವ ತೆರದೆ ಎಂಬುದನ್ನು ಅತಿಶಯೋಕ್ತಿಯೆನ್ನಬಹುದು.

---

## ನಾಲ್ಕನೆಯ ಸರ್ಗ

೧. ಇಲ್ಲಿ ಮತ್ತು ಮುಂದಿನ ಸರ್ಗಗಳಲ್ಲಿ ಭಾರವಿಯ ವರ್ಣನಾ ವಿಲಾಸ ಯಾರನ್ನಾದರೂ ಮೆಚ್ಚಿಸುವಂತಿದೆ. ಹಿಂದಿನ ಕಾಲದಲ್ಲಿ ಪ್ರಯಾಣವೆಂದರೆ ಕಾಡು ಕಳೆದರೆ ಊರು, ಮತ್ತೆ ಕಾಡು, ಮತ್ತೆ ಊರು, ಕಾಲುದಾರಿ, ಬೆಟ್ಟ, ಗುಡ್ಡ—ಇದೇ ಅನುಭವಕ್ಕೆ ಬರುತ್ತಿದ್ದಿತು. ಊರಿನ ಹತ್ತಿರ ನಡೆದು ಬಂದಂತೆಲ್ಲ ಜನರ ವಸತಿಯ ಹೆಗ್ಗುರುತು, ದಾರಿಯ ಮಾಳದಿಂದ ಹಟ್ಟಿಗೆ ಹಿಂದಿರುಗುವ ದನಗಳೂ, ಪಕ್ಕದಲ್ಲಿ ಪೈರಿನ ಗದ್ದೆಗಳೂ ಕಾಣುತ್ತಿದ್ದವು. ಈ ದೃಶ್ಯಗಳನ್ನೆಲ್ಲ ಕವಿ ಯಥಾವತ್ತಾಗಿ ಬಣ್ಣಿಸಿರುವುದು ಬಹಳ ಮನೋಹರವಾಗಿದೆ. ಪ್ರಕೃತಿವರ್ಣನೆಯಲ್ಲಿ ಭಾರವಿಯ ಸೌಂದರ್ಯ ದೃಷ್ಟಿ ಮುಗಿಲಿನೆತ್ತರ ಬೆಳೆಯುತ್ತದೆ. ಅದನ್ನು ಈ ಶರತ್ಕಾಲದವರ್ಣನೆಯಲ್ಲಿ ನೋಡಬಹುದು. ಮೊದಲನೆಯ ಪದ್ಯದಲ್ಲಿ ಊರ ಹತ್ತಿರದ ನೆಲವನ್ನೆಲ್ಲ ಯುವತಿಯಾದ ಕಾಂತೆಗೆ ಹೋಲಿಸಿರುವುದರಿಂದ ಉಪಮಾಲಂಕಾರ. ಈ ಉಪಮಾನವನ್ನು ಕೊಡುವಾಗಲೂ ಕವಿಯ ಶೃಂಗಾರರಸಿಕತೆಯನ್ನು ಕಾಣ

ಬಹುದಾಗಿದೆ. ಅಲ್ಲದೆ ವಿಶೇಷಣಗಳನ್ನು ಶ್ಲೇಷೆಯಿಂದ ಎರಡು ಕಡೆಗೂ ಅನ್ವಯಿಸಿಕೊಳ್ಳಬಹುದು.

೨. ಶರದ–ಶರತ್ಕಾಲದ. ಬತ್ತದ ಗದ್ದೆಗಳು ಕಾಣುವುದು ಊರುಗಳ ಹತ್ತಿರದಲ್ಲಿ ಮಾತ್ರ. ಶರತ್ಕಾಲವೇ ಅರ್ಜುನನ್ನು ಕಾಣಲು ತಂದೊಪ್ಪಿಸಿದ ಕಾಣಿಕೆಗಳೋ ಎನ್ನುವಂತೆ ಬತ್ತದ ತೆನೆ ಮಾಗಿದ ಗದ್ದೆ, ಕೆಂದಾವರೆ ಕೊಳಗಳು ಕಂಡುವಂತೆ! 'ಕಾಣ್ಕೆಯೋ' ಎಂಬಂತೆ ಎಂದಿದ್ದರೆ ಉತ್ಪ್ರೇಕ್ಷೆ ಯಾಗುತ್ತಿತ್ತು. ಕಾಣ್ಕೆಯೇ ಎಂದಿರುವುದರಿಂದ ಪರಿಣಾಮಾಲಂಕಾರ.

೩. ಅಚೇತನವಸ್ತುಗಳಾದ ಕೊಳ, ಮೀನು ಮುಂತಾದುವುಗಳ ಲ್ಲಿಯೂ ಶೃಂಗಾರಚೇಷ್ಟೆಯೇ ಮುಂತಾದ ಚೇತನವ್ಯವಹಾರವನ್ನು ಆರೋಪಿಸುವುದು ಸಂಸ್ಕೃತ ಕವಿಗಳ ಪದ್ಧತಿ. ಕೊಳಕ್ಕೆ ತಾವರೆಗಳೇ ಕಣ್ಣು (ರೂಪಕಾಲಂಕಾರ); ತಾವರೆಯರಳಿದ್ದರೆ ಕುತೂಹಲದಿಂದ ಕಣ್ಣು ಅರಳಿದೆ ಯೆಂದು ಕವಿ ಉತ್ಪ್ರೇಕ್ಷಿಸುತ್ತಾನೆ. ಮೀನುಗಳು ಸುಳಿಯುತ್ತಿದ್ದರೆ ಕಾಂತೆಯ ನೋಟದಂತೆ ಇದೆ. ಪ್ರಕೃತಿಯೇ ಅರ್ಜುನನಿಗೆ ಕಾಂತೆ ಯಂತೆ ಕಣ್ಗಿಂಪನ್ನುಂಟುಮಾಡುತ್ತಿದ್ದಾಳೆ.

೪. ಗದ್ದೆಯ ತೆನೆಗಳು ತಾವರೆಕೊಳಗಳಲ್ಲಿ ಪ್ರತಿಬಿಂಬಿತವಾಗಿ ಸೌಂದರ್ಯವನ್ನು ಹೆಚ್ಚಿದೆ. ಇವೆರಡರ ಸಮಾಗಮವು ಅತ್ಯಂತ ಹರ್ಷಪ್ರದ ವಾದುದೆಂದು ಕವಿ ಅರ್ಥಾಂತರನ್ಯಾಸವನ್ನು ಕೊಡುತ್ತಾನೆ.

೫. ಈ ಪ್ರತಿಬಿಂಬದ ಫಲವಾಗಿ ಕಮಲಗಳು ನೆಲದ ಕಮಲವೇ ಇರಬಹುದೆಂಬ ಸಂದೇಹ ಮೂಡುತ್ತಿತ್ತು. ಆದರೆ ಸಂದೇಹ ಬಹಳ ಹೊತ್ತು ನಿಲ್ಲುತ್ತಿರಲಿಲ್ಲ. ಒಳಗಿನಿಂದ ಜಲಚರಗಳು ವೇಗವಾಗಿ ಹೊರಳಿ ದೊಡನೆ ನೀರು ಗುಳ್ಳೆಯೆದ್ದು ನೊರೆಗಟ್ಟುತ್ತಿತ್ತು, ತಾವರೆಯ ಎಸಳೂ ಮುರಿಯುತ್ತಿತ್ತು. ಇದನ್ನು ಕಂಡೊಡನೆ ಸಂದೇಹ ಪರಿಹಾರವಾಗುತ್ತಿತ್ತು. ಇಲ್ಲಿ ಸಂಶಯದಿಂದಾರಂಭವಾದರೂ ಕಡೆಗೆ ನಿಶ್ಚಯದಲ್ಲಿ ಪರ್ಯವಸಾನ ವಾಗುತ್ತದೆ. ಆದ್ದರಿಂದ ಸಂದೇಹಾಲಂಕಾರ.

೬. ಶರತ್ಕಾಲದಲ್ಲಿ ನದಿಯ ಪ್ರವಾಹವೆಲ್ಲ ಇಳಿದು ಪಾತ್ರ ಸಣ್ಣ ನಾಗುವುದು ಎಲ್ಲರಿಗೂ ಗೊತ್ತಿದೆ. ಇದನ್ನು ಕವಿ ಉತ್ಪ್ರೇಕ್ಷೆಮಾಡಿ ವರ್ಣಿಸುತ್ತಾನೆ. ತೊರೆಯ ಮಳಲಿನ ಮೇಲೆ ನೀರಿಳಿದ ಗುರುತನ್ನು

ನೋಡಿದರೆ ಯುವತಿಯರುಟ್ಟ ಬಿಳಿಯ ರೇಷ್ಮೆಸೀರೆಯ ಮಡಿಕೆಗಳ ನೆನಪು ಬರುತ್ತದೆ. 'ಕವಿ ಶೃಂಗಾರಿಯಾಗಿದ್ದರೆ ಲೋಕವೇ' ರಸಮಯ ವಾಗುತ್ತದೆ' ಎಂದು ಆನಂದವರ್ಧನನು ಹೇಳುವ ಮಾತಿಗೆ ಈ ವರ್ಣನೆ ಗಳೇ ಸಾಕ್ಷಿ.

೭. ಇದು ಮತ್ತು ಮುಂದಿನ ಎರಡು ಪದ್ಯಗಳು ಕೂಡಿ ಒಂದು ವಾಕ್ಯ ಅಥವಾ 'ವಿಶೇಷಕ.' ಈ ಭಾಗವು ಗದ್ದೆ ಕಾಯುವ ಹೆಣ್ಣನ್ನು ಬಣ್ಣಿಸುತ್ತದೆ. ಮೊದಲು ಅವಳ ಅಲಂಕಾರದ ವರ್ಣನೆ. ಹುಬ್ಬನ್ನು ತಿದ್ದಿ ನಡುವೆ ತಿಲಕದಂತೆ ಬಂದುಗೆ ಹೂವನ್ನು ಇಟ್ಟಿದ್ದಾಳೆ. ಅದಕ್ಕೆ ಕೇಸರ ಪುಷ್ಪದ ರಜಸ್ಸನ್ನು ಸೇರಿಸಿದ್ದಾಳೆ ಕೆಂಪು ಛಾಯೆ ಬರುವಂತೆ. ಆ ಕೆಂಪಿಗೂ ಸಹಜವಾಗಿ ತನ್ನ ತುಟಿಯಲ್ಲಿರುವ ಕೆಂಪಿಗೂ ಸಾಮ್ಯ ಬಂದಂತಾಗಿದೆ! ಗದ್ದೆ ಕಾಯುವವಳ ಚೆಲುವಿನ ಮಟ್ಟವನ್ನು ಇದರಿಂದ ಊಹಿಸಬಹುದು.

೮. ಸ್ತನಗಳ ಮೇಲೆ ಕಮಲದ ಪುಷ್ಪದೂಳಿಯನೆಲ್ಲ ಎರಚಿಕೊಳುತ್ತಿ ದ್ದಾಳೆ ಆ ಹೆಣ್ಣು. ಅದು ಬೆವರಿನಲ್ಲಿ ನೆನೆದರೆ ಅದರ ಚೆಲುವೇ ಹೆಚ್ಚುತ್ತ ದಂತೆ ಈ ಕೋಮಲೆಯ ಸಂಪರ್ಕದಿಂದ! ಹೆಣ್ಣು ಬಡವೆಯಾದರೂ ಸೌಂದರ್ಯದೃಷ್ಟಿಯಲ್ಲಿ ಬಡವೆಯಲ್ಲ.

೯. ಆಭರಣವು ಶರೀರದ ಶೋಭೆಯನ್ನು ಹೆಚ್ಚಿಸುವ ಬದಲು ಶರೀ ರವೇ ಆಭರಣಗಳ ಶೋಭೆಯನ್ನು ಹೆಚ್ಚಿಸುತ್ತದೆನ್ನುವುದು ಪ್ರತೀಪಾಲಂಕಾರ. ತೆನೆಯನ್ನು ಕಾಯುವ ಕನ್ಯೆ ಕಂಡೊಡನೆ ಶರತ್ಕಾಲವು ನಿಜವಾಗಿಯೂ ಅರ್ಜುನನಿಗೆ ಸಫಲವೆನಿಸಿತೆನ್ನುವಾಗಲೂ ಉತ್ಪ್ರೇಕ್ಷೆ ಗಮ್ಯವಾಗಿದೆ.

೧೦. ಗೋಗಣದ ಈ ನಿಸರ್ಗಸುಂದರ ವರ್ಣನೆ 'ಸ್ವಭಾವೋಕ್ತಿ' ಯೆಂಬ ಅಲಂಕಾರಕ್ಕೆ ನಿದರ್ಶನ. ಊರಿನ ಹತ್ತಿರ ಈ ನೋಟವಂತೂ ಅತ್ಯಂತ ಸಹಜ.

೧೧. ಗೋಗಳಂತೆಯೇ ಮದದಿಂದ ಕೊಬ್ಬಿರುವ ಗೂಳಿಯನ್ನಿಲ್ಲಿ ವರ್ಣಿಸುತ್ತಿದ್ದಾನೆ. ಕವಿಯ ಕಣ್ಣಿಗೆ ಅದು 'ದರ್ಪದ ಮೂರ್ತಿ' ಯಾಗಿ ಕಾಣುತ್ತದೆ. ಮತ್ತೊಂದು ಗೂಳಿಯೊಡನೆ ಸೆಣಸುವುದು, ಅಬ್ಬರಿಸುವುದು, ತೊರೆಯ ದಡವನ್ನು ಮುರಿಯುವುದು—ಇದೇ ಅದರ ಕೆಲಸ. ಮೊದಲ

ಮೂರು ಸಾಲುಗಳಲ್ಲಿ ಅಲಂಕಾರ–ಸ್ವಭಾವೋಕ್ತಿ; ಕಡೆಯ ಸಾಲಿನಲ್ಲಿ ಉತ್ಪ್ರೇಕ್ಷೆ.

೧೨. ಶರತ್ಕಾಲದ ನದಿಗಳ ಮಳಲನ್ನು ಸ್ತ್ರೀಯರ ಜಘನಕ್ಕೆ ಹೋಲಿಸುವುದು ಸಂಸ್ಕೃತ ಕವಿಗಳಲ್ಲಿ ವಾಡಿಕೆ.

೧೩. ಇಲ್ಲಿ ಗೊಲ್ಲರಿಗೆ ಕೊಟ್ಟಿರುವ ವಿಶೇಷಣ ಅತ್ಯಂತ ಅನುಭವ ಪೂರ್ಣವಾಗಿದೆ. ದನಗಳಲ್ಲಿರುವ ಆರ್ಜವ, ಸಾಧುತ್ವ, ಸೌಜನ್ಯ, ಪ್ರೀತಿ ಮುಂತಾದ ಒಳ್ಳೆಯ ಗುಣಗಳೆಲ್ಲವೂ ಗೊಲ್ಲರಲ್ಲಿಯೂ ಇವೆ. ಅವರಿಗೂ ಸಹ ವನವೇ ಮನೆ. ಅಲಂಕಾರ ಸ್ವಭಾವೋಕ್ತಿ.

೧೪. ಗೊಲ್ಲತಿಯರನ್ನು ನಾಲ್ಕು ಪದ್ಯಗಳಲ್ಲಿ ಕವಿ ವರ್ಣಿಸಿದ್ದಾನೆ. ನಾಲ್ಕು ಪದ್ಯಗಳು ಸೇರಿ ಒಂದು 'ಕಲಾಪಕ'. ನಾಲ್ಕನೆಯ ಪದ್ಯದ ಕಡೆಗೆ ಕ್ರಿಯಾಪದ ಬರುತ್ತದೆ. ಶ್ಲೇಷೆಯ ಚಮತ್ಕಾರದಿಂದ ಗೊಲ್ಲತಿಯರಿಗೂ ವಾರನಾರಿಯರಿಗೂ ಇಬ್ಬರಿಗೂ ಅನ್ವಯಿಸಿರುವಂತಹ ವಿಶೇಷಣಗಳನ್ನೇ ಕೊಡುತ್ತಾನೆ. ಗೊಲ್ಲತಿಯರು ಕೈಯಲ್ಲಿ ಕಡೆಗೋಲನ್ನು ಹಿಡಿದು ಮೊಸರು ಕಡೆಯುತ್ತಿದ್ದಾರೆ. ರೂಪಕಾಲಂಕಾರದಿಂದ ಅವರ ಮುಂಗುರುಳನ್ನೇ ದುಂಬಿಯೆಂದೂ ಸುಲಿಪಲ್ಗಳೇ ಕೇಸರವೆಂದೂ, ಕರ್ಣಕುಂಡಲದ ಕಾಂತಿಯೇ ಹೊಂಬಿಸಿಲೆಂದೂ, ಮುಖವೇ ಪದ್ಮವೆಂದೂ ರೂಪಿಸಿದ್ದಾನೆ. ಇಂತಹ ಸಂಪೂರ್ಣರೂಪಕಕ್ಕೆ 'ಸಮಸ್ತವಸ್ತುವಿಷಯರೂಪಕ' ವೆನ್ನುವರು.

೧೫. ನಡುಗುವ ತುಟಿಯನ್ನು ಗಾಳಿಯಲ್ಲಿ ಅಲ್ಲಾಡುವ ಬಳ್ಳಿಯ ಒಂದೇ ಎಲೆಗೆ ಕವಿ ಹೋಲಿಸಿದ್ದಾನೆ. ಉಪಮಾಲಂಕಾರ. ಕಡೆಯುವ ಹೆಣ್ಣಿನ ಪರಿಯನ್ನು ಸಹಜವಾಗಿ ಚಿತ್ರಿಸಿರುವುದರಿಂದ ಉತ್ತರಾರ್ಧದಲ್ಲಿ ಸ್ವಭಾವೋಕ್ತಿ.

೧೬. ಈ ಹೆಂಗಸರ ಮುಗ್ಧಸ್ವಭಾವ ಇಲ್ಲಿ ವರ್ಣಿತವಾಗಿದೆ. ತಾವು ಕಡೆಯುತ್ತಿರುವ ಗಡಿಗೆಯ ಸದ್ದನ್ನೇ ಮೋಡದ ಮೊಳಗೆಂದು ಭ್ರಮಿಸುತ್ತಾರೆ. ಈ ಭ್ರಾಂತಿಯಿಂದಲೇ ನವಿಲುಗಳು ಕುಣಿಯಲಾರಂಭಿಸುತ್ತವೆ. ಭ್ರಾಂತಿಮದಲಂಕಾರ.

೧೭. ನಾಟ್ಯವಾಡುವ ವಾರವನಿತೆಯರಿಗೂ ಕಡೆಯುವ ಗೊಲ್ಲತಿಯರಿಗೂ ಅಂಗಭಂಗಿಗಳಲ್ಲಿ ಸಾಮ್ಯವಿದೆ. ಈ ಮೇಲಿನ ನಾಲ್ಕುಪದ್ಯಗಳಲ್ಲಿಯೂ ಸ್ವಭಾವೋಕ್ತಿ ಮತ್ತು ಉಪಮೆಗಳು ಸಂಮಿಶ್ರವಾಗಿಯೇ ಇವೆ.

೧೮. ಮಳೆಗಾಲದ ಕೊಚ್ಚೆ ಹೆಚ್ಚಾದಾಗ, ನಡೆಯುವವನು ಕೊಚ್ಚೆಯನ್ನು ತಪ್ಪಿಸುವುದಕ್ಕಾಗಿ ಪ್ರವರ್ತಿಸುವುದರಿಂದ ಅವನ ದಾರಿ ಬಳಸಾಗುತ್ತದೆ. ಶರತ್ಕಾಲದಲ್ಲಿ ಯಾವ ಅಡ್ಡಿಯೂ ಇಲ್ಲದೆ ನೇರವಾದ ದಾರಿಯಲ್ಲಿ ಪ್ರಯಾಣಮಾಡಬಹುದು. ಗಾಡಿಗಳ ಚಕ್ರಗಳು ಗಟ್ಟಿಕೆಸರಿನ ಮೇಲೆ ಉರುಳಿದ್ದರೆ ಬೈತಲೆ ತಿದ್ದಿದಂತೆ ನೇರವಾಗಿದೆಯೆಂದು ವರ್ಣಿಸಿದ್ದಾನೆ. ಭಾರವಿಯ ಈ ಸೂಕ್ಷ್ಮಸಂವೇದನವು ಇತರ ಕವಿಗಳಲ್ಲಿ ದುರ್ಲಭ. ಕ್ರಿಯಾಪದಗಳಲ್ಲಿ ಚೇತನತ್ವಾರೋಪವಡಗಿದ್ದರೆ ಅವಕ್ಕೆ ಲಕ್ಷಣಾಪ್ರಯೋಗಗಳೆನ್ನುತ್ತಾರೆ. ದಾರಿ ನಡೆವವರ ಸಂಖ್ಯೆ ಏರಿರುವುದರಿಂದ ಪಯಣ ಹೊಸ ಹರ್ಷವನ್ನೀಯುತ್ತದೆ. ಅಲಂಕಾರ ಸ್ವಭಾವೋಕ್ತಿ.

೧೯. ಹಳ್ಳಿಯವರ ಹೆಗ್ಗುರುತು ಋಜುಸ್ವಭಾವ. ಅವರ ಬುದ್ಧಿಯೂ ಋಜು; ವೇಷವೂ ಋಜು; ಯಾವುದರಲ್ಲೂ ಹೆಚ್ಚಿನ ಆಡಂಬರವಿಲ್ಲ. ಅವರ ಮನೆಗಳೂ ಹಾಗೆಯೇ ಬಳ್ಳಿಹಬ್ಬಿರುವ ಗುಡಿಸಿಲುಗಳು. ಅದನ್ನು ನೋಡಿದರೆ ಅರ್ಜುನನಿಗೆ ಅವು ತಪಸ್ವಿಗಳ ಆಶ್ರಮವೆಂಬ ಭಾವನೆ ಬರುತ್ತದೆ. ಉಪಮಾಲಂಕಾರ ಮತ್ತು ಸ್ವಭಾವೋಕ್ತಿ.

೨೦. ಇಲ್ಲಿಯವರೆಗೂ ಕವಿ ಶರತ್ಕಾಲವರ್ಣನೆಯನ್ನು ಮಾಡಿದ್ದರೂ ತೃಪ್ತಿಯಾಗಲಿಲ್ಲವೋ ಎಂಬಂತೆ ಮತ್ತೆ ಯಕ್ಷನ ಬಾಯಿಂದಲೂ ಅದೇ ವರ್ಣನೆಯನ್ನು ಮುಂದುವರಿಸುತ್ತಾನೆ. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸಾಲಂಕಾರ.

೨೧. ಇಲ್ಲಿಯ ಶುಭಾಶಂಸನೆ ಬಹಳ ಔಚಿತ್ಯಪೂರ್ಣವಾಗಿದೆ. 'ವಿಜಯ' ಎಂಬ ಶಬ್ದದಲ್ಲಿ ಶ್ಲೇಷೆಯಿದೆ– ಅರ್ಜುನ ಮತ್ತು ಗೆಲವು ಎಂದು ಎರಡೂ ಅರ್ಥ.

೨೨. ಮಳೆಗಾಲದ ಸೊಬಗೇ ಬೇರೆ; ಶರತ್ಕಾಲದ ಸೊಬಗೇ ಬೇರೆ. ಹೊಸಗುಣಗಳು ಹಳೆಯದರ ಗುಣಗಳನ್ನು ಮರೆಸಿದುವೆಂದು ಕವಿ ವರ್ಣಿಸುತ್ತಾನೆ. ವಾಸ್ತವಾಲಂಕಾರ.

೨೩. ಪ್ರಕೃತಿಯ ಚೆಲುವಿನ ವರ್ಣನೆ. 'ಹಾರವು' ಎಂಬ ಒಂದೇ ಕ್ರಿಯಾಪದ ಎರಡು ಕರ್ತೃಪದಗಳಿಗೂ– ಬೆಳ್ಳಕ್ಕಿ ಮತ್ತು ಮೋಡ–ಸಮಾನವಾಗಿ ಅನ್ವಯಿಸುವುದರಿಂದ ಬರುವ ಸೌಂದರ್ಯ ದೀಪಕಾಲಂಕಾರ.

'ಸಹಜ ರಮ್ಯಕೆ ಬೇರೆ ಸಿಂಗರವೇತಕೆ' ಎಂಬುದು ಅರ್ಥಾಂತರನ್ಯಾಸ. ಪ್ರಕೃತಿ ಹೇಗಿದ್ದರೂ ಅದೇ ಒಂದು ಸೊಬಗು; ಏಕೆಂದರೆ ರಮಣೀಯತೆ ಅದರ ಸಹಜಗುಣ.

೨೪. ಕದಂಬಾನಿಲಗಳೆಂದರೆ ಈಚಲ ಕಂಪನ್ನು ಹೊತ್ತು ಬೀಸುವ ಗಾಳಿಗಳು. ಈಚಲ ಗಿಡಗಳಲ್ಲಿ ಹೂವರಳುವುದು ಮಳೆಗಾಲದಲ್ಲಾದ್ದರಿಂದ ಆ ಗಾಳಿಗಳ ಒಡೆಯನೆಂದರೆ ಮಳೆಗಾಲ ಅಥವಾ ವರ್ಷಋತು. ಪಯೋಧರ– ಮೋಡ, ಶ್ಲೇಷೆಯಿಂದ (ದಿಗ್ವಧುಗಳ) ಸ್ತನ. ಸೆಳೆಮಿಂಚನ್ನು ದಿಗ್ವಧುಗಳ ಚಿನ್ನದ ಡಾಂಬೆಂದು ರೂಪಿಸುತ್ತಿದ್ದಾನೆ. ಉದು ಕಳಚಿ ಹೋದರೂ ದಿಗ್ವಧುಗಳ (ವಧುಗಳಂತಿರುವ ದಿಕ್ಕುಗಳ) ಕೃಶತ್ವವೂ ರಮ್ಯವಾಗಿದೆ. ಇಲ್ಲಿ ರೂಪಕಾಲಂಕಾರ ಸ್ಪಷ್ಟ.

೨೫. ಕವಿಸಮಯಗಳ ಆಡಂಬರವಿಲ್ಲದೆ ಸ್ವಭಾವೋಕ್ತಿಯ ಸೊಬಗು ಈ ಸರ್ಗದುದ್ದಕ್ಕೂ ಆಕರ್ಷಣೀಯವಾಗಿದೆ.

ನವಿಲಿನ ಗಾನದ ಬಯಕೆಯ ಬದಲು ಈಗ ಹೊಸದಾಗಿ ಮತ್ತ ಹಂಸಗಳ ಇಂಚರದ ಅಪೇಕ್ಷೆಯುಂಟಾಗಿದೆ. ಅದರಿಂದ ಕವಿ ಹೇಳುವ ಅರ್ಥಾಂತರನ್ಯಾಸ ಹೃದಯಂಗಮವಾಗಿದೆ–ಪ್ರೀತಿಗೆ ಗುಣ ಕಾರಣವೇ ಹೊರತು ದೀರ್ಘಪರಿಚಯವಲ್ಲ.

೨೬. ತೆನೆಗಳ ಭಾರದಿಂದ ಭತ್ತಗಳು ಬಾಗಿರುವುದನ್ನು ಕವಿ ಉತ್ಪ್ರೇಕ್ಷೆಮಾಡುತ್ತಾನೆ- ಗದ್ದೆಯ ನೀರಲ್ಲರಳಿರುವ ಹೂಗಳ ಪರಿಮಳವನ್ನು ಮೂಸಲೋ ಎಂಬಂತೆ, ಎಂದು.

೨೭. ಇಲ್ಲಿಂದ ೩೦ನೇ ಪದ್ಯವೂ ಕೂಡಿ ಒಂದು ವಾಕ್ಯ ಅಥವಾ 'ಕಲಾಪಕ.' ಕರ್ತೃಕ್ರಿಯೆಗಳು ಕಡೆಗೆ ಬರುತ್ತವೆ.

ತಾವರೆಯೆಲೆಯ ಹಸಿರು, ಹೂವಿನ ಕೆಂಪು, ಭತ್ತದ ಹೊಂಬಣ್ಣ ಮೂರೂ ಕೂಡಿದ ಹರಿಯುವ ನೀರು, ಓಡುವ ಕಾಮನ ಬಿಲ್ಲೆಂದು ಕವಿ ಉತ್ಪ್ರೇಕ್ಷೆ ಮಾಡಿದ್ದಾನೆ.

೨೮. ಮಹಾವನವನ್ನೇ ಸುಂದರಿಯೆಂದು ರೂಪಿಸಿ ಅದನ್ನೇ ಒಂದೊಂದು ಅಂಶದಲ್ಲಿಯೂ ವಿಸ್ತರಿಸುತ್ತಿದ್ದಾನೆ ಕವಿ. ಹೂವಿನ ಧೂಳಿಯೇ ಬಿಳಿಯ ಕುಪ್ಪಸ. ಗಾಳಿ ಶೃಂಗಾರನಾಯಕ. ಅವನು ಅದನ್ನು ಎತ್ತಲು

ಹೊರಡುತ್ತಾನೆ. ನಾಯಿಕೆ ಬೇಗ ತಪ್ಪಿಸುತ್ತಾಳೆ. ನೀರ್ವೂಗಳೇ ಆಕೆ ಗಡಿಬಿಡಿಯಿಂದ ಬಿಟ್ಟ ಕಣ್ಣುಗಳು. ಪುಷ್ಪಗಳೇ ಮಂದಹಾಸ. ಹೀಗೆ ಸರ್ವಾಂಗಸುಂದರವಾದ ಈ ರೂಪಕವನ್ನು 'ಸಮಸ್ತ ವಸ್ತುವಿಷಯ' ವೆಂದು ತಿಳಿಯಬೇಕು.

೨೯. ಇದು ಆಕಾಶದ ಸ್ಥಿತಿ. ಮಿಂಚಿಲ್ಲ; ಬಿಸಿಲಿನ ಬಾಧೆಯೂ ಇಲ್ಲ, ಶೀತಲವೂ ಸುರಭಿಯೂ ಆದ ಗಾಳಿ ತುಂಬಿದೆ.

೩೦. ಮೇಲೆ ೨೭ನೇ ಪದ್ಯದಲ್ಲಿ ಹೇಳಿದಂಥ ನೀರನ್ನೂ, ೨೮ರಲ್ಲಿ ಹೇಳಿದ ವನವನಿತೆಯನ್ನೂ ೨೯ರಲ್ಲಿ ಹೇಳಿದ ಬಾನನ್ನೂ ಕುರಿತು ಬಿಳಿಯ ಹಂಸಗಳು ಸುಳಿಯುತ್ತಿವೆಯೆಂದು ಅನ್ವಯ ಮಾಡಿಕೊಳ್ಳಬೇಕು. ಶುಭ್ರ ವಾದ ದಿಕ್ಕುಗಳು ಪರಸ್ಪರ ಸಂಭಾಷಣೆ ಮಾಡುವಂತಿದೆಯೆಂದು ಆ ಹಂಸ ಧ್ವನಿಯನ್ನು ಕವಿ ಉತ್ಪ್ರೇಕ್ಷೆಮಾಡುತ್ತಾನೆ.

೩೧. ಮಾಳದಿಂದ ಹಟ್ಟಿಗೆ ಬರುತ್ತಿರುವ ತುರುವಿಂಡಿನ ವರ್ಣನೆ. ಹಾಲು ಸ್ರವಿಸುವ ಕೆಚ್ಚಲುಗಳು ಕರುಗಳಿಗೆ ತಾಯಿಯರು ತಂದ ಬಹುಮಾನ ವಸ್ತುಗಳಂತೆ ಎಂದು ಕವಿ ಉತ್ಪ್ರೇಕ್ಷೆಮಾಡುತ್ತಾನೆ.

೩೨. ಗೋವುಗಳ ವಿಷಯದಲ್ಲಿ ಭಾರತೀಯರಿಗಿರುವ ಶ್ರದ್ಧೆ ಇಲ್ಲಿ ಸುವ್ಯಕ್ತವಾಗಿದೆ. ಲೋಕಮೂಲವೆಂದೂ ಲೋಕಪಾವನವೆಂದೂ ಅವುಗಳನ್ನು ತಿಳಿದು ಪೂಜೆಮಾಡುತ್ತೇವೆ. ಇದಕ್ಕೆ ಕವಿ ಕೊಟ್ಟಿರುವ ಉಪಮಾನವೂ ಅಷ್ಟೇ ಸಾರ್ಥಕವಾಗಿದೆ. ಯಜ್ಞಗಳಿಂದಲೇ ಮಳೆಬೆಳೆಗಳೆಂದು ಹಿಂದೆ ತಿಳಿ ಯುತ್ತಿದ್ದರು. ಗೋವುಗಳು ಕರುಗಳನ್ನು ಕೂಡುವುದು ಆಹುತಿ ಬೆಂಕಿ ಯನ್ನು ಕೂಡಿದಂತೆ ಎನ್ನುತ್ತಾನೆ.

೩೩. ಗೊಲ್ಲತಿಯರ ಹಾಡು ನವಿಲಿನ ದನಿಗಿಂತಲೂ ಇಂಪಾಗಿದೆ; ಹಸಿದ ಜಿಂಕೆಗಳು ಕೂಡ ಮೇವನ್ನು ಬಿಟ್ಟು ಅದನ್ನಾಲಿಸುತ್ತಿವೆ. ಇದು ನಿಜವೆಂದರೆ ಸ್ವಭಾವೋಕ್ತಿ ಅಲಂಕಾರ; ಕಲ್ಪಿತವೆಂದರೆ ಅತಿಶಯೋಕ್ತಿ.

೩೪. ಬತ್ತದ ತೆನೆ ತಲೆಬಾಗಿದ್ದರೆ ಅದನ್ನು ಪ್ರೇಯಸಿಯಾದ ನಳಿನಿ ಯನ್ನೊಲಿಸಲು ತಲೆವಾಗಿರುವ ನಾಯಕನೆಂದು ಕವಿ ಆರೋಪಿಸಿದ್ದಾನೆ. ಆದರೂ ನಳಿನಿ ಒಲ್ಲದೆ ಕೋಪದಿಂದಿರುವಳಂತೆ! ಬತ್ತ, ತಾವರೆಗಳಿಗೆ ಆರೋಪಿತವಾದ ಪತಿ–ಪತ್ನೀಭಾವ ಬಹಳ ಸುಂದರವಾಗಿದೆ. ಸಮಾಸೋಕ್ತಿ

ಅಲಂಕಾರ. 'ಕಾಮತಾಪದಿಂದಲೇ' ಎಂಬ ಕಾರಣ ಕವಿ ಕಲ್ಪಿತವಾದುದರಿಂದ ಉತ್ಪ್ರೇಕ್ಷೆ.

೩೫. ಪರಿಮಳದ ಗಾಳಿ ದುಂಬಿಗಳನ್ನಾಕರ್ಷಿಸುತ್ತದೆ. ಎಲ್ಲ ಕಡೆಗಳಿಂದಲೂ ಪರಿಮಳ ಸೂಸುವುದರಿಂದ ಎತ್ತ ತಿರುಗಬೇಕೆಂದು ತಿಳಿಯದೆ ಅವು ಕಷ್ಟಪಡುತ್ತಿವೆ. ಅವುಗಳ ಸ್ಥಿತಿಯನ್ನು, ಸಿಕ್ಕಿಬಿದ್ದ ಕೇಡಿಗಳು ಭಯಭೀತರಾಗುವ ಸ್ಥಿತಿಗೆ ಕವಿ ಹೋಲಿಸಿದ್ದಾನೆ. ಉಪಮಾಲಂಕಾರ.

೩೬. 'ಸುಮುದ' ಎಂಬ ಅಚ್ಚಿನ ತಪ್ಪನ್ನು 'ಸಾಮದ' ಎಂದು ತಿದ್ದಿಕೊಳ್ಳಬೇಕು. ಗಿಳಿಗಳ ಬಳಗವನ್ನು ವರ್ಣಿಸುತ್ತಿದ್ದಾನೆ ಕವಿ. ಅವುಗಳ ಕೊಕ್ಕು ಕೆಂಪು ಕೊಕ್ಕಿನಿಂದ ಹೊರದೆನೆಗಳನ್ನು ಕಚ್ಚಿಕೊಂಡಿವೆ. ಮೈಬಣ್ಣ ಶಿರೀಷಪುಷ್ಪದಂತಿದೆ. ಈ ವರ್ಣಗಳೆಲ್ಲಾ ಮಿಶ್ರವಾಗಿ ಕಾಮನ ಬಿಲ್ಲಿನ ಸೊಬಗು ಬರುತ್ತದೆ. ಪ್ರಕೃತಿಯ ವರ್ಣಸೌಂದರ್ಯವನ್ನು ಸೂಕ್ಷ್ಮವಾಗಿ ನಿರೀಕ್ಷಿಸಬಲ್ಲ ಭಾರವಿಯ ದರ್ಶನ ಶ್ಲಾಘ್ಯವಾಗಿದೆ. ಅಲಂಕಾರ ಉಪಮೆ.

೩೭. ಪರ್ವತರಾಜಿ - ಹಿಮವತ್ಪರ್ವತ. ಮಂಜಿನಿಂದ ತುಂಬಿದ ಬೆಟ್ಟ ಬಿಳಿಯ ಮೋಡಗಳ ರಾಶಿಯಂತೆ ಕಾಣುತ್ತದೆ. ಯೋಗ್ಯವಾದ ಉತ್ಪ್ರೇಕ್ಷೆ.

೩೮. ಬೆಟ್ಟದ ವರ್ಣವೈವಿಧ್ಯದ ವರ್ಣನೆಯಿಲ್ಲಿ ಬಂದಿದೆ. ಮರಗಳ ಕಪ್ಪು, ಹಿಮಗಳ ಬಿಳುಪು, ಎರಡೂ ಕೂಡಿ ನೀಲಾಂಬರನಾದ ಬಲರಾಮನನ್ನೂ ನೆನೆಸಿದುವು. 'ಮಧ್ಯದ' ಎಂಬ ಅಚ್ಚಿನ ತಪ್ಪನ್ನು 'ಮದ್ಯದ' ಎಂದು ತಿದ್ದಿಗೊಳ್ಳಬೇಕು. ಬಲರಾಮನು ಮದ್ಯಪ್ರಿಯನೆಂದು ಪ್ರಸಿದ್ಧ. ಆದರೆ ಕೆಂಪು ಇಲ್ಲಿ ಅಪ್ರಸಕ್ತವಾದ್ದರಿಂದ, ಮದ್ಯದ 'ರಾಗವಿಳಿಯಲು' ಎಂದು ವಿಶೇಷಿಸಿದೆ. ಇದು ಸ್ಮರಣಾಲಂಕಾರ. ಸರ್ಗಾಂತ್ಯದ ಲಕ್ಷ್ಮೀಪದ ಪ್ರಯೋಗವನ್ನು ಗಮನಿಸಿ.

## ಐದನೆಯ ಸರ್ಗ

ಶರತ್ಕಾಲದ ವರ್ಣನೆಯಾದ ಮೇಲೆ ಕವಿ ಪರ್ವತವರ್ಣನೆಗೆ ತಿರುಗುತ್ತಿದ್ದಾನೆ. ಇಲ್ಲಿಯ ಕಲ್ಪನಾವೈಭವವೂ ವರ್ಣನಾಚಮತ್ಕಾರವೂ ಯಾರನ್ನಾದರೂ ತಲೆದೂಗಿಸುತ್ತವೆ. ಹಿಂದಿನ ಸರ್ಗದಲ್ಲಿ ಸ್ವಭಾವೋಕ್ತಿಯ ಸೊಬಗು ಹೃದ್ಯವಾಗಿರುವಂತೆ ಇಲ್ಲಿಯ ಉತ್ಪ್ರೇಕ್ಷೆ ಅತಿಶಯೋಕ್ತಿಗಳು ಪೌರಾಣಿಕ ವಿಶ್ವವನ್ನೂ ವಿಷಯೀಕರಿಸಿ ಮನಸ್ಸಿಗೆ ಸಾಕಾರ ಭವ್ಯತೆಯ ಸಾಕ್ಷಾತ್ಕಾರವಾಗುವಂತೆ ಮಾಡುತ್ತವೆ. ಮೊದಲ ಹದಿನೈದು ಪದ್ಯಗಳೂ ಕೂಡಿ ಒಂದೇ 'ಕುಲಕ' ಅಥವಾ ದೀರ್ಘವಾಕ್ಯ.

೧. ಪೊನ್ನಿನ ಬೆಟ್ಟ—ಮೇರುಪರ್ವತ. ದಿಕ್ಕಡೆ—ದಿಕ್ಕುಗಳ ಕಡೆ. ಮೊದಲು ಮೂರು ಸಾಲುಗಳಲ್ಲೂ ಮೂರು ಉತ್ಪ್ರೇಕ್ಷೆಗಳಿವೆ. ಇವುಗಳಿಂದ ಹಿಮಾಚಲದ ಅನ್ಯಾದೃಶವಾದ ಔನ್ನತ್ಯ ಹೇಗೆ ಸೂಚಿತವಾಗುವುದೆಂಬುದು ಮನನೀಯ.

೨. ಕತ್ತಲೆಬಿಸಿಲೆರಡಕ್ಕೂ ಏಕಕಾಲದಲ್ಲಿ ಆಶ್ರಯವಾದ ಹಿಮಾಚಲಕ್ಕೆ ಇಲ್ಲಿ ಗಜಚರ್ಮಾಂಬರನಾದ ಪರಶಿವನ ಉಪಮಾನವನ್ನು ಕವಿ ಕೊಡುತ್ತಿದ್ದಾನೆ—ಶಿವನ ಅಟ್ಟಹಾಸದಿಂದ ಮುಂದುಗಡೆ ಬೆಳಕು ಹೊಳೆಯುತ್ತಿದ್ದರೂ ಗಜಚರ್ಮದ ಕಪ್ಪು ಹಿಂದುಗಡೆ ಉಳಿದೇ ಇರುವುದರಿಂದ. ಆದರೆ ಕವಿಯ ಆಶಯ ಇಷ್ಟರಲ್ಲಿ ಗತಾರ್ಥವಾಗುವುದಿಲ್ಲ. ಸೂರ್ಯನ ಬಿಸಿಲು ಎಷ್ಟು ಬಂದರೂ ಅಲ್ಲಿಯ ಕತ್ತಲೆ ನಾಶವಾಗದೆ ಉಳಿದೇ ಇರುತ್ತದೆಯೆನ್ನುವುದರಿಂದ ಬೆಟ್ಟದ ವಿಸ್ತಾರವು ಎಷ್ಟು ದೊಡ್ಡದಾಗಿದೆಯೆಂಬುದನ್ನು ವಾಚಕರು ಊಹಿಸಿಕೊಳ್ಳಬೇಕೆಂದು ಕವಿಯ ವಿವಕ್ಷೆ. ಆದ್ದರಿಂದ ಅಲಂಕಾರ ಉಪಮೆಯಲ್ಲ ; ಅತಿಶಯೋಕ್ತಿ.

೩. ಭೂಲೋಕ, ಅಂತರಿಕ್ಷ, ಸ್ವರ್ಗಲೋಕ—ಈ ಮೂರು ಲೋಕದ ನಿವಾಸಿಗಳಿಗೂ ಅದು ನೆಲೆಯೆನ್ನುವಾಗಲೂ ಬೆಟ್ಟದ ಔನ್ನತ್ಯವೇ ವ್ಯಂಗ್ಯವಾಗುತ್ತದೆ, ಒಬ್ಬರನ್ನೊಬ್ಬರು ನೋಡುವಂತಿಲ್ಲವೆಂದಿರುವುದರಿಂದ ಶಂಭುವೇ ತನ್ನ ತ್ರೈಲೋಕ್ಯಾಧಿಪತ್ಯಕ್ಕೆ ಯೋಗ್ಯನಾದ ಪ್ರತಿನಿಧಿಯೊಬ್ಬನನು ಸೃಷ್ಟಿಸಿರುವಂತಿದೆಯೆಂಬುದು ಭವ್ಯವಾದ ಉತ್ಪ್ರೇಕ್ಷೆ.

೪. ಹಿಮವತ್ಪರ್ವತದ ಬಿಳುಪು ಆದಿಶೇಷನಂತೆ; ಅದರ ಹೊಂಬಣ್ಣದ ಶಿಖರದ ತುದಿಗಳು ಮಿಂಚುಗಳಿಂದ ಕೂಡಿದ ಶರನ್ಮೇಘದ ಬಿಳುಪನ್ನೂ ಹಾಸ್ಯಮಾಡುವುವು. ಎರಡೂ ಉಪಮಾಲಂಕಾರಗಳು. ಎರಡನೆಯದು ಗಮ್ಯೋಪಮೆ.

೫. ಅಲ್ಲಿಯ ನೆಲಗಳೇ ಪುರಗಳಂತಿವೆಯೆಂಬ ಉಪಮಾಲಂಕಾರ ವನ್ನು ಅಂಶಾಂಶಗಳ ಸೂಕ್ಷ್ಮಸಾದೃಶ್ಯಗಳ ಮೂಲಕ ಪುಷ್ಟೀಕರಿಸಲಾಗಿದೆ. ರತ್ನದ ಕಿರಣಗಳೇ ಚೀನಾಂಶುಕಗಳಂತೆ; ವಿಹಾರೋಚಿತವಾದ ಲತಾ ಕುಂಜಗಳೇ ಕ್ರೀಡಾಗೃಹಗಳು; ಶಿಲಾಮಧ್ಯಗಳೇ ಗೋಪುರಗಳು. ಪುಷ್ಪ ವನಗಳಿಗಂತೂ ಲೆಕ್ಕವೇ ಇಲ್ಲ. ಇಲ್ಲಿ ರೂಪಕಾಲಂಕಾರ ಆದಿಯಲ್ಲಿ ಸ್ಪಷ್ಟ.

೬. ಮಳೆಯನ್ನೆಲ್ಲ ಸುರಿಸಿಯಾದ ಮೇಲೆ ಬೆಳ್ಮುಗಿಲು ಬೆಟ್ಟದ ತಪ್ಪಲಿ ನಲ್ಲಿದ್ದರೆ ಬೆಟ್ಟಕ್ಕೆ ರೆಕ್ಕೆಗಳು ಮೂಡಿದಂತಿವೆಯೆಂಬುದು ಮನೋಹರವಾದ ಉತ್ಪ್ರೇಕ್ಷೆ.

೭. ಆನೆಗಳು ಬಂದು ನದಿಗಳಲ್ಲಿಳಿಯುವಾಗ ಸೋಪಾನಗಳನ್ನೆಲ್ಲ ಮೆಟ್ಟಿ ದಂತಗಳಿಂದ ಮುರಿದು ಎಲ್ಲರನ್ನೂ ವಿಷಮವಾಗುವಂತೆ ಮಾಡಿವೆ. ಅವುಗಳಲ್ಲಿ ವನಜ ಅಥವಾ ತಾವರೆಗಳಿವೆ. ಪರ್ವತನದಿಗಳಾದ್ದರಿಂದ ವೇಗವಾಗಿ ಹರಿಯುತ್ತವೆ. ಶಬ್ದಾಲಂಕಾರವಾದ ಅನುಪ್ರಾಸಯಮಕ ಗಳಿಗಿಲ್ಲಿ ಪ್ರಾಶಸ್ತ್ಯ ಬಂದು ಅರ್ಥಚಮತ್ಕಾರ ಹಿಂದೆ ಬಿದ್ದಿದೆ. ಭಾರವಿಯ ಮೂಲದಲ್ಲಿ ಶಬ್ದಾಲಂಕಾರ ಮತ್ತೂ ಕೋರೈಸುವಂತಿದೆ.

೮. ದಾಸಾಳ – ದಾಸವಾಳ. ಕೆಂಪಿನ ಕಲ್ಲು – ಪದ್ಮರಾಗವೆಂಬ ವಜ್ರ. ಪದ್ಮರಾಗಗಳ ಕಾಂತಿ ಅರಳಿದ ದಾಸಳದಂತಿತ್ತೆನ್ನುವುದು ಉಪಮೆಯಾದರೆ ಪದ್ಮರಾಗಗಳು ಅಷ್ಟುರಮಟ್ಟಿಗೆ ಬೆಟ್ಟದಲ್ಲಿ ಹೊಳೆಯುತ್ತಿ ದ್ದುವೆನ್ನುವುದೂ ಸಾನುಗಳ ಗೋಡೆಗಳು ಚಿನ್ನದ್ದೆನ್ನುವುದೂ ಉದಾತ್ತಾ ಲಂಕಾರ. ಮುದ್ರಿತವಾಗಿರುವ 'ಚಿನ್ನದ ಗೋಡೆಯವೋಲ್' ಎಂಬ ಅಶುದ್ಧಪಾಠವನ್ನು 'ಚಿನ್ನದ ಗೋಡೆಗಳೊಳ್' ಎಂದು ತಿದ್ದಿಕೊಳ್ಳಿ. ಅಕಾಲದಲ್ಲಿ ಇದರಿಂದ ಸಂಧ್ಯಾರಾಗ ಬಂದಂತಾಯಿತೆನ್ನುವುದು ಉತ್ಪ್ರೇಕ್ಷೆ.

೯. ಈಚಲ ಕಾಡುಗಳು ದಟ್ಟವಾಗಿರುವುದರಿಂದ ಹಿಮಸೇನೆ ನೆಲಕ್ಕೆ ಬೀಳುವಂತಿಲ್ಲ; ಹೊಂಗೆಯ ಕಾಡು ದಟ್ಟವಾದ್ದರಿಂದ ಮದ್ದಾನೆ

ಗಳಿಗೆ ನಿವಾಸವಾಗಿದೆ. ನೆಲ ನೆನೆಯುವುದು ಅವುಗಳ ಮದೋದಕ ದಿಂದಲೇ. ಇಲ್ಲಿ ಅನುಪ್ರಾಸವೆಂಬ ಶಬ್ದಾಲಂಕಾರದಂತೆ ಅತಿಶಯೋಕ್ತಿ ಯೆಂಬ ಅರ್ಥಾಲಂಕಾರವೂ ಗಮನಾರ್ಹ.

೧೦. ಇದನ್ನೂ ಅತಿಶಯೋಕ್ತಿಯೆಂದೇ ಭಾವಿಸಬಹುದು. ಅಲ್ಲಿಯ ಶಿಖರದಲ್ಲೆಲ್ಲ ರತ್ನಗಳೇ; ಕಂದರಗಳಲ್ಲೆಲ್ಲ ಲತೆವನೆಗಳೇ; ತೊರೆವೆಣ್ಣು ಗಳಲ್ಲೆಲ್ಲ ಪುಲಿನ ಮತ್ತು ಪದ್ಮಗಳೇ; ತರುಗಳಲ್ಲೆಲ್ಲ ಪುಷ್ಪಗಳೇ.

೧೧. ಸುರಸುಂದರಿಯರು ಜಲಕ್ರೀಡೆಯಾಡಲು ಬರುತ್ತಾರಾದ್ದರಿಂದ ಅದು ಬೇರೊಂದು ಸ್ವರ್ಗವೆಂಬ ಅತಿಶಯೋಕ್ತಿ ಗಮ್ಯ. ರಶನಾ– ಡಾಬು. ಎಲ್ಲೆಲ್ಲಿಯೂ ಬಳ್ಳಿಗಳನ್ನು ಬಳಸಿದ ಹಾವುಗಳು ಹೇರಳವಾಗಿವೆ. ಇಲ್ಲಿಯೂ ಶಬ್ದಾಲಂಕಾರದ ಸ್ವಾರಸ್ಯ ಹೆಚ್ಚೇ ಹೊರತು ಅರ್ಥಪುಷ್ಟಿಯಲ್ಲ.

೧೨. ಬೆಟ್ಟದ ಶಿಖರಗಳೆಲ್ಲವೂ ಮೋಡಗಳೇಯೊ ಎಂಬ ಸಂದೇಹ ವನ್ನು ಮೊದಲು ಉಂಟುಮಾಡುತ್ತವೆ. ಮೋಡಗಳಲ್ಲಿ ಕಾಮನ ಬಿಲ್ಲಿರು ವಂತೆ ಶಿಖರಗಳಲ್ಲಿ ರತ್ನಮಣಿಗಳಿವೆ; ನೀರು ಸುರಿದಮೇಲೆ ಮೋಡ ಬೆಳ್ಳಗಿ ರುವಂತೆ ಶಿಖರಗಳು ಮಂಜಿನಿಂದ ಬೆಳ್ಳಗಿವೆ. ಶಿಖರ, ಮೋಡ, ಎರಡೂ ಒಂದೇ ಎಡೆಗಿರುವುದರಿಂದ ಇದು ಶಿಖರ, ಇದು ಮೋಡ, ಎಂದು ಬೇರ್ಪಡಿ ಸುವಂತಿಲ್ಲವೆಂದರೂ–ಶಿಖರದಲ್ಲಿಲ್ಲದ, ಮೋಡದಲ್ಲಿ ಮಾತ್ರವಿರುವ ಗರ್ಜನೆ, ಮೋಡವನ್ನು ಗುರುತಿಸಲು ಸಹಾಯಮಾಡುತ್ತದೆ. ಇದು ನಿಶ್ಚಯಾಂತ ವಾದ ಸಂದೇಹಾಲಂಕಾರ.

೧೩. ಬೆಟ್ಟದಲ್ಲಿ ಮಾನಸವೆಂಬ ನಿರ್ಮಲ ಸರೋವರವಿದೆ; ಸರೋ ವರದಲ್ಲಿ ಕೆಂದಾವರೆಗಳಲರಳಿರುವಂತೆ ಕಲಹಂಸಗಣಗಳೂ ಸುಳಿದಾಡುತ್ತವೆ. ಇದನ್ನು ಯಮಕವೆಂಬ ಶಬ್ದಾಲಂಕಾರಕ್ಕೆ ಅನುಕೂಲಿಸುವ ಭಂಗಶ್ಲೇಷೆ ಯಿಂದ ಕವಿ ಶಿವನಿಗೆ ಹೋಲಿಸುತ್ತಿದ್ದಾನೆ. ಪಾರ್ವತಿ ಕಲಹಮಾಡಿ ದರೂ ಶಿವನ ಮನಸ್ಸು ಕದಡುವುದಿಲ್ಲ; ಅವನು ಯಾವಾಗಲೂ ತನ್ನ ಗಣಗ ಳಿಂದ ಪರಿವೃತನಾಗಿಯೇ ಇರುತ್ತಾನೆ. ಈ ಶ್ಲಿಷ್ಟೋಪಮೆಯಲ್ಲಿ ಸಾಧಾರಣ ಧರ್ಮವು ಶಬ್ದಕೃತವೇ ಹೊರತು ಅರ್ಥಕೃತವಲ್ಲ.

೧೪. ಗ್ರಹಗಳು–ಚಂದ್ರಾದಿಗಳು. ಓಷಧಿ–ಕತ್ತಲೆಯಲ್ಲಿ ಬೆಳಗುವು ದೆಂದು ಕವಿಗಳು ವರ್ಣಿಸುವ ಸಂಜೀವಿನೀಲತೆ. ಶಿವಗಣಗಳಿಗೆ ತ್ರಿಪುರ

ದಾಹವಾದ ದಿನ ಆಗಸದಲ್ಲಿ ಅಗಾಧವಾದ ಬೆಂಕಿ ಕಂಡಿತ್ತು. ಅದೇ ದೃಶ್ಯ ಅವರಿಗೆ ಪ್ರತಿರಾತ್ರಿಯೂ ಸ್ಮರಣೆಗೆ ಬರುವಂತೆ ಬೆಟ್ಟ ಮಾಡುತ್ತದೆ. ಸ್ಮರಣಾಲಂಕಾರ.

೧೫. ಬೆಟ್ಟವನ್ನು ಬಣ್ಣಿಸುವ ಈ ಕಡೆಯ ಪದ್ಯದಲ್ಲಿ ಕವಿಯ ಕಲ್ಪನೆ ಮತ್ತೆ ಪ್ರಜ್ವಲಿಸುತ್ತದೆ. ಗಂಗೆಯ ಉದ್ಗಮಸ್ಥಾನವೇ ಆ ಬೆಟ್ಟ. ಎತ್ತರವಾದ ಆ ಬಂಡೆಗಲ್ಲುಗಳ ನಡುವೆ ನೀರು ಧುಮುಕುವುದರಿಂದ ಮೇಲಕ್ಕೆ ತುಂತುರುಗಳು ಸಿಡಿಯುತ್ತವೆ; ನೀರು ಹಿಮ್ಮೆಟ್ಟುತ್ತದೆ. ಆ ದೃಶ್ಯ ಗಂಗೆಯೇ ಬೆಟ್ಟಕ್ಕೆ ಚಾಮರವಿಕ್ಕುತ್ತಿರುವಳೊ ಎನ್ನಿಸುತ್ತದೆ ಕವಿಯ ಕಲ್ಪನಾಕ್ಷಿಗೆ. ಉತ್ಪ್ರೇಕ್ಷಾಲಂಕಾರ.

೧೬. ಹಿಂದಿನ ಸರ್ಗದಲ್ಲಿ ಶರತ್ಕಾಲವನ್ನು ಕವಿ ಸಂಗ್ರಹವಾಗಿ ವರ್ಣಿಸಿದನಂತರ ಯಕ್ಷನು ವಿವರವಾಗಿ ವರ್ಣಿಸುವಂತೆ ಇಲ್ಲಿಯೂ ಬೆಟ್ಟವನ್ನು ಯಕ್ಷನು ಬಣ್ಣಿಸಲು ಹೊರಡುತ್ತಾನೆ. ಯಕ್ಷನ ಕಲ್ಪನೆ ಮನುಷ್ಯರದ್ದಕ್ಕಿಂತಲೂ ಹೆಚ್ಚಿನದೆಂದು ಊಹಿಸಲು ಔಚಿತ್ಯವಿರುವುದರಿಂದ, ಕವಿಯ ಈ ಯೋಜನೆ ಔಚಿತ್ಯಪೂರ್ಣವಾಗಿದೆ. ಕಡೆಯ ಸಾಲಿನಲ್ಲಿ ಅರ್ಥಾಂತರ ನ್ಯಾಸಾಲಂಕಾರ.

೧೭. ಸರ್ಗಾಂತ್ಯದವರೆಗೂ ಇಲ್ಲಿ ಒಂದೇ ಛಂದಸ್ಸಿನ ಪ್ರಯೋಗವಿಲ್ಲ. ಈ ಸರ್ಗದ ಉದ್ದಕ್ಕೂ ಭಿನ್ನವೃತ್ತಗಳ ಸೊಬಗನ್ನು ಕವಿ ಮೆರೆಯುತ್ತಾನೆ. ಇಲ್ಲಿಯೇ ವೃತ್ತ ಬದಲಾಗಲಾರಂಭವಾಗುತ್ತದೆ. ಮೇಘಪಥವನ್ನೆಲ್ಲ ತನ್ನ ತುದಿಗಳಿಂದ ಸಾವಿರಾರು ಪಾಲಾಗಿ ಒಡೆಯಬಲ್ಲ ಬೆಟ್ಟವು ನೋಡಿದೊಡನೆ ಜನರ ಪಾಪಗಳನ್ನು ಮುರಿಯುವುದರಲ್ಲಿ ಆಶ್ಚರ್ಯವೇನೂ ಇಲ್ಲವೆನ್ನುವಾಗ ಕಾರ್ಯಕಾರಣ ಭಾವವಿರುವುದರಿಂದ ಕಾವ್ಯಲಿಂಗಾಲಂಕಾರ.

೧೮. ಅಂತರ–ಮಧ್ಯಭಾಗ (interior). ಬೆಟ್ಟದ ಮಧ್ಯವು ದುರ್ಗಮವಾಗಲು ಮರಗಳ (ಆಗಮ) ಸಂದಣಿಯೇ ಕಾರಣ. 'ಇನಿತನೆ' ಎಂದರೆ ಅದರ ಅಂಚುಗಳನ್ನು ಮಾತ್ರ ನೋಡುವವರು ಬಣ್ಣಿಸಬಹುದು. ಹಾಗೆಯೇ ದುರ್ಗಮ ಎಂದರೆ ಗಹನವಾದ ಆಗಮ ಎಂದರೆ ಪುರಾಣಾದಿ ಶಾಸ್ತ್ರಗಳಿಂದ ಪರಮಾತ್ಮನ 'ಇನಿತನೆ' ಎಂದರೆ ಅಂಶಾಂಶವನ್ನು ಮಾತ್ರ ತಿಳಿಯಬಹುದು. ಹೀಗೆ ಶ್ಲಿಷ್ಟೋಪಮೆ ಅಲಂಕಾರ. ಎಲ್ಲ ಬಲ್ಲವನೆಂದರೆ

ಬ್ರಹ್ಮನೊಬ್ಬನೇ.

೧೯. ಬೆಟ್ಟದ ಕಾಮೋದ್ದೀಪಕತ್ವವನ್ನು ಕವಿ ವರ್ಣಿಸುತ್ತಿದ್ದಾನೆ. ಸುರತತೃಪ್ತರಾದ ನಾರಿಯರಿಗೂ ಉತ್ಕಂಠೆ ಮತ್ತೂ ವೃದ್ಧಿಯಾಗುತ್ತದೆಯಂತೆ– ಅಲ್ಲಿಯ ಪುಷ್ಪ, ಲತಾ, ಸಮೃದ್ಧಿಯನ್ನು ಕಂಡೊಡನೆ. ಅತಿಶಯೋಕ್ತಿ.

೨೦. ನಿಯತಿ ಎಂದರೆ ಭಾಗ್ಯ. ನೀತಿ, ಸುದೈವ, ಎರಡೂ ಕೂಡಿದವರಿಗೆ ಧನಸಂಪತ್ತು ಸುಲಭ ಎಂದರೆ ಸುಕರವಾಗಿ ಸಂಪಾದ್ಯ. ಕುಬೇರನನ್ನೂ ಅಸೂಯೆಗೊಳಿಸುವಂತಹ ಧನಸಂಪತ್ತು ಬೆಟ್ಟದಲ್ಲಿದೆ. ಅದರಿಂದ ಭೂಲೋಕಕ್ಕೇ ಒಂದು ಭೂಷಣ. ಅಷ್ಟೇ ಅಲ್ಲ, ಮಿಕ್ಕ ಲೋಕಗಳನ್ನು ಮೀರಿಸಲೂ ಸಾಧ್ಯವಾಗಿದೆ. ಕಾವ್ಯಲಿಂಗಾಲಂಕಾರ.

೨೧. ತ್ರಿಭುವನವೂ ಇವನಿಗೆ ಸಮವಾಗಲಾರದು ಎನ್ನುವುದಕ್ಕೆ ಕಾರಣವನ್ನು ಹೇಳುತ್ತಾನೆ. ಮುನಿಗಳಿಗೂ ನೆಲೆ ಕಾಣದ ಪರಮೇಶ್ವರನಿಲ್ಲಿ ವಾಸಿಸುವುದೊಂದು ಕಾರಣವಾದರೆ ಅವನ ಸತಿಯಾದ ಪಾರ್ವತಿಗೆ ಈತನೇ ಜನಕ. ಕಾರ್ಯಲಿಂಗಾಲಂಕಾರ. ಇಲ್ಲಿ ಬೆಟ್ಟಕ್ಕೆ ದೇವತಾತ್ಮವನ್ನು ಕವಿ ಆರೋಪಿಸಿರುವುದು ಸ್ಪಷ್ಟ.

೨೨. ಹಿಮಾಚಲವು ಕೇವಲ ಭೋಗಭೂಮಿಯಷ್ಟೇ ಅಲ್ಲ; ಅದು ಮುಕ್ತಿಕ್ಷೇತ್ರವೂ ಆಗಿದೆಯೆಂದಿಲ್ಲಿ ವರ್ಣಿಸಿದೆ. ಆದ್ದರಿಂದಲೇ ತಮ ಅಥವಾ ಅಜ್ಞಾನವನ್ನು ಮುರಿಯುವ ಶಾಸ್ತ್ರಕ್ಕೆ ಅದನ್ನು ಹೋಲಿಸಿದೆ. ಉಪಮಾಲಂಕಾರ.

೨೩. ಕಾಮಶಾಸ್ತ್ರದಲ್ಲಿ ಹೇಳುವ ಚಿತ್ರಸುರತಬಂಧಗಳು ಇಲ್ಲಿ ಗಮ್ಯವೆಂದು ಮಲ್ಲಿನಾಥನು ಬರೆಯುತ್ತಾನೆ. ಕಾವ್ಯಲಿಂಗಾಲಂಕಾರ.

೨೪. ಓಷಧಿಗಳು–ಜ್ಯೋತಿರ್ಲತೆಗಳು. ಉಪಮಾಲಂಕಾರ.

೨೫. ಇಲ್ಲಿಯ ಸ್ವಭಾವೋಕ್ತಿ ಹೃದಯಾಂಗಮವಾಗಿದೆ.

೨೬. ವಸಂತಕಾಲವೆಂಬ ಕಾರಣವಿಲ್ಲದಿದ್ದರೂ ಕೋಗಿಲೆಗಳಲ್ಲಿ ಮದವುಕ್ಕಿತೆನ್ನುವಾಗ ವಿಭಾವನಾಲಂಕಾರ. ಅದಕ್ಕೆ ಮದೋದಕವನ್ನವು ಮಾವಿನ ಕಂಪೆಂದು ಭ್ರಮಿಸುವುದೇ ಕಾರಣವಾದ್ದರಿಂದ ಭ್ರಾಂತಿಮದಲಂಕಾರ.

೨೭. ಎಲ್ಲ ವಿಶೇಷಣಗಳಿಂದಲೂ ಮೇರುಪರ್ವತಕ್ಕೆ ಹಿಮವಂತನು ಪ್ರತಿಸ್ಪರ್ಧಿಯೆಂಬುದು ಸೂಚಿತವಾಗುವುದರಿಂದ ಅಲಂಕಾರ ಸಮಾಸೋಕ್ತಿ. ಶಬ್ದಾಲಂಕಾರವೂ ಉಂಟು.

೨೮. ಮೊದಲೆರಡು ಸಾಲುಗಳಲ್ಲಿ ರೂಪಕಾಲಂಕಾರ ಸ್ಪಷ್ಟ.

೨೯. ಹಿಂದೆ ನಡೆದ ಘಟನೆಯನ್ನು ಈಗ ಕಾಣುತ್ತಿರುವಂತೆ ವರ್ಣಿಸಿರುವುದರಿಂದ ಇದು ಭಾವಿಕಾಲಂಕಾರ.

೩೦. ಹಿಮಾಚಲದಿಂದ ನೋಡಿದರೆ ಮಂದರಾದ್ರಿಯೂ ಕಾಣಿಸುತ್ತದೆ. ಕಡೆಯ ಸಾಲಿನಲ್ಲಿ ಉತ್ಪ್ರೇಕ್ಷಾಲಂಕಾರ.

೩೧. ಮಧ್ಯಾಹ್ನದಲ್ಲಿ ಬೆಳುದಿಂಗಳೋ ಎಂಬ ಶಂಕೆ ಬರುವುದೆಂದು ವರ್ಣಿಸಿರುವುದು ಭ್ರಾಂತಿಮದಲಂಕಾರ.

೩೨. ಇಲ್ಲಿಯ ಉತ್ಪ್ರೇಕ್ಷೆ ಅತ್ಯಂತ ಹೃದಯಂಗಮವಾಗಿದೆ.

೩೩. ಹಿಂದೆ ನಡೆದುದನ್ನು ಈಗ ನಡೆದಂತೆ ವರ್ಣಿಸುವುದರಿಂದ ಇದೂ ಭಾವಿಕಾಲಂಕಾರವೇ.

೩೪. ಉತ್ಪ್ರೇಕ್ಷಾಲಂಕಾರ.

೩೫. ಮೂರನೆಯ ಸಾಲಿನಲ್ಲಿ ಮತ್ತೆ ಉತ್ಪ್ರೇಕ್ಷೆ.

೩೬. ನಿಶ್ಚಯಾಂತವಾದ ಸಂದೇಹಾಲಂಕಾರ.

೩೭. ಈ ಸ್ವಭಾವೋಕ್ತಿಯಿಂದ ಬೆಟ್ಟದ ಮಹತ್ವವು ಸೂಚಿತವಾಗುವುದರಿಂದ ಪರ್ಯಾಯೋಕ್ತಾಲಂಕಾರ.

೩೮. ಭ್ರಾಂತಿಮದಲಂಕಾರ.

೩೯. ಒಂದರ ಸೊಬಗನ್ನು ಮತ್ತೊಂದು ತಿಳಿಯುವುದೆನ್ನುವುದು ನಿದರ್ಶನಾಲಂಕಾರ.

೪೦. ಕಾವ್ಯಲಿಂಗಾಲಂಕಾರ.

೪೧. ಉಪಮಾಲಂಕಾರ.

೪೨. ಭ್ರಾಂತಿಮದಲಂಕಾರ, ಕಾವ್ಯಲಿಂಗದ ಛಾಯೆಯೂ ಮಿಶ್ರವಾಗಿದೆ.

೪೩. ಅಲಂಕಾರ ಅತಿಶಯೋಕ್ತಿ.

೪೪. ಇನ್ನೆಲ್ಲಿಯೂ ಈ ಸಾರ್ವಕಾಲಿಕವಾದ ಬೆಳುದಿಂಗಳಿಲ್ಲವೆಂದು

ಸೂಚಿತವಾಗುವುದರಿಂದ ವ್ಯತಿರೇಕಾಲಂಕಾರ.

೪೫. ಅಲಂಕಾರ ಉತ್ಪ್ರೇಕ್ಷೆ. ನಿಮ್ನಯ್ಯ–ಇಂದ್ರ. ಇದು ಇಂದ್ರ ಕೀಲ ಪರ್ವತದ ವರ್ಣನೆ.

೪೬. ಉಪಮಾಲಂಕಾರ.

೪೭. ಕಾವ್ಯಲಿಂಗಾಲಂಕಾರ.

೪೮. ಉತ್ಪ್ರೇಕ್ಷಾಲಂಕಾರ.

೪೯. ಕಡೆಯ ಎರಡು ಸಾಲುಗಳಲ್ಲಿ ಅರ್ಥಾಂತರನ್ಯಾಸಾಲಂಕಾರ.

೫೦. ಆಶೀರಲಂಕಾರ.

೫೧. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸಾಲಂಕಾರ.

೫೨. ಶ್ಲಿಷ್ಟೋಪಮೆ. ವಿಶೇಷಣಗಳು ಬೆಟ್ಟಕ್ಕೂ ಪುರುಷಕಾರಕ್ಕೂ ಸಮಾನವಾಗಿ ಅನ್ವಯಿಸುತ್ತವೆ.

---

## ಆರನೆಯ ಸರ್ಗ :

೧. ಮೊದಲ ಎರಡು ವಿಶೇಷಣಗಳೂ ಶ್ಲೇಷೆಯಿಂದ ಅರ್ಜುನ ಮತ್ತು ವಿಷ್ಣು ಇಬ್ಬರಿಗೂ ಅನ್ವಯಿಸುತ್ತವೆ. ಶ್ಲಿಷ್ಟೋಪಮೆ.

೨. ಪ್ರಕೃತಿಯೇ ಪಾರ್ಥನಿಗೆ ಸ್ವಾಗತಮಾಡುವಂತಿದೆ. ಉಪಮಾಲಂಕಾರ.

೩. ಗಾಳಿಗಳು ಗೆಳೆಯರಂತೆ ಅವನನ್ನಪ್ಪುತ್ತವೆ. ಇಲ್ಲಿಯೂ ಉಪಮೆ ಮನೋಹರವಾಗಿದೆ.

೪. ಕವಿಯ ಸೂಕ್ಷ್ಮ ಶಬ್ದಸಂವೇದನಕ್ಕೆ ಈ ಪದ್ಯ ಸಾಕ್ಷಿಯಾಗಿದೆ. ಉಪಮಾಲಂಕಾರ. ತೊರೆಗಳ ಮಂಜುಳನಾದವು ಮಂಗಳತೂರ್ಯದಂತೆ ತೋರುತ್ತದೆ.

೫. ಇದು ನಿದರ್ಶನಾಲಂಕಾರ – ಇಲ್ಲಿ ಪ್ರಕೃತಿಯ ಕಾರ್ಯ, ಗ್ರಾಹಕರಿಗೆ ನೀತಿಯೊಂದನ್ನು ಕಲಿಸುವಂತಿದೆಯೆಂದು ವರ್ಣಿಸಿರುವುದರಿಂದ.

೬. ಸುಂದರವಾದ ರೂಪಕಾಲಂಕಾರ.

೭. ಅರ್ಥಾಂತರನ್ಯಾಸಾಲಂಕಾರ ಕಡೆಯ ಸಾಲಿನಲ್ಲಿ.

೮. ಇಲ್ಲಿ ಬೆಳ್ಳಗಿರುವ ಅಲೆಗಳು ತಮ್ಮ ಬಣ್ಣವನ್ನು ಬಿಟ್ಟು ಪಕ್ಕದಲ್ಲಿರುವ ಚೆಂಬೊನ್ನ ಬಣ್ಣವನ್ನು ಪಡೆಯುವುದು ತದ್ಗುಣಾಲಂಕಾರ. ಅದರಿಂದ ಚಕ್ರವಾಕಿಗೆ ಭ್ರಾಂತಿಯುಂಟಾಗುವುದರಿಂದ ಭ್ರಾಂತಿಮದಲಂಕಾರ. ಮೂಲದಲ್ಲಿ ದೂರಾನ್ವಯವಾಗುವುದರಿಂದ ಎರಡನೆಯ ಸಾಲನು 'ಪೇರಲೆ ಸಮನೆನೆ ನಲ್ಲನನು' ಎಂದು ತಿದ್ದಿಕೊಳ್ಳಬಹುದು.

೯. ಸೊಗಸಾದ ಉಪಮೆ, ಮತ್ತು ಕಾವ್ಯಲಿಂಗಗಳ ಸಂಸೃಷ್ಟಿ.

೧೦. ಕಡೆಯ ಸಾಲಿನ ಉತ್ಪ್ರೇಕ್ಷೆ ರಮ್ಯವಾಗಿದೆ.

೧೧. ಇಲ್ಲಿಯ ಉತ್ಪ್ರೇಕ್ಷೆಯೂ ಹೃದಯಂಗಮವಾಗಿದೆ. ಸೋಗೆ–ನವಿಲಿನ ಗರಿ.

೧೨. ಚಿಪ್ಪನ್ನೇ ಹೆಣ್ಣೆಂದು ರೂಪಣಮಾಡಿರುವುದರಿಂದ ರೂಪಕಾಲಂಕಾರ. ವಿಶೇಷಣಗಳು ಶ್ಲಿಷ್ಟವಾಗಿವೆ.

೧೩. ಸ್ಮರಣಾಲಂಕಾರ.

೧೪. ಭ್ರಾಂತಿಮದಲಂಕಾರ.

೧೫. ಸ್ವಭಾವೋಕ್ತಿಗೆ ಉಪಮೆ ಮೆರುಗನ್ನಿತ್ತಿದೆ.

೧೬. ಶ್ಲಿಷ್ಟವಾದ ಉಪಮೆ ಮತ್ತು ರೂಪಕಾಲಂಕಾರಗಳಿವೆ.

೧೭. ಉತ್ಪ್ರೇಕ್ಷಾಲಂಕಾರ.

೧೮. ಕಾವ್ಯಲಿಂಗಾಲಂಕಾರ.

೧೯. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸಾಲಂಕಾರ.

೨೦. ಪ್ರತಿ ವಿಶೇಷಣದಲ್ಲಿಯೂ ಶ್ಲೇಷೆಯಿದೆ. ಚಂದ್ರ, ಅರ್ಜುನ ಇಬ್ಬರಿಗೂ ಅನ್ವಯಿಸುತ್ತದೆ ನಿರ್ಮಲ ಮತ್ತು ಅರ್ಜುನ. ಇಂದ್ರಿಯಶಮಸುಖ–ನೇತ್ರಾನಂದಕರತ್ವ ಮತ್ತು ಜಿತೇಂದ್ರಿಯತ್ವ. ಶುಚಿಗುಣ–ಬೆಳುದಿಂಗಳು ಮತ್ತು ಸತ್ವಗುಣ. ತಮ – ಕತ್ತಲೆ ಮತ್ತು ಅಜ್ಞಾನ. ಶ್ಲಿಷ್ಟೋಪಮೆ.

೨೧. ಅರ್ಜುನನ ತಪೋನುಷ್ಠಾನದ ವರ್ಣನೆ.

೨೨. ವಿರೋಧಾಭಾಸಾಲಂಕಾರ ಮತ್ತು ಯಥಾಸಂಖ್ಯಾಲಂಕಾರ. ಜಯದ ಎಂದರೆ ಕ್ಷಾತ್ರದ ತೇಜ ಸಹಜ; ಶಮ ಎಂದರೆ ವೈರಾಗ್ಯದ ತೇಜ

ಆಗಂತುಕ.

೨೩. ಉಪಮಾಲಕಾರ.

೨೪. ಅರ್ಥಾಂತರನ್ಯಾಸಲಂಕಾರ.

೨೫. ಅರ್ಜುನನ ತಪಸ್ಸಿದ್ಧಿಯನ್ನು ಮೂರು ಪದ್ಯಗಳ ಕುಲಕದಿಂದ ಕವಿ ವರ್ಣಿಸುತ್ತಾನೆ.

೨೬. 'ಪರ್ಮರವ ಬಾಗಿಸಿ ಪೂಗಳ ಕೊಯ್ವೆಡೆ ತಳಿರ್ಗಳು ಕೈಮುಗಿದಂತಿರೆ' ಎಂದು ಅನ್ವಯ.

೨೭. 'ಮೂರು ಪದ್ಯಗಳಲ್ಲಿಯೂ ಉತ್ಪ್ರೇಕ್ಷೆ ಮುಖ್ಯವಾದ ಅಲಂಕಾರ'

೨೮. ಅರ್ಥಾಂತರನ್ಯಾಸ.

೨೯. ಕಾಡಿನ ಜನ– ಇಂದ್ರನೇ ತನ್ನ ಕಾಡನ್ನು ಕಾಯಲೆಂದು ನಿಯಮಿಸಿದ್ದ ಜನ.

೩೦. ತಮ್ಮ ಕರ್ತವ್ಯದಲ್ಲಿ ಲೋಪವಾದ್ದರಿಂದ ಒಡೆಯನ ಕೋಪವನ್ನು ತಪ್ಪಿಸಿಕೊಳ್ಳಲು ಅವರು ನಲ್ನುಡಿಗಳನ್ನಾಡುತ್ತಾರೆ.

೩೧. ಗ್ರಹಪತಿ – ಗ್ರಹಗಳಲ್ಲಿ ಶ್ರೇಷ್ಠ.

೩೨. ಅವನು ತಪಸ್ಸುಮಾಡುವಾಗಲೂ ಬಿಲ್ಲನ್ನು ಬಿಟ್ಟಿಲ್ಲ.

೩೩. ಉತ್ಪ್ರೇಕ್ಷಾಲಂಕಾರ.

೩೪. ಇದು ತಪಸ್ಸಿದ್ಧಿಯ ವರ್ಣನೆ.

೩೫. ಇಲ್ಲಮೆ – ಇಲ್ಲದಿರುವಿಕೆ, ಅಭಾವ. ಗೆಲ್ಲ – ಗೆಲವು, ಜಯ.

೩೬. ಸಂದೇಹಾಲಂಕಾರ.

೩೭. ಕಾರಣ–ತಪಸ್ಸೆಂಬ ಸಾಧನ. ಬಹುಗುಣ–ಅನೇಕಫಲಸಾಧಕ. ಇಂದ್ರಪದವಿ ಮುಂತಾದ ಫಲಗಳನ್ನೂ ತಪಸ್ಸಿನಿಂದ ಸಾಧಿಸಬಹುದೆಂದು ಪ್ರಾಚೀನರು ನಂಬುತ್ತಿದ್ದರು. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸಾಲಂಕಾರ.

೩೮. ಕಂದನ – ಮಗನಾದ ಅರ್ಜುನನ. ಗುಹ್ಯಕರ – ಇಂದ್ರನ ಕಿಂಕರರಾದ ಯಕ್ಷರ. ಕಡೆಯ ಸಾಲಿನಲ್ಲಿ ಅರ್ಥಾಂತರನ್ಯಾಸವಿದೆ.

೩೯. ಚಿತ್ತೈಕಾಗ್ರ್ಯ – ಮನಸ್ಸಿನ ಏಕಾಗ್ರತೆ. 'ಇಂತಹ ಏಕಾಗ್ರ

ಮನಸ್ಕರಿಗೆ ಭೂತಭವಿಷ್ಯದ್ವರ್ತಮಾನಗಳೆಲ್ಲವೂ ಕರತಳಾಮಲಕದಂತೆ ಕಾಣುವುವೆಂಬು ಪ್ರಾಚೀನರ ನಂಬಿಕೆ.

೪೦. ಕೋಮಲ, ಏಕ, ಸೂಕ್ಷ್ಮ, ದೂರಗ, ಅಮೋಘ, ಅಪ್ರತಿಹತ ಇಷ್ಟೂ ಮನ್ಮಥನ ಮಹಾಸ್ತ್ರಕ್ಕೆ ವಿಶೇಷಣ. ಆ ಮಹಾಸ್ತ್ರವೆಂದರೆ ಸುರ ಸುಂದರಿಯರಲ್ಲದೆ ಬೇರೆಯಲ್ಲವೆನ್ನುವಾಗ, ಉಭಯರೂಪ ಸಮಾರೋಪವು ಕವಿವಿವಕ್ಷಿತವೆಂದರೆ ರೂಪಕಾಲಂಕಾರ; ಪುಷ್ಪಾಸ್ತ್ರಕ್ಕೆ ಅಸ್ತ್ರತ್ವನಿಷೇಧವೇ ವಿವಕ್ಷಿತವೆಂದರೆ ಅಪಹ್ನುತಿಯೆಂಬ ಅಲಂಕಾರ; ಉಭಯಸಾಮ್ಯನಿರ್ದೇಶ ವಿವಕ್ಷಿತವೆಂದರೆ ಉಪಮಾಲಂಕಾರ; ವಿಶೇಷಣಗಳ ಸಾಭಿಪ್ರಾಯತ್ವವೇ ಚಮತ್ಕಾರಕವೆಂದರೆ ಪರಿಕರಾಲಂಕಾರ. ವಿಕ್ರಮೋರ್ವಶೀಯ ನಾಟಕದಲ್ಲಿ ಕಾಳಿದಾಸನು 'ಉರ್ವಶಿಯೇ ಮಹೇಂದ್ರನ ಆಯುಧ' ('ಉರ್ವಶೀ ಪ್ರಹರಣಂ ಮಹೇಂದ್ರಸ್ಯ') ವೆಂಬ ವಾಕ್ಯದ ಛಾಯೆಯನ್ನು ಇಲ್ಲಿ ಕಾಣ ಬಹುದು. ಭೇದಿಪ- ಗುರಿಯನ್ನು ಭೇದಿಸುವ.

೪೧. ಭವ – ಸಂಸಾರ. ತಮ – ಅಜ್ಞಾನ. ರಜ – ರಾಗದ್ವೇಷಾ ದಿಗಳಿಗೆ ಮೂಲವೆನಿಸುವ ರಜೋಗುಣ ಮತ್ತು ದೂಳು. ಇಲ್ಲಿ ಶ್ಲೇಷೆಯಿದೆ. ಬೋಧಜಲ–ತತ್ವಜ್ಞಾನವೆಂಬ ನಿರ್ಮಲೋದಕ. ಇಲ್ಲಿ ರೂಪಕಾಲಂಕಾರ. ಆ ಜ್ಞಾನವಾರಿಯೆಲ್ಲವನ್ನೂ ನಿಮ್ಮ ಬೊಗಸೆಗಣ್ಣುಗಳೇ ಕುಡಿದುವೋ ಎಂಬ ಹಾಗೆ ಬತ್ತಿ ಬಿಸುಡುತ್ತವೆಯೆಂಬಾಗ ಉತ್ಪ್ರೇಕ್ಷಾಲಂಕಾರ.

೪೨. ಪದ್ಯದ ಮೊದಲನೆ ಅರ್ಧದಲ್ಲಿ ಅಲಂಕಾರ ಅತಿಶಯೋಕ್ತಿ. ನಿಮಗಾಗಿಯೇ ಜನರು ಸ್ವರ್ಗವನ್ನು ಬಯಸುವರೆಂಬಾಗ ಉತ್ಪ್ರೇಕ್ಷೆ.

೪೩. ಕಡೆಯ ಸಾಲಿನಲ್ಲಿ ಕಾವ್ಯಲಿಂಗಾಲಂಕಾರ. ಸುಖಸಂಗಿ- ಸುಖಾಭಿಲಾಷೆ.

೪೪. ಕಡೆಯ ಸಾಲಿನಲ್ಲಿ ಒಂದಕ್ಕೊಂದು ಅನನುರೂಪವಾದ ಅಂಶ ಗಳ ವರ್ಣನೆಯಿರುವುದರಿಂದ ವಿಷಮಾಲಂಕಾರ. ಹಿಂಸೆಯಿಂದ ಮೋಕ್ಷ ಸಿಕ್ಕಲಾರದೆಂಬ ತಾತ್ಪರ್ಯವನ್ನು ಮಾತ್ರ ಗ್ರಹಿಸಿದರೆ ಅರ್ಥಾಂತರನ್ಯಾಸಾ ಲಂಕಾರ.

೪೫. ಮತ್ತಿನ–ಮಿಕ್ಕ ಸ್ತ್ರೀಯರನ್ನು ಅರ್ಜುನನು ಕ್ಷತ್ರಿಯನಾದುದ ರಿಂದ ಹಿಂಸಿಸಲಾರನೆಂದು ಅವರಿಗೆ ಆಶ್ವಾಸನೆಯನ್ನೂ ಇಂದ್ರನು ಕೊಡು

ತ್ತಾನೆ. ಅರ್ಥಾಂತರನ್ಯಾಸಾಲಂಕಾರ.

೪೬. ಅರ್ಥಾಂತರನ್ಯಾಸಾಲಂಕಾರ.

೪೭. ಸುರವನಿತೆಯರ ಸೌಂದರ್ಯವರ್ಣನೆ. ಅಲಂಕಾರ ಅತಿಶಯೋಕ್ತಿ. ಇಲ್ಲಿಯೂ ಸರ್ಗಾಂತ್ಯದ ಲಕ್ಷ್ಮೀಶಬ್ದಪ್ರಯೋಗವನ್ನು ಗಮನಿಸಿ.

ಮುಗಿದುದು.

# ಕನ್ನಡ ಕವಿ ಕಾವ್ಯಮಾಲೆ, ಮೈಸೂರು

---

ಸಂಪಾದಕರು ಮತ್ತು ಪ್ರಕಾಶಕರು

ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

Asst. Professor & Head of the Department of Kannada

Sarada Vilas College, Mysore.

## ನಮ್ಮ ಕೆಲವು ಪ್ರಕಟಣೆಗಳು

ಪ್ರೊ. ತೀ. ನಂ. ಶ್ರೀಕಂಠಯ್ಯನವರ

## ಒಲುಮೆ

(ಪ್ರೇಮಗೀತೆಗಳ ಸಂಕಲನ)

ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಗೀತಗಳ ಹೊಸಯುಗವನ್ನೇ ಸಾರಿತಂದ ಈ ಉತ್ಕೃಷ್ಟ ಕೃತಿ ಉತ್ತಮವಾದ ಹೊಳಪು ಕಾಗದದ ಮೇಲೆ ಸುಂದರವಾಗಿ ಅಚ್ಚಾಗಿದೆ.

ಶ್ರೀ ಶ್ರೀನಿವಾಸರು ಈ ಕೃತಿಯನ್ನು ಕುರಿತು ಈ ರೀತಿಯಾಗಿ ಬರೆಯುತ್ತಾರೆ :–

'ಪ್ರಣಯ ಗೀತೆಗಳನ್ನು ಬರೆಯುವುದು ಕಷ್ಟವೆಂದರಿತೂ ಅದ ರಲ್ಲಿಯೇ ತೊಡಗಿ ಇಷ್ಟು ಚೆನ್ನಾದ ಇಷ್ಟು ಪದ್ಯಗಳನ್ನು ಬರೆದಿರುವ ವಿಷಯ ದಲ್ಲಿ ನಾನು ಶ್ರೀಕಂಠಯ್ಯನವರನ್ನು ಅಭಿನಂದಿಸುತ್ತೇನೆ.

'....ಇವರು ಅನುಭವಿಗಳು, ಕವಿಗಳು, ರಸಾಭಿಜ್ಞರು. ಇವರ ಭಾಷೆಯಲ್ಲಿ ಅಸಾಧಾರಣವಾದ ಶಕ್ತಿಯಿದೆ, ಅಸಾಧಾರಣವಾದ ಪ್ರೌಢಿಮೆ ಯಿದೆ. ಇವರ ಕಾವ್ಯದ ಪದ್ಧತಿ ಕಂಡ ಅರ್ಥವನ್ನು ಸರಳವಾಗಿ ಸರಸ ವಾಗಿ ಹೇಳುವ ಪದ್ಧತಿ.'

ಪುಟಗಳು ೬೪. ಬೆಲೆ : ಸಾಧಾರಣ ಪ್ರತಿ ೧–೮–೦, ಕ್ಯಾಲಿಕೊ ೨–೮–೦

ಆಸ್ಥಾನ ವಿದ್ವಾನ್ ಶ್ರೀ. ಎಚ್. ಗಂಗಾಧರಶಾಸ್ತ್ರಿಗಳಿಂದ ಅನುವಾದಿತವಾದ

# ಅಮರು ಶತಕಮ್

'ಸಾವಿರ ವರ್ಷಕ್ಕೂ ಹಿಂದಿನ ಕಾಲದ ಸಂಸ್ಕೃತ ಕವಿ ಅಮರುವಿನ ನೂರು ಶೃಂಗಾರ ಕವನಗಳ ಸಂಕಲನ ಪ್ರತಿಪದಾರ್ಥ ಮತ್ತು ತಾತ್ಪರ್ಯಗಳೊಡನೆ ಸುಂದರವಾಗಿ ಇಲ್ಲಿ ಅಚ್ಚಾಗಿದೆ.

'ವಿವಾಹಿತ ದಂಪತಿಗಳೂ, ಶೃಂಗಾರ ಪ್ರಿಯರೂ ಇದನ್ನು ಅಗತ್ಯವಾಗಿ ಓದಬೇಕು.' —ಪುಸ್ತಕ ಪ್ರಪಂಚ

ಪುಟಗಳು ೧೩೦. ಬೆಲೆ : ಸಾಧಾರಣ ಪ್ರತಿ ೧–೮–೦, ಕ್ಯಾಲಿಕೊ ೩–೦–೦

ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಕೃತಿಗಳು

# ೧. ಕನ್ನಡ ಕುಮಾರ ಸಂಭವ

ಕಾಳಿದಾಸ ಮಹಾಕವಿಯ ಕೃತಿಗಳಲ್ಲಿ ಒಂದಾದ ಕುಮಾರ ಸಂಭವದ ಸಂಪೂರ್ಣ ಅನುವಾದ. ಕವಿಕೃತಿಯ ಪರಿಚಯಾತ್ಮಕವಾದ ಪೀಠಿಕೆ, ಟಿಪ್ಪಣಿಗಳು, ಶಬ್ದಕೋಶಗಳಿಂದ ಕೂಡಿ ಸುಂದರವಾಗಿ ಅಚ್ಚಾಗಿರುವ ಗ್ರಂಥ.

'I congratulate you on the good work you have produced' —*Sri D. V. Gundappa.*

'ನೀವು ಕೈಕೊಂಡಿರುವ ಕೆಲಸ ಬಹು ಒಳ್ಳೆಯದು. ಇದಕ್ಕೆ ನಮ್ಮ ಜನರ ಬೆಂಬಲ ದೊರೆಯುವುದೆಂದು ನಾನು ಹಾರೈಸುತ್ತೇನೆ.'

—ಶ್ರೀ ಮಾಸ್ತಿ ವೆಂಕಟೇಶ ಐಯಂಗಾರ್.

"ಕುಮಾರ ಸಂಭವವು ಕಾಳಿದಾಸನ ಮಹಾಕೃತಿಗಳಲ್ಲಿ ಒಂದು; ಅವನ ಕಾವ್ಯಗಳಲ್ಲಿ ಇದೇ ಅತ್ಯುನ್ನತವೆಂದು ಭಾವಿಸುವವರೂ ಉಂಟು. ಅಸಗ ಕವಿ ಕರ್ಣಾಟಕ ಕುಮಾರ ಸಂಭವವೆಂಬ ಕಾವ್ಯವನ್ನು ಹಿಂದೆ ರಚಿಸಿದ್ದನಂತೆ. ಆದರೆ ಅದು ಸಾವಿರ ವರ್ಷದ ಹಿಂದಿನ ಮಾತಾಯಿತು; ಕೃತಿಯೂ ನಷ್ಟವಾಗಿದೆ. ಹೀಗಾಗಿ ಕುಮಾರಸಂಭವದ ಉಪದೇಯವಾದ ಕನ್ನಡ ಪದ್ಯಾನುವಾದವು ನಮಗೆ ಅತ್ಯವಶ್ಯವಾಗಿ ಬೇಕಾಗಿತ್ತು. ಈ ಕೊರತೆಯನ್ನು ಈಗಾಗಲೇ ಕಾಳಿದಾಸನ ಇತರ ಕೆಲವು ಕಾವ್ಯಗಳನ್ನೂ ಸಂಸ್ಕೃತ ಅಮರುಶತಕವನ್ನೂ ಕನ್ನಡಿಸಿ

ಕುಶಲರಾಗಿರುವ ಶ್ರೀ ಪರಮೇಶ್ವರ ಭಟ್ಟರು ಈಗ ಪರಿಹರಿಸಿ ಕನ್ನಡ ಕುಮಾರ ಸಂಭವವನ್ನು ಕನ್ನಡಿಗರಿಗೆ ಓದಿಸಿ ವಿಶೇಷ ಅಭಿನಂದನೆಗೆ ಪಾತ್ರರಾಗಿದ್ದಾರೆ."

—ಪ್ರೊ. ತೀ. ನಂ. ಶ್ರೀಕಂಠಯ್ಯನವರು

'ಪುಸ್ತಕಗಳು ಬಹು ಮುದ್ದಾಗಿ ಅಚ್ಚಾಗಿವೆ. ಒಳಗಿನ ತಿರುಳೂ ಅಷ್ಟೇ ರುಚಿಯಾಗಿದೆ.' —ಶ್ರೀ ಪು. ತಿ. ನರಸಿಂಹಾಚಾರ್ಯರು

'ರಸಿಕರೂ ಕನ್ನಡ ಕಾವ್ಯಪ್ರಿಯರೂ ಮತ್ತು ಸಾಹಿತ್ಯಾಭಿಮಾನಿಗಳೂ ಅಗತ್ಯವಾಗಿ ಓದಬೇಕಾದ ಕಾವ್ಯ ಇದು.' —ಪುಸ್ತಕ ಪ್ರಪಂಚ

'ಮೂಲಕಾವ್ಯವನ್ನು ಸೊಗಸಾಗಿ ಪ್ರತಿಭಾಪೂರ್ಣವಾಗಿ ಅನುವಾದಿಸಿರುವ ಪರಮೇಶ್ವರಭಟ್ಟರು ಅಭಿನಂದನೀಯರು.' —ಚಿತ್ರಗುಪ್ತ

ಪುಟಗಳು ೧೮೦. ಬೆಲೆ: ಸಾಧಾರಣ ಪ್ರತಿ ೨-೮-೦, ಕ್ಯಾಲಿಕೊ ಪ್ರತಿ ೩-೮-೦

# ೨. ಕನ್ನಡ ರಘುವಂಶ

ಕಾಳಿದಾಸಮಹಾಕವಿಯ 'ರಘುವಂಶ' ಮಹಾಕಾವ್ಯದ ಸಂಪೂರ್ಣ ಅನುವಾದ. ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ತಮ್ಮ ಮುನ್ನುಡಿಯಿಂದ ಗ್ರಂಥವನ್ನು ಹರಸಿದ್ದಾರೆ.

ಪುಟಗಳು ೨೮೮ ಬೆಲೆ: ಸಾಧಾರಣಪ್ರತಿ ೪-೦-೦, ಕ್ಯಾಲಿಕೊ ಪ್ರತಿ ೬-೦-೦

# ೩. ಕನ್ನಡ ಮೇಘದೂತ

ಕಾಳಿದಾಸ ಮಹಾಕವಿಯ ಪ್ರಸಿದ್ಧವಾದ 'ಪ್ರೇಮಭಾವಗೀತೆ'ಯ ಕನ್ನಡದ ಅನುವಾದ.

ಬೆಲೆ: ೧-೦-೦

# ೪. ಪ್ರೇಮಾರಾಧನ

ಅಮರುಕವಿಯ ನೂರು ಪ್ರೇಮಗೀತೆಗಳನ್ನು ತಿಳಿಯಾದ ಚೆಲುವಾದ ಕನ್ನಡದಲ್ಲಿ ಶ್ರೀಯುತರು ಅನುವಾದ ಮಾಡಿದ್ದಾರೆ. ಉತ್ತಮವಾದ ಕಾಗದದ ಮೇಲೆ ಗ್ರಂಥ ಸುಂದರವಾಗಿ ಅಚ್ಚಾಗಿದೆ. ರಕ್ಷಾಪತ್ರದ ಚಿತ್ರ ಕಣ್ಮನಗಳಿಗೆಹಬ್ಬವನ್ನುಂಟುಮಾಡುವಂತಿದೆ.

ಪುಟಗಳು ೮೦ ಬೆಲೆ: ಸಾಧಾರಣ ಪ್ರತಿ ೨-೦-೦, ಉತ್ತಮ ಪ್ರತಿ ೩-೦-೦

ಒಂದು ಅಪೂರ್ವ ಅಲಂಕಾರ ಗ್ರಂಥ

ಡಾ. ಕೆ. ಕೃಷ್ಣಮೂರ್ತಿಯವರಿಂದ ಅನುವಾದಿತವಾದ

# ಕನ್ನಡ ಧ್ವನ್ಯಾಲೋಕ

ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳ ಮುನ್ನುಡಿಯಿಂದ ಅಲಂಕೃತವಾಗಿದೆ.

'....ಒಟ್ಟಿನಲ್ಲಿ ಭಾಷಾಂತರವು ಬಹು ತೃಪ್ತಿಕರವಾಗಿರುವುದರಿಂದ ಇದನ್ನು ಓದುವ ಕನ್ನಡಿಗರು ಸಂಸ್ಕೃತದ ಮೂಲವನ್ನು ತಾವು ಓದಲಿಲ್ಲವಲ್ಲಾ ಎಂದು ಚಿಂತಿಸಬೇಕಾದ್ದಿಲ್ಲ.' —ಮುನ್ನುಡಿಯಿಂದ

ಪುಟಗಳು xvi+೧೨೪+೨೦೨, ಬೆಲೆ ಸಾಧಾರಣ ಪ್ರತಿ ೫-೦-೦, ಕ್ಯಾಲಿಕೊ ೮-೦-೦

## ಕೆಲವು ಹೊಸ ಪ್ರಕಟಣೆಗಳು

೧. ಕೆನಿಲ್‌ವರ್ತ್. ಶ್ರೀ ಎಚ್. ಎಲ್. ನಾಗೇಗೌಡ .... ೩-೦-೦
೨. ರಸ ಸರಸ್ವತಿ. ಶ್ರೀ ಪು. ತಿ. ನರಸಿಂಹಾಚಾರ್ .... ೧-೮-೦
೩. ಸಾಹಿತ್ಯೋಪಾಸನೆ. ಪ್ರೊ. ರಂ. ಶ್ರೀ. ಮುಗಳಿ .... ೨-೦-೦
೪. ಗಂಡನ ಜುಲ್ಮಾನೆ ಮತ್ತು ಇತರ ನಾಟಕಗಳು. ಕೈವಾರ ರಾಜಾರಾವ್ .... ೩-೮-೦
೫. ನಳಚರಿತ್ರೆಯ ಸಂಗ್ರಹ. ಎಚ್. ಎಂ. ಶಂಕರನಾರಾಯಣರಾವ್ ೧-೨-೦

## ಅಚ್ಚಿನಲ್ಲಿ

೧. ಕುಮಾರವ್ಯಾಸನ ಶ್ರೀ ಕೃಷ್ಣ
೨. ಭೀಮದುರ್ಯೋಧನೀಯ (ಕುಮಾರವ್ಯಾಸ)
೩. ವಡ್ಡಾರಾಧನೆ. ಪ್ರೊ. ಡಿ. ಎಲ್. ನರಸಿಂಹಾಚಾರ್
೪. ಶಾಂತಿವಾದಿ. ಶ್ರೀ. ಕೊರಟಿ ಶ್ರೀನಿವಾಸರಾವ್

---

ಶ್ರೀ ಎ. ಆರ್. ಕೃಷ್ಣಶಾಸ್ತ್ರೀ, ಎಂ. ಎ.

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಇವರ ಮೂರು ಕೃತಿರತ್ನಗಳು

# ವಚನ ಭಾರತ

(ಎರಡನೆಯ ಮುದ್ರಣ)

ಸಂಸ್ಕೃತ ವ್ಯಾಸಭಾರತದ ಹದಿನೆಂಟು ಪರ್ವಗಳ ಸಾರಸಂಗ್ರಹ. ವಿದ್ವತ್ಪೂರ್ಣವಾದ ಪೀಠಿಕೆ, ಸುಂದರವಾದ ಮುದ್ರಣ, ರಕ್ಷಾಕವಚ ಅನೇಕ ಚಿತ್ರಗಳಿಂದ

ಕೂಡಿದ ಅತ್ಯಂತ ಮನೋಹರವಾದ ಗ್ರಂಥ. ತಿಳಿಯಾದ ಕನ್ನಡದಲ್ಲಿ ಸರಳವಾಗಿ ಆದರೆ ಬಿಗಿಯಾದ ಗದ್ಯದಲ್ಲಿ ಈ ಗ್ರಂಥವನ್ನು ಬರೆದಿದೆ.

"....deeply interesting to kannada readers, particularly to women and children" —*Prof. M. Hiriyanna*

"ಲೇಖಕರ ಅರವತ್ತು ವರ್ಷಗಳ ಸಾರಸ್ವತ ತಪಸ್ಸು ಆರು ತಿಂಗಳಲ್ಲಿ 'ವಚನಭಾರತ' ದಲ್ಲಿ ಫಲಿಸಿ ಬಂದಿದೆ. ಹೊಸಗನ್ನಡ ಗದ್ಯಕ್ಕೆ ಮಕುಟವಾಗಿ ಈಗಿನ ಮತ್ತು ಮುಂದಿನ ಲೇಖಕವರ್ಗಕ್ಕೆ ಆದರ್ಶಪ್ರಾಯವಾಗಿ ಈ ಗ್ರಂಥ ನಿಲ್ಲುತ್ತದೆ.'

—ಪ್ರಬುದ್ಧ ಕರ್ಣಾಟಕ

ಪುಟಗಳು ೫೦೦. ಬೆಲೆ ೬-೮-೦ (ಅಂಚೆವೆಚ್ಚ ಬೇರೆ)

# ಕಥಾಮೃತ

ಸಂಸ್ಕೃತದಲ್ಲಿ ಸೋಮದೇವನು ಬರೆದಿರುವ ಕಥಾಸರಿತ್ಸಾಗರದ ತಿಳಿಗನ್ನಡದ ಗದ್ಯಾನುವಾದ. ಸುಂದರವಾದ ಮುದ್ರಣ. ವಿದ್ವತ್ಪೂರ್ಣವಾದ ಪೀಠಿಕೆ, ರಕ್ಷಾಕವಚ, ಚಿತ್ರಗಳಿಂದ ಕೂಡಿರುವ ಡೆಮ್ಮಿ ೫೭೨ ಪುಟಗಳ ಈ ಕಥಾಕೋಶ ಕನ್ನಡಿಗರ ಕಣ್ಮನಗಳಿಗೆ ಹಬ್ಬದಂತಿದೆ.

"'ಕಥಾಮೃತ' ಬರಿಯ ಕಥಾಸಂಗ್ರಹವೇನಲ್ಲ. ಅದು ಸಾಹಿತ್ಯ ರಸಾಯನವೂ ಹೌದು.

'ಈ ಗ್ರಂಥದ ಪ್ರಕಟನೆ ಯಾರನ್ನಾದರೂ ಮೆಚ್ಚಿಸಿ ತಲೆದೂಗಿಸುವಂತಹುದು. ರಕ್ಷಾಕವಚದ ವಿಷಯದಲ್ಲಿ, ಮುದ್ರಣದ ವಿಷಯದಲ್ಲಿ, ಚಿತ್ರಗಳ ಆಯ್ಕೆಯಲ್ಲಿ, ಹೆಚ್ಚೇನು ಗ್ರಂಥಸಂಗ್ರಹದ ವಿಷಯದಲ್ಲಿ ಲೇಖಕರ ಒಂದು ದೀರ್ಘ ಜೀವನದ, ಸಾಹಿತ್ಯ ತಪಸ್ಸಿನ ಅಭಿರುಚಿ ರಸಿಕತೆಗಳು ವ್ಯಕ್ತವಾಗಿವೆ."

—ಪುಸ್ತಕ ಪ್ರಪಂಚ

ಬೆಲೆ : ೭-೮-೦, (ಅಂಚೆ ವೆಚ್ಚ ಬೇರೆ)

# ಭಾಸಕವಿ

ಭಾಸಕವಿಯ ಹದಿಮೂರು ನಾಟಕಗಳನ್ನು ವಿಮರ್ಶಿಸುವ ಈ ಗ್ರಂಥದ ಮೂರನೆಯ ಮುದ್ರಣದಲ್ಲಿ ಕವಿಯ ಹದಿನಾಲ್ಕನೆಯ ನಾಟಕವಾದ 'ಯಜ್ಞಫಲ'ದ ವಿಮರ್ಶೆ ಇದೆ. ಈ ತೆರನಾದ ವಿಮರ್ಶೆಯ ಗ್ರಂಥ ಕನ್ನಡದಲ್ಲಿ ಮತ್ತೊಂದು ಇಲ್ಲ.

ವಿವರಗಳಿಗೆ ನಮಗೆ ಬರೆಯಿರಿ :

**ಶಾರದಾ ಮಂದಿರ, ೫೭೮, ಕೃಷ್ಣರಾಜವನಂ, ಮೈಸೂರು.**